ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 29 ಬುಧವಾರ 2025

45

ಸಂಪುಟ: 45 | ಸಂಚಿಕೆ: 281 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಮತ್ತೊಮ್ಮೆ ಮಹಾ ಕುಸಿತ; ಅವಶೇಷದಡಿ ಸಿಲುಕಿದ ಕಾರ್ಮಿಕನ ರಕ್ಷಣೆಗೆ ನಿರಂತರ ಕಾರ್ಯಾಚರಣೆ

ಇದೇ ಕಟ್ಟಡ ನೆಲಸಮಗೊಳಿಸುವ ಕಾಮಗಾರಿ ನಿಮಿತ್ತ ವಿದ್ಯಾರ್ಥಿನಿಯರ ಬೇರೆಡೆ ಸ್ಥಳಾಂತರಿಸಿದ್ದರಿಂದ ತಪ್ಪಿದ ಭಾರಿ ಗಂಡಾಂತರ



ಕುಸಿದಿರುವ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ ಮೇಲ್ಛಾವಣಿ.



ಭರದಿಂದ ಸಾಗಿರುವ ಕಾರ್ಮಿಕನ ರಕ್ಷಣಾ ಕಾರ್ಯಾಚರಣೆ

ಮೈಸೂರು, ಜ.28(ಪಿಎಂ)–ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಕಟ್ಟಡ ಮತ್ತೊಮ್ಮೆ ಭಾರೀ ಕುಸಿತವಾಗಿದೆ. ಪರಿಣಾಮ ನೆಲಸಮ ಕಾಮಗಾರಿ ನಿರತ ಕಾರ್ಮಿಕನೊಬ್ಬ ಕಟ್ಟಡದ ಅವಶೇಷದಡಿ ಸಿಲುಕಿಗೊಂಡಿದ್ದು, ಆತನ ರಕ್ಷಣೆಗೆ ಕಾರ್ಯಾಚರಣೆ ನಿರಂತರವಾಗಿ ನಡೆಯುತ್ತಿದೆ. ಈ ಘೋರ ಘಟನೆ ಮಂಗಳವಾರ ಸಂಜೆ ನಡೆದಿದೆ. ಸಂಜೆ 5 ಗಂಟೆ ಸುಮಾರಿಗೆ ದುರಂತ ಸಂಭವಿಸಿದ್ದು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ನೇತೃತ್ವದಲ್ಲಿ ರಕ್ಷಣಾ ಕಾರ್ಯಾಚರಣೆ ತಡರಾತ್ರಿಯಾದರೂ ಮುಂದುವರೆದಿತ್ತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಸದರಿ ಕಾಲೇಜಿನ ಕಟ್ಟಡ ನೆಲಸಮಗೊಳಿಸಿ 54 ಕೋಟಿ ರೂ. ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣಕ್ಕೆ ತೀರ್ಮಾನಿಸಿದ್ದು, ಅದರಂತೆ ಕಟ್ಟಡ ನೆಲಸಮಗೊಳಿಸುವ ಪೂರ್ವಭಾವಿಯಾಗಿ ಕಿಟಕಿ, ಬಾಗಿಲು ಸೇರಿದಂತೆ ಇನ್ನಿತರ ಸಾಮಗ್ರಿಗಳ ತೆರವು ಕೆಲಸ ನಡೆಯುತ್ತಿದ್ದ ವೇಳೆ ಈ ದುರ್ಘಟನೆ ನಡೆದಿದೆ. ಕಾರ್ಯ ನಿರತ ಹಲವು ಕಾರ್ಮಿಕರ ಪೈಕಿ ಮೈಸೂರಿನ ಗೌಸಿಯಾ ನಗರದ ಮೊಹಮ್ಮದ್ ಸದ್ದಾಂ (31), ಕಟ್ಟಡದ ಅವಶೇಷದಡಿ ಸಿಲುಕಿದ್ದು, ಅಗ್ನಿಶಾಮಕ ಇಲಾಖೆ ರಕ್ಷಣಾ ಕಾರ್ಯಾಚರಣೆ ಕೈಗೆತ್ತಿಕೊಂಡಿದೆ. ತರಗತಿಗಳನ್ನು ಇದೇ ಕಟ್ಟಡದ ಪಕ್ಕದಲ್ಲಿರುವ ಹೊಸ ಕಟ್ಟಡಕ್ಕೆ ಸ್ಥಳಾಂತರ ಮಾಡಿ, ನೆಲ ಸಮಗೊಳಿಸುವ ಹಿನ್ನೆಲೆಯಲ್ಲಿ ಸಾಮಗ್ರಿಗಳನ್ನು ತೆರವು ಮಾಡುವ ಕೆಲಸ ನಡೆಯುತ್ತಿದ್ದ ಸಂದರ್ಭದಲ್ಲಿ ಮಂಗಳವಾರ ಸಂಜೆ 5 ಗಂಟೆ ಸುಮಾರಿಗೆ ಕಾಲೇಜಿನ ಕಟ್ಟಡದ ಒಂದು ಭಾಗದ ಮೇಲ್ಛಾವಣಿ ಕುಸಿದಿದೆ. ಈ ವೇಳೆ ಕಟ್ಟಡದ ಮೊದಲ ಅಂತಸ್ತಿನಲ್ಲಿ ಸದ್ದಾಂ ಸಿಲುಕಿದ್ದು, ಮೇಲ್ಛಾವಣಿ ಹಾಗೂ ಗೋಡೆ ಸಹ ಉರುಳಿ ಬಿದ್ದಿರುವ ಹಿನ್ನೆಲೆಯಲ್ಲಿ ಆತ ಮೊದಲ ಅಂತಸ್ತು ಅಥವಾ ನೆಲ ಅಂತಸ್ತು ಸೇರಿದಂತೆ ಯಾವ ಭಾಗದಲ್ಲಿ ಸಿಲುಕಿದ್ದಾನೆಂಬುದು ಖಚಿತವಾಗದೇ ಕಾರ್ಯಾಚರಣೆಗೆ ತೊಡಕಾಗಿದೆ. ಅಗ್ನಿಶಾಮಕ ಅಧಿಕಾರಿ ಮತ್ತು ಸಿಬ್ಬಂದಿ ಯೋಜನೆ ರೂಪಿಸಿ ಕಾರ್ಯಾಚರಣೆಗೆ ಇಳಿದಿದ್ದಾರೆ. ಆತನ ಮೊಬೈಲ್ ರಿಂಗ್ ಆಗುತ್ತಿದ್ದು, ಆತನ ಸದ್ದು ಮಾತ್ರ ಕೇಳಿ ಬರುತ್ತಿಲ್ಲ. ಆತನಿಗೆ ಮದುವೆಯಾಗಿದ್ದು, ಮೂರು ಚಿಕ್ಕ ಮಕ್ಕಳು ಸಹ ಇವೆ. ■9ನೇ ಪುಟಕ್ಕೆ



ಅವಶೇಷದಡಿ ಸಿಲುಕಿರುವ ಸದ್ದಾಂ

ಅಂದು ಇದೇ ಪಾರಂಪರಿಕ ಕಟ್ಟಡದ ಲ್ಯಾಬ್‌ನ ಮೇಲ್ಛಾವಣಿ ಕುಸಿದಿತ್ತು...

2022ರ ಅಕ್ಟೋಬರ್ 21ರಂದು ಸಹ ಇದೇ ಕಾಲೇಜಿನ ಕಟ್ಟಡದ ರಸಾಯನಶಾಸ್ತ್ರ ಲ್ಯಾಬ್‌ನ ಭಾಗ ಕುಸಿದಿತ್ತು. ಆ ಮೂಲಕ ಹಾನಿಗೊಳಗಾದ ಮೈಸೂರಿನ ಪಾರಂಪರಿಕ ಕಟ್ಟಡಗಳ ಸಾಲಿಗೆ ಇದು ಸಹ ಆಗಲೇ ಸೇರ್ಪಡೆಯಾಗಿತ್ತು. ಅಂದು ಬೆಳಗ್ಗೆ 10.42ರ ಸಮಯದಲ್ಲಿ ನಿರಂತರ ಮಳೆಯಿಂದ ಪ್ರಯೋಗಾಲಯ ಹೊಂದಿದ್ದ ಕೊಠಡಿ ಭಾಗದ ಮೇಲ್ಛಾವಣಿ ಕುಸಿದಿತ್ತು. ಅದೃಷ್ಟವಶಾತ್ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಸೇರಿದಂತೆ ಯಾರೂ ಇಲ್ಲದ ಹಿನ್ನೆಲೆಯಲ್ಲಿ ಯಾವುದೇ ಸಾವು ನೋವು ಸಂಭವಿಸಿರಲಿಲ್ಲ.

ಕಾಲೇಜಿಗೆ ರಜೆ...

ಕಾರ್ಯಾಚರಣೆ ನಾಳೆಗೂ ಮುಂದುವರೆಯುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಮಹಾರಾಣಿ ವಿಜ್ಞಾನ ಕಾಲೇಜು ಹಾಗೂ ಕಲಾ ಕಾಲೇಜಿಗೆ ಜ.29ರಂದು ರಜೆ ಘೋಷಣೆ ಮಾಡಲಾಗಿದೆ.

ಬಟ್ಟೆ ತರಲು ಮೊದಲ ಅಂತಸ್ತಿಗೆ ಹೋದಾಗ ದುರ್ಘಟನೆ

ನಾವೆಲ್ಲರೂ ಟೀ ಕುಡಿಯುತ್ತಿದ್ದೆವು. ಆತನೂ ಟೀ ಕುಡಿದು, ಮೇಲೆ ಹೋಗಿ ಬಟ್ಟೆ ತೆಗೆದುಕೊಂಡು ಬರುತ್ತೇನೆಂದು ಹೋದಾಗ ಮೇಲ್ಛಾವಣಿ ಕುಸಿಯಿತು. ಹೀಗಾಗಿ ಆತ ಅಲ್ಲಿಯೇ ಸಿಲುಕಿಕೊಳ್ಳುವಂತಾಯಿತು ಎಂದು ರಕ್ಷಣಾ ಕಾರ್ಯಾಚರಣೆ ವೇಳೆ ಸ್ಥಳದಲ್ಲಿದ್ದ ಕಾರ್ಮಿಕರು ನೊಂದು ನುಡಿದರು. ಈ ಕಟ್ಟಡದಲ್ಲಿ ನೆಲ ಅಂತಸ್ತು ಮತ್ತು ಮೊದಲ ಅಂತಸ್ತು ಎರಡೇ ಇದ್ದು, ಕುಸಿಯಲು ಆರಂಭ ವಾಗುತ್ತಿದ್ದಂತೆ ಕುಡಿಯುತ್ತಿದ್ದ ಟೀ ಸಹ ಅಲ್ಲೇ ಬಿಟ್ಟು ಓಡಿ ಬಂದೆವು. ನಾವೆಲ್ಲರೂ ನಿನ್ನೆಯಿಂದ ಕೆಲಸ ಮಾಡುತ್ತಿದ್ದು, ಇಂದು ಈ ದುರ್ಘಟನೆ ನಡೆಯಿತು ಎಂದು ಕಾರ್ಮಿಕ ಜಬಿ ನೊಂದುಕೊಂಡರು.

ಬೈಕ್‌ಗೆ ಕಾರು ಡಿಕ್ಕಿ: ತಾಯಿ, ಮಗ, ಸೊಸೆ ಸಾವು

● ಚಿಕ್ಕದೇವಮ್ಮನಬೆಟ್ಟದಿಂದ ಊರಿಗೆ ಮರಳುತ್ತಿದ್ದಾಗ ಹಿರೀಕಾಟಿ ಬಳಿ ದುರ್ಘಟನೆ

● ಘಟನೆಯಲ್ಲಿ ಮತ್ತೊಂದು ಬೈಕ್ ಸವಾರನಿಗೂ ತೀವ್ರ ಗಾಯ

ಬೇಗೂರು, ಜ.28–ದೇವಸ್ಥಾನಕ್ಕೆ ಹೋಗಿ, ದರ್ಶನ ಮಾಡಿಕೊಂಡು ಬೈಕ್‌ನಲ್ಲಿ ಊರಿಗೆ ಮರಳುತ್ತಿದ್ದ ಒಂದೇ ಕುಟುಂಬದ ಮೂವರು ಕಾರು ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿರುವ ದುರ್ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಹಿರೀಕಾಟಿ ಬಳಿ ಮಂಗಳವಾರ ರಾತ್ರಿ ಸಂಭವಿಸಿದೆ.

ನಂಜನಗೂಡು ತಾಲೂಕಿನ ಕುಪ್ಪಾಪುರ ಗ್ರಾಮದ ಭಾಗ್ಯ (48), ಅವರ ಮಗ ಶಶಿಧರ್ (30) ಹಾಗೂ ಸೊಸೆ ಸುಚಿತ್ರಾ (25) ಮೃತಪಟ್ಟಿದ್ದು, ಹೊರೆಯಾಲ ಹೆಮ್ಮರಗಾಲ ಗ್ರಾಮದ ರಾಜಣ್ಣ (45) ತೀವ್ರವಾಗಿ ಗಾಯಗೊಂಡಿದ್ದು, ಅವರನ್ನು ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಶಶಿಧರ್ ಹಾಗೂ ಸುಚಿತ್ರಾ ಮದುವೆಯಾಗಿ 9 ತಿಂಗಳು ಆಗಿದ್ದು, ತಾಯಿ, ಮಗ, ಸೊಸೆ ಸರಗೂರು ತಾಲೂಕಿನ ಚಿಕ್ಕದೇವಮ್ಮನ ಬೆಟ್ಟದಲ್ಲಿ ದೇವಿ ದರ್ಶನ ಪಡೆದು, ಪೂಜಾ ಕಾರ್ಯ ಮುಗಿಸಿಕೊಂಡು ■6ನೇ ಪುಟಕ್ಕೆ

ವಿಜೃಂಭಣೆಯ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ರಥೋತ್ಸವ

● ಹರಿದು ಬಂದ ಭಕ್ತ ಸಾಗರ ● ರಥೋತ್ಸವದ ಸೊಬಗು ಕಂಡು ಪುಳಕಿತರಾದ ಭಕ್ತ ಸಮೂಹ

ನಂಜನಗೂಡು, ಜ.28– ಸುತ್ತೂರು ಶ್ರೀ ಶಿವರಾತ್ರಿ ಶಿವಯೋಗಿಗಳ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಮಂಗಳವಾರ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ರಥೋತ್ಸವ ಲಕ್ಷಾಂತರ ಭಕ್ತರ ಹರ್ಷೋದ್ಗಾರದ ನಡುವೆ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವದ ಅಂಗವಾಗಿ ಕರ್ತೃ ಗದ್ದುಗೆಯಲ್ಲಿ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವಮೂರ್ತಿಗೆ ರುದ್ರಾಭಿಷೇಕ ಮತ್ತು ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದ ಬಳಿಕ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ನಂತರ 21 ಕುಶಲ ತೋಪು ಹಾರಿಸುವ ಮೂಲಕ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಮತ್ತು ನಾಡಿನ ವಿವಿಧ ಮಠಾಧೀಶರು ಹಾಗೂ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಬೆಳಗ್ಗೆ 11.10ಕ್ಕೆ ಮಾಜಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವಥ್ ನಾರಾಯಣ, ಶಾಸಕರಾದ ಟಿ.ಎಸ್. ಶ್ರೀವತ್ಸ, ತನ್ವೀರ್ ಸೇಠ್ ರಥದ ಹಗ್ಗ ಹಿಡಿದು ಎಳೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಶ್ರೀಕರ್ತೃ ಗದ್ದುಗೆ ಮುಂಭಾಗದಿಂದ ಹೊರಟ ರಥೋತ್ಸವ ಸುತ್ತೂರಿನ ರಾಜಬೀದಿಗಳಲ್ಲಿ ಸಾಗಿ ದೊಡ್ಡಮ್ಮತಾಯಿ ದೇವಸ್ಥಾನದ ವೃತ್ತ ತಲುಪಿ ನಂತರ ಸ್ವಸ್ಥಾನ ತಲುಪಿತು.

ದೊಡ್ಡ ರಥ ಮತ್ತು ರೋಬೋ ಆನೆ ಮೇಲೆ ಕೃತಕ ಅಂಬಾರಿ ಇರಿಸಿ ಅಂಬಾರಿ ಒಳಗೆ ಶಿವರಾತ್ರೀಶ್ವರರ ಭಾವಚಿತ್ರ ಪ್ರತಿಷ್ಠಾಪಿಸಿ, ಫಲಪುಷ್ಪ ಅಲಂಕಾರ ಹಾಗೂ ವರ್ಣಾಲಂಕಾರ ಮಾಡಿ ಬಟ್ಟೆಗಳಿಂದ ರಥವನ್ನು ಸಿಂಗರಿಸಲಾಗಿತ್ತು. ದೊಡ್ಡರಥವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದಾಗ ರಸ್ತೆಯ ಎರಡೂ ಬದಿಗಳಲ್ಲಿ ■6ನೇ ಪುಟಕ್ಕೆ



ಸುತ್ತೂರಲ್ಲಿ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಮಹಿಳೆಯರ ಏಳ್ಗೆಗಾಗಿ ಸಾಲ ಸೌಲಭ್ಯ



ಮೈಸೂರು, ಜ. 28–ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಮಹಿಳೆಯರು ಸಾಲ ಸೌಲಭ್ಯವನ್ನು ಸರಿಯಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ತಿಳಿಸಿದರು.

ಈ ಯೋಜನೆಯಡಿ 16% ಬಡ್ಡಿದರದಲ್ಲಿ ಸಾಲವನ್ನು ಒದಗಿಸುತ್ತಿದ್ದು, ಇದು ಮಿತಿಯಲ್ಲಿಯೇ ಇದೆ. ಪ್ರಮುಖವಾಗಿ, ಯಾವುದೇ ಜಾಮೀನು ಇಲ್ಲದೆ ಸಾಲ ನೀಡುವ ಈ ಯೋಜನೆ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆಯ ದಾರಿ ತೆರೆದಿದೆ. ಇಂತಹ ಯೋಜನೆಗಳು ಜನತೆಯ ಬದುಕು ಸುಧಾರಿಸಲು ಸಹಾಯ ಮಾಡುತ್ತವೆ. ಆದರೆ ಖಾಸಗಿ ಮೈಕ್ರೋಫೈನಾನ್ಸ್ ಸಂಸ್ಥೆಗಳ ದಂಡಾರ್ಗ ಹಾ ವಸೂಲಿ ಮತ್ತು ಹೆಚ್ಚಿನ ಬಡ್ಡಿ ದರಗಳು ಜನರ ಮೇಲೆ ಬೃಹತ್ ಆರ್ಥಿಕ ಒತ್ತಡವನ್ನು ತಂದಿವೆ. ಇವು ಬಡ ಜನರ ಬದುಕನ್ನು ಹಾಳುಮಾಡುತ್ತಿದ್ದು, ಸರ್ಕಾರವು ಇವುಗಳ ಮೇಲೆ ಕಟ್ಟುನಿಟ್ಟಿನ ನಿಯಂತ್ರಣವನ್ನು ಹೇರಬೇಕಾಗಿದೆ. ಧರ್ಮಸ್ಥಳ ಯೋಜನೆಯಂತಹ ಉತ್ತಮ ಉದ್ದೇಶಗಳುಳ್ಳ ಸಂಸ್ಥೆಗಳು ಸಮಾಜದಲ್ಲಿ ನಂಬಿಕೆ ಮತ್ತು ನೆರವನ್ನು ಒದಗಿಸುತ್ತಿರುವುದರಿಂದ ಇದಕ್ಕೆ ಪ್ರೋತ್ಸಾಹ ನೀಡಲು ನಾವು ಎಲ್ಲರೂ ಮುಂದಾಗಬೇಕು ಎಂದರು.

ಯೋಗದ ಕುರಿತಾದ ಥೆರಪ್ಯೂಟಿಕ್ ಅಪ್ರೋಚ್ ಟು ಯೋಗ ಪುಸ್ತಕ ಬಿಡುಗಡೆ



ಲೇಖಕ ಸುದೇಶ್ ಚಾಂದ್ ರಚಿತ 'ಥೆರಪ್ಯೂಟಿಕ್ ಅಪ್ರೋಚ್ ಟು ಯೋಗ (ಭಾಗ–2)' ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು,ಜ.28(ಎಸ್‌ಪಿಎನ್)– ಇಲ್ಲಿನ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಶ್ರೀ ಉಪನಿಷತ್ ಯೋಗ ಕೇಂದ್ರದ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಯೋಗಪಟು, ಲೇಖಕ ಸುದೇಶ್ ಚಾಂದ್ ರಚಿತ 'ಥೆರಪ್ಯೂಟಿಕ್ ಅಪ್ರೋಚ್ ಟು ಯೋಗ (ಭಾಗ–2)' ಪುಸ್ತಕವನ್ನು ಮೈಸೂರು ಯಾದವಗಿರಿಯ ಶ್ರೀರಾಮಕೃಷ್ಣಾಶ್ರಮದ ಸ್ವಾಮಿ ಮುಕ್ತಿದಾನಂದ ಜೀ ಮಹಾರಾಜ್ ಸೋಮವಾರ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಥೆರಪ್ಯೂಟಿಕ್ ಅಪ್ರೋಚ್ ಟು ಯೋಗ (ಭಾಗ–1) ಈಗಾಗಲೇ ಮುದ್ರಣ ಕಂಡು ಅನೇಕ ಜನರನ್ನು ತಲುಪಿದೆ. ಮುಂದುವರೆದ ಭಾಗವಾಗಿ ಅಪ್ರೋಚ್ ಟು ಯೋಗ (ಭಾಗ–2) ಪುಸ್ತಕ 7 ರೋಗಗಳಿಗೆ ಥೆರಪಿಗೆ ಪ್ರಯೋಜನವಾಗುವ ಲೇಖನಗಳನ್ನು ಲೇಖಕ ಸುದೇಶ್ ಚಾಂದ್ ಅವರು ವೈಜ್ಞಾನಿಕವಾಗಿ ಪ್ರಕಟಿಸಿದ್ದು, ಇದರ ಬಗ್ಗೆ ವೈದ್ಯರೂ ಮೆಚ್ಚುಗೆ ವ್ಯಕ್ತಪಡಿಸಿರುವುದು ಸಂತೋಷದ ಸಂಗತಿ ಎಂದರು.

ಇಂದು ಇಡೀ ಜಗತ್ತು ಒತ್ತಡದ ಜೀವನ ಶೈಲಿಯಿಂದ ಬಳಲುತ್ತಿದೆ. ಇದರಿಂದ ಮುಕ್ತಿ ಹೊಂದಲು ಯೋಗ ಉತ್ತಮ ಥೆರಪಿ ಚಿಕಿತ್ಸೆ. ಪಾಶ್ಚಿಮಾತ್ಯ ದೇಶಗಳಲ್ಲಿ ಯೋಗ ಸಾಕಷ್ಟು ಪ್ರಚಾರ ಪಡೆಯುತ್ತಿದೆ. ಎಲ್ಲರೂ ಯೋಗದ ಮೂಲಕ ಆರೋಗ್ಯ ಕಾಪಾಡಿಕೊಳ್ಳಲು ಮುಂದಾಗುತ್ತಿರುವುದು ಸಂತೋಷದ ಸಂಗತಿ. ಹಾಗಾಗಿ ಈ ಪುಸ್ತಕವನ್ನು ಶಾಲಾ–ಕಾಲೇಜುಗಳಿಗೆ ಪಠ್ಯವನ್ನಾಗಿ ಅಳವಡಿಸಲು ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಉನ್ನತ ಶಿಕ್ಷಣ ಇಲಾಖೆ ಚಿಂತಿಸಬೇಕು ಎಂದು ಆಗ್ರಹಿಸಿದರು.

ಯೋಗಾಚಾರ್ಯ ಡಿ.ಶ್ರೀಹರಿ ಮಾತನಾಡಿ, ಇಂದಿನ ಯುವ ಪೀಳಿಗೆ ಸದಾ ಒತ್ತಡದಲ್ಲೇ ಜೀವನ ಕಳೆಯುವ ಸನ್ನಿವೇಶ ಎದುರಾಗಿದೆ. ಇದರಿಂದ ಮುಕ್ತಿ ಪಡೆಯಲು ಯೋಗದಲ್ಲಿ ತೊಡಗಿಸಿಕೊಳ್ಳುವುದು ಉತ್ತಮ ಎಂದ ಅವರು, ಯೋಗದಿಂದ ಒತ್ತಡರಹಿತ ಜೀವನ ರೂಪಿಸಿಕೊಳ್ಳಲು ಅವಕಾಶವಿದೆ ಎಂದು ಸಲಹೆ ನೀಡಿದರು.


ವೇದಿಕೆಯಲ್ಲಿ ಜೆಎಸ್‌ಎಸ್ ದಂತ ಕಾಲೇಜು ಬಾಯಿರೋಗಶಾಸ್ತ್ರ ಮತ್ತು ಮೈಕ್ರೋ ಬಯಾಲಜಿ ವಿಭಾಗದ ಪ್ರಾಧ್ಯಾಪಕಿ ಡಾ.ಉಷಾ ಹೆಗಡೆ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮಿ ನಾರಾಯಣ ಶೆಣೈ, ಅಮೇರಿಕ ಕನ್ನಡ ಸಂಘದ ಮಾಜಿ ಅಧ್ಯಕ್ಷೆ ಸವಿತಾ ರವಿಶಂಕರ್ ಉಪಸ್ಥಿತರಿದ್ದರು.

ಜ.31, 'ನೋಡಿದವರು ಏನಂತಾರೆ' ಚಿತ್ರ ಬಿಡುಗಡೆ

ಮೈಸೂರು, ಜ.28(ಜಿಎ)– 'ನೋಡಿದವರು ಏನಂತಾರೆ' ಚಲನಚಿತ್ರ ಇದೇ ಜ.31ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ನಾಯಕ ನಟ ನವೀನ್ ಶಂಕರ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನೋಡಿದವರು ಏನಂತಾರೆ' ಚಿತ್ರವು ಇತರರು ಅಂದುಕೊಳ್ಳುವ ರೀತಿಯಲ್ಲಿ ಬದುಕಬೇಕೆಂದು ಬಹಳಷ್ಟು ಜನರು ಜೀವನ ಸಾಗಿಸುತ್ತಾರೆ. ಇದೇ ರೀತಿ ಅಭಿಪ್ರಾಯ ಎಲ್ಲರಲ್ಲೂ ಇದ್ದರೂ ಅಂತಹ ವ್ಯಕ್ತಿಗಳ ಜೀವನದ ಒಳಹೊಕ್ಕು ನೋಡಿದಾಗ ಅಷ್ಟೇನೂ ಸರಿಯಾಗಿದೆ ಎನಿಸದು. ಇಂತಹ ವ್ಯಕ್ತಿಯೊಬ್ಬ ತನ್ನನ್ನು ತಾನು ಕಂಡುಕೊಳ್ಳಲು ನಡೆಸುವ ಹೋರಾಟದ ಕಥೆಯುಳ್ಳ ವಿಭಿನ್ನ ಅಭಿರುಚಿಯ ಚಿತ್ರವಾಗಿದೆ ಎಂದರು. ತಮ್ಮ ಜೀವನವನ್ನೇ ಬೇರೆಯವರಿಗಾಗಿ ಕಟ್ಟಿಕೊಳ್ಳುವವರೇ ಹೆಚ್ಚು ಆದರೆ ಇದನ್ನು ಅರಿತ ಬಳಿಕ ತಮಗಾಗಿ ಜೀವನ ಸಾಗಿಸುವ ನಾಯಕನ ಕಥೆ ಈ ಚಿತ್ರದಲ್ಲಿದೆ.


ನಿಧನ

ಆರ್.ತ್ಯಾಗರಾಜ್



ಮೈಸೂರು, ಜ. 28–ಕೇಂದ್ರೀಯ ರೇಷ್ಮೆ ಮಂಡಳಿಯ ನಿವೃತ್ತ ಉದ್ಯೋಗಿ ಹಾಗೂ ಟಿ.ಕೆ. ಬಡಾವಣೆ ನಿವಾಸಿ ಆರ್.ತ್ಯಾಗರಾಜ್ (84) ಅವರು ಸೋಮವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ವಿ.ಜವರೇಗೌಡ




ಪಿರಿಯಾಪಟ್ಟಣದ ವಕೀಲ, ಇಂಡೋ–ಟಿಬೆಟಿಯನ್ ಫ್ರೆಂಡ್ ಶಿಪ್ ಸೊಸೈಟಿ ಅಧ್ಯಕ್ಷರು ಹಾಗೂ ತಂಬಾಕು ಮಂಡಳಿ ಉಪಾಧ್ಯಕ್ಷರೂ ಆದ ಪಿರಿಯಾಪಟ್ಟಣ ನಿವಾಸಿ ಬಿ.ವಿ.ಜವರೇಗೌಡ (67) ಸೋಮವಾರ ಹೃದಯಾಘಾತದಿಂದ ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನಿಧನರಾದರು. ಇವರು ಪ್ರಜಾವಾಣಿ ತಾಲೂಕು ಮಾಜಿ ವರದಿಗಾರರಾಗಿದ್ದು, ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದರು. ಇವರು ಪತ್ನಿ ಶೀಲಾ, ಇಬ್ಬರು ಪುತ್ರರು, ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಪತ್ನಿ ಹಾಗೂ ಮಕ್ಕಳು ವಿದೇಶದಿಂದ ವಾಪಸ್ಸಾದ ನಂತರ ನಾಳೆ(ಬುಧವಾರ) ಮಧ್ಯಾಹ್ನ 3ರಿಂದ ಸಂಜೆ 6 ಗಂಟೆಗೆ ಪಿರಿಯಾಪಟ್ಟಣದ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುವುದು, ನಂತರ ಸಂಜೆ 6ಕ್ಕೆ ಅವರ ಊರಾದ ಭುವನಹಳ್ಳಿಗೆ ಪಾರ್ಥಿವ ಶರೀರ ಕೊಂಡೊಯ್ದು, ಗುರುವಾರ (ಜ.30) ಪೂರ್ವಾಹ್ನ 11.30ಕ್ಕೆ ಅವರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಡಾ.ಟಿ.ಶ್ರೀನಿವಾಸ್



ಮೈಸೂರು: ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಶಾಸ್ತ್ರ ನಿವೃತ್ತ ಪ್ರಾಧ್ಯಾಪಕ ಹಾಗೂ ವಿಭಾಗದ ಮುಖ್ಯಸ್ಥ ಡಾ.ಟಿ.ಶ್ರೀನಿವಾಸ್ (73) ಅವರು ಅಲ್ಪ ಕಾಲದ ಅಸ್ವಸ್ಥತೆ ನಂತರ ಸೋಮವಾರ ನಿಧನರಾದರು. ಇವರು ಕನಕದಾಸನಗರ ನಿವಾಸಿಯಾಗಿದ್ದರು. ಇವರು ಪತ್ನಿ ಇಂದುಮತಿ, ಇಬ್ಬರು ಪುತ್ರರು, ಸಹೋದರರು ಹಾಗೂ ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಬುಧವಾರ) ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೃಂದಾದೇವಿ



ಮೈಸೂರಿನ ಭೋಗಾಧಿಯ ಎರಡನೇ ಹಂತದ ಪ್ರಶಾಂತ ನಗರದ ನಿವಾಸಿ, ದಿವಂಗತ ವಿಷಕಂಠರವರ ಧರ್ಮಪತ್ನಿ ಬೃಂದಾದೇವಿ(88), ವಯೋಸಹಜ ಅನಾರೋಗ್ಯದಿಂದ ಭಾನುವಾರ ಬೆಳಿಗ್ಗೆ ನಿಧನರಾದರು, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂದು–ಬಳಗವನ್ನು ಆಗಲಿದ್ದಾರೆ. ಅವರ ಅಂತ್ಯಕ್ರಿಯೆ ಭಾನುವಾರ ಸಂಜೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

ಶಿವಪ್ಪ

ಹೆಚ್.ಡಿ.ಕೋಟೆ, ಜ.28– ತಾಲೂಕಿನ ನೇರಳೆ ಗ್ರಾಮದ ನಿವಾಸಿ ಶಿವಪ್ಪ(55) ಸೋಮವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಮೈಸೂರಿಗೆ ಶ್ರೀಮಂತ ಇತಿಹಾಸವಿದೆ

ಮೈಸೂರು ವಿವಿ ಕುಲಸಚಿವ ಪ್ರೊ.ನಾಗರಾಜ್ ಅಭಿಮತ



ಮೈಸೂರಿನ ಮಾನಸ ಗಂಗೋತ್ರಿಯ ಇತಿಹಾಸ ವಿಭಾಗದಲ್ಲಿ ಮಂಗಳವಾರ ಡಿ.ಎಸ್.ಅಚ್ಚುತರಾವ್ ದತ್ತಿ ಉಪನ್ಯಾಸ ನಡೆಯಿತು.

ಮೈಸೂರು, ಜ.28(ಬಿಎಲ್‌ಯು)– ಪಾರಂಪರಿಕ ಶೈಲಿಯ ಅರಮನೆಗಳ ನೆಲೆಯಾದ ಮೈಸೂರಿಗೆ ಶ್ರೀಮಂತ ಇತಿಹಾಸವಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ) ಪ್ರೊ.ಎನ್. ನಾಗರಾಜ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಇತಿಹಾಸ ವಿಭಾಗದಲ್ಲಿ ಇಂದು ಡಿ.ಎಸ್. ಅಚ್ಚುತರಾವ್ ದತ್ತಿ ವತಿಯಿಂದ ಆಯೋಜಿಸಿದ್ದ ಮೈಸೂರಿನ ವಸಾಹತುಪೂರ್ವ ಮತ್ತು ವಸಾಹತುಶಾಹಿ ಅವಧಿ: ರಾಜ್ಯ, ಸಮಾಜ ಮತ್ತು ಆರ್ಥಿಕತೆ ಕುರಿತ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇತಿಹಾಸದ ಬಗ್ಗೆ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಮೈಸೂರಿನ ಇತಿಹಾಸ ಬಹಳಷ್ಟು ಅಭ್ಯುದಯ ವಿಚಾರಗಳ ಮೇಲೆ ಬೆಳಕು ಚೆಲ್ಲಲಿದೆ ಎಂದರು. ಮೈಸೂರಿನ ಇತಿಹಾಸ ಬಹಳಷ್ಟು ಪ್ರಥಮಗಳಿಗೆ ಸಾಕ್ಷಿಯಾಗಿದ್ದು, ಏಷ್ಯಾದಲ್ಲೆ ಮೊದಲ ಬಾರಿಗೆ ವಿದ್ಯುತ್ ಉತ್ಪಾದನೆ ಇದಕ್ಕೆ ಸ್ಪಷ್ಟ ನಿದರ್ಶನ ಎಂದು ಹೇಳಿದರು.

ಮೈಸೂರಿನಲ್ಲಿ ಬಹಳಷ್ಟು ಅರಮನೆಗಳಿದ್ದು, ಅವುಗಳನ್ನು ಸಂರಕ್ಷಿಸಬೇಕಿದೆ. ಈ ಹಿನ್ನೆಲೆ ಮಾನಸ ಗಂಗೋತ್ರಿಯ ಜಯಲಕ್ಷ್ಮಿ ಅರಮನೆಯನ್ನು ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ನವೀಕರಣ ಮಾಡಲಾಗುತ್ತಿದೆ ಎಂದು ಪ್ರೊ.ನಾಗರಾಜ್ ತಿಳಿಸಿದರು.

ವಿಶ್ರಾಂತ ಪ್ರಾಧ್ಯಾಪಕರಾದ ಡಿ.ಎ. ಪ್ರಸನ್ನ, ಪ್ರೊ.ಎ.ಸತ್ಯನಾರಾಯಣ, ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ವೈ.ಹೆಚ್.ನಾಯಕವಾಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ವೀರಾಂಜನೇಯಸ್ವಾಮಿ 12ನೇ ಪ್ರತಿಷ್ಠಾ ವರ್ಧಂತಿ ಮಹೋತ್ಸವ

ಮೈಸೂರು, ಜ. 28 –ಮೈಸೂರಿನ ಶ್ರೀ ವೀರಾಂಜನೇಯಸ್ವಾಮಿ ಟ್ರಸ್ಟ್ ವತಿಯಿಂದ ಫೆ. 1 ರಂದು ಬೆಳಗ್ಗೆ 8.30 ರಿಂದ ಶ್ರೀ ವೀರಾಂಜನೇಯಸ್ವಾಮಿ 12ನೇ ಪ್ರತಿಷ್ಠಾ ವರ್ಧಂತಿ ಮಹೋತ್ಸವದ ಪ್ರಯುಕ್ತ ಪ್ರಾರ್ಥನೆ, ಪುಣ್ಯಾಹ, ಸಂಕಲ್ಪ, ಕಲಶಾರಾಧನೆ, ಮಧು ಅಭಿಷೇಕ ಹಾಗೂ ಹೋಮಾದಿಗಳು ನಡೆಯಲಿವೆ. ಬೆಳಗ್ಗೆ 11.30 ಗಂಟೆಗೆ ಪೂರ್ಣಾಹುತಿಯೊಂದಿಗೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ ನೆರವೇರಲಿದೆ. ಫೆ. 1 ರಂದು ಸಂಜೆ 6 ರಿಂದ 8 ರವರೆಗೆ ಸದ್ವಿದ್ಯಾ ಪರಿವಾರ ವೃಂದದವರಿಂದ ಸಂಗೀತ ಕಾರ್ಯಕ್ರಮ, ಫೆ. 2 ರಂದು ಕು. ಶ್ರೀ ಲಲಿತಾ ಉಳಿಯಾರು ಅವರಿಂದ ಹರಿಕಥಾ ಕಾಲಕ್ಷೇಪ (ಸುಂದರಕಾಂಡ) ಏರ್ಪಡಿಸಲಾಗಿದೆ.

ಪ್ರೊ.ಎಚ್.ಸೋಮಶೇಖರಪ್ಪ ಪ್ರಾಮಾಣಿಕತೆ, ಮಾನವೀಯತೆಯ ಪ್ರತೀಕವಾಗಿದ್ದರು

ಸಂತಾಪ ಸೂಚಕ ಸಭೆಯಲ್ಲಿ ಪ್ರಭಾರ ಪ್ರಾಂಶುಪಾಲ ಪ್ರೊ.ಕೆ.ಅಜಯಕುಮಾರ್



ಪ್ರೊ. ಎಚ್.ಸೋಮಶೇಖರಪ್ಪ ಸಂತಾಪ ಸೂಚಕ ಸಭೆ ನಡೆಯಿತು.

ಮೈಸೂರು, ಜ. 28– ಯುವರಾಜ ಕಾಲೇಜು ಪ್ರಾಂಶುಪಾಲರಾಗಿದ್ದ ಪ್ರೊ.ಎಚ್.ಸೋಮಶೇಖರಪ್ಪ ಅವರು ಶನಿವಾರ ಬೆಳಿಗ್ಗೆ ತೀವ್ರ ಹೃದಯಾಘಾತದಿಂದ ನಿಧನರಾದ ಹಿನ್ನೆಲೆಯಲ್ಲಿ ಯುವರಾಜ ಕಾಲೇಜಿನ ಶ್ರೀ ಜಯ ಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ಸಂತಾಪ ಸೂಚಕ ಸಭೆಯನ್ನು ಏರ್ಪಡಿಸಲಾಗಿತ್ತು.

ಕಾಲೇಜಿನ ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು ಹಾಗೂ ಅವರ ಸ್ನೇಹಿತರು ಸೇರಿದ್ದ ಸಭೆಯಲ್ಲಿ ಯುವರಾಜ ಕಾಲೇಜು ಆಡಳಿತಾಧಿಕಾರಿ ಹಾಗೂ ಪ್ರಭಾರ ಪ್ರಾಂಶುಪಾಲ ಪ್ರೊ. ಅಜಯಕುಮಾರ್ ಮಾತನಾಡಿ, ಯುವರಾಜ ಕಾಲೇಜು ಭೌತಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ, ಕಾಲೇಜಿನ ಆಡಳಿತಾಧಿಕಾರಿಗಳಾಗಿ ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮಹಾರಾಜ, ಪ್ರಸ್ತುತ ಯುವರಾಜ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಹೀಗೆ ಮೂವತ್ತೂರು ವರ್ಷಗಳಿಂದ ಅತ್ಯಂತ ಪ್ರಾಮಾಣಿಕವಾಗಿ, ಉತ್ತಮ ಬೋಧಕರಾಗಿ, ಕರ್ತವ್ಯನಿಷ್ಠ ಆಡಳಿತಗಾರರಾಗಿ ಸೇವೆ ಸಲ್ಲಿಸಿದ್ದರು. ಇಂತಹ ವಿಶಿಷ್ಟ ವ್ಯಕ್ತಿತ್ವದ ಪ್ರೊ.ಸೋಮಶೇಖರಪ್ಪ ಅವರು ಹಠಾತ್ ಸಾವಿಗೀಡಾಗಿದ್ದು ಯುವರಾಜ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಕ್ಕೆ ತುಂಬಲಾರದ ನಷ್ಟ ಎಂದು ಕಂಬನಿ ಮಿಡಿದರು.

ಜೀವರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಜೆ.ರಾಜೇಶ್ ಮಾತನಾಡಿ, ಚಿತ್ರದುರ್ಗ ಜಿಲ್ಲೆ ಸಿದ್ದವನಹಳ್ಳಿ ಗ್ರಾಮದ ಕಡುಬಡತನದ ಕುಟುಂಬದಲ್ಲಿ ಹುಟ್ಟಿ ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯಲ್ಲಿ ಎಂ.ಎ ಹಾಗೂ ಪಿಎಚ್.ಡಿ ಪದವಿ ಪಡೆದು, ಬಳಿಕ ಯುವರಾಜ ಕಾಲೇಜಿನ ಅಧ್ಯಾಪಕರಾಗಿ ವಿದ್ಯಾರ್ಥಿಗಳ ಮೆಚ್ಚಿನ ಬೋಧಕರಾಗಿದ್ದ ಪ್ರೊ. ಸೋಮಶೇಖರಪ್ಪ, ಸರಳ–ಸಜ್ಜನರಾಗಿದ್ದರು. ಅವಿವಾಹಿತರಾಗಿಯೇ ಬದುಕು ಸಾಗಿಸಿದ್ದ ಅವರು ವಿಶ್ವವಿದ್ಯಾನಿಲಯ ಶೈಕ್ಷಣಿಕ ವಲಯಕ್ಕೆ ತಮ್ಮದೇ ಆದ ಅಮೂಲ್ಯವಾದ ಕೊಡುಗೆ ನೀಡಿದ್ದಾರೆ ಎಂದರು. ಸಭೆಯಲ್ಲಿ ಪ್ರೊ. ಎಸ್. ಮಹದೇವಮೂರ್ತಿ, ಪ್ರೊ. ಜಿ.ಎಚ್. ನಾಗರಾಜು, ಪ್ರೊ. ಬಿ.ಎಂ.ವೆಂಕಟೇಶ್, ಪ್ರೊ.ನಾಗೇಶ್‌ಬಾಬು, ಪ್ರೊ. ಬಿ.ಸಿ.ಮಂಜುನಾಥ್, ಪ್ರೊ. ಜಿ.ಕೃಷ್ಣಮೂರ್ತಿ, ಪ್ರೊ. ಶರ್ವಾಣಿ ಮಾತನಾಡಿದರು.

ಚಂಪಕ ಅಕಾಡೆಮಿಯಲ್ಲಿ ರಾಷ್ಟ್ರೀಯ ಕಲಾ ಉತ್ಸವ




ಮೈಸೂರು, ಜ.28–ಚಂಪಕ ರಾಷ್ಟ್ರೀಯ ಕಲಾ ಉತ್ಸವ ಭಾರತೀಯ ಕಲೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸಲು ಮೈಸೂರಿನ ಚಂಪಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಆಶ್ರಯದಲ್ಲಿ ಸರಣಿಯ 'ಪುಷ್ಪ' ಆವೃತ್ತಿಯು ರಾಮಕೃಷ್ಣನಗರದ ಚಂಪಕ ಅಕಾಡೆಮಿ ಆವರಣದಲ್ಲಿ ಭರತನಾಟ್ಯ ಪ್ರದರ್ಶನಗಳೊಂದಿಗೆ ನಡೆಯಿತು.

ಮೈಸೂರಿನ ಲಾಸ್ಯರಂಜನ ನೃತ್ಯ ಶಾಲೆ ಸಂಸ್ಥಾಪಕಿ ಮತ್ತು ನಿರ್ದೇಶಕಿ ವಿದುಷಿ ಜ್ಯೋತಿ ಎನ್ ಹೆಗ್ಡೆ ಅವರ ಶಿಷ್ಯರೊಂದಿಗೆ ಭರತನಾಟ್ಯ ಪ್ರದರ್ಶನದೊಂದಿಗೆ ಪ್ರಾರಂಭವಾಯಿತು. ಅವರು ರಾಮ "ರಾಮನೆಂಥ ಚೆಲುವ' ಸುಂದರವಾದ ನೃತ್ಯ ಸಂಯೋಜನೆಯನ್ನು ಪ್ರದರ್ಶಿಸಿದರು. ನಂತರ ಅವರ ಶಿಷ್ಯರು ಕೃಷ್ಣನ ಮೇಲಿನ ಸಂಯೋಜನೆಗಳಿಗೆ ವರ್ಣಮಯವಾಗಿ ನೃತ್ಯ ಮಾಡಿದರು. ನರ್ತಕರ ಆಕರ್ಷಕ ವೇಷಭೂಷಣ ಮತ್ತು ಅಭಿವ್ಯಕ್ತಿ ಆಕರ್ಷಕವಾಗಿತ್ತು.

ಕರ್ನಾಟಕದ ಕಲಾತಿಲಕ ಗುರು ಡಾ. ವಸುಂಧರಾ ದೊರೆಸ್ವಾಮಿ ಶಿಷ್ಯರು ಮುಂದಿನ ಪ್ರದರ್ಶನವನ್ನು ತೋಡಯಂ, ನಂತರ ನಟೇಶ ಕೌತ್ವಂ ಮತ್ತು ಷಣ್ಮುಖ ಪ್ರಿಯ ರಾಗದಲ್ಲಿ ವಿಷ್ಣು ಸ್ತುತಿಯನ್ನು ಸುಂದರವಾಗಿ ರಚಿಸಿದರು. ನರ್ತಕರು ನರಸಿಂಹ ಮತ್ತು ವಾಮನ ಅವತಾರಗಳನ್ನು ದೇವರನಾಮದಲ್ಲಿ ಸರಾಗವಾಗಿ ಮತ್ತು ಸೂಕ್ಷ್ಮವಾಗಿ ಚಿತ್ರಿಸಿದರು ಮತ್ತು ರಾಮ ಮಂಗಲಂನೊಂದಿಗೆ ಮುಕ್ತಾಯಗೊಳಿಸಿದರು. ಇನ್ಫೋಫೈನ್ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್ ಅಧ್ಯಕ್ಷ ಬಿ.ಕೆ. ಅಚ್ಯುತ ಮತ್ತು ಕರ್ನಾಟಕ ಕಲಾತಿಲಕ ಗುರು ಡಾ. ವಸುಂಧರಾ ದೊರೆಸ್ವಾಮಿ ಸಮಾರಂಭದ ಅತಿಥಿಗಳಾಗಿದ್ದರು. ಬಿ.ಕೆ. ಅಚ್ಯುತ ಎಲ್ಲಾ ಪ್ರದರ್ಶಕರಿಗೆ ಮೆಚ್ಚುಗೆಯ ಪ್ರಮಾಣಪತ್ರವನ್ನು ವಿತರಿಸಿದರು. ಭರತನಾಟ್ಯವನ್ನು ಕಲಿಯುವಲ್ಲಿ ಅಗತ್ಯವಿರುವ ಸಮರ್ಪಣೆ ಮತ್ತು ನೃತ್ಯಗಾರರಿಗೆ ಆಧ್ಯಾತ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸ್ವಯಂ ಗುರಿಗಳನ್ನು ಸಾಧಿಸುವಲ್ಲಿ ಅದು ಹೊಂದಿರುವ ಪ್ರಯೋಜನಗಳ ಬಗ್ಗೆ ಮಾತನಾಡಿದರು. ಗುರು ಡಾ. ವಸುಂಧರಾ ದೊರೆಸ್ವಾಮಿ ಅವರು ಪ್ರತಿ ತಿಂಗಳು ಉತ್ಸವವನ್ನು ಆಯೋಜಿಸುವಲ್ಲಿ ಮತ್ತು ವಿವಿಧ ಕಲಾವಿದರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶವನ್ನು ಒದಗಿಸುವಲ್ಲಿ ಡಾ. ನಾಗಲಕ್ಷ್ಮಿ ನಾಗರಾಜನ್ ಮತ್ತು ನಾಗರಾಜನ್ ಅವರ ಪ್ರಯತ್ನಗಳನ್ನು ಶ್ಲಾಘಿಸಿದರು. ಟ್ರಸ್ಟಿಗಳಾದ ನಾಗರಾಜನ್ ಶ್ರೀನಿವಾಸನ್ ಮತ್ತು ದೀಪಾಮಣಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.01.2025 ಬುಧವಾರ, ಮಳೆ ನಕ್ಷತ್ರ: ಶ್ರವಣ 24.01.2025 ರಿಂದ 05.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತಪಿತ್ತ), ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಶ್ವಾಸ (ಉಬ್ಬಸ, ದಮ್ಮು ಕಾಯಿಲೆ) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ :** ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಸಮಾವೇಶ, ಸಮ್ಮುಖ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನೀಲಕಂಠದ ಶ್ರೀ ಸಿದ್ದಮಲ್ಲಸ್ವಾಮಿಗಳು, ಹಲವಾರ ಮಠದ ಶ್ರೀ ಷಡಕ್ಷರ ದೇಶಿಕೇಂದ್ರ ಸ್ವಾಮಿಗಳು, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಲ್. ರೇವಣ್ಣಸಿದ್ದಯ್ಯ, ಸ್ಥಳ: ಅಲ್ಲಮಪ್ರಭು ಸಭಾಂಗಣ, ಶಾಲೆ ಆವರಣ, ಬೆಳಗ್ಗೆ 11ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ :** ಡಾ. ಬಿ.ಆರ್. ಅಂಬೇಡ್ಕರ್ ಅವರ ಮಾನವ ಅಭಿವೃದ್ಧಿಯ ಗ್ರಹಿಕೆ ಕುರಿತು ಕಾರ್ಯಾಗಾರ, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30 ರಿಂದ.

■ **ನ್ಯೂ ಕ್ರಾಫ್ಟ್ ಇಂಡಿಯಾ :** ಹತ್ತಿ ಕೈಮಗ್ಗದ ಸಾಂಪ್ರದಾಯಿಕ ರೇಷ್ಮೆ, ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.


■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಮೈಸೂರು ವಿಶ್ವವಿದ್ಯಾನಿಲಯ ಹಿರಿಯ ವಿದ್ಯಾರ್ಥಿಗಳ ಒಕ್ಕೂಟ :** ಯುವ ಪತ್ರಕರ್ತ ಸಿಂಧುವಳ್ಳಿ ಸುಧೀರ ವಿರಚಿತ ಸಿದ್ದರಾಮಯ್ಯನವರ ರಾಜಕೀಯ ಜೀವಮಾನದ ಸಾಧನೆ ಕುರಿತ ಭಾಗ್ಯವಿದಾತ ಕೃತಿ ಲೋಕಾರ್ಪಣೆ ಸಮಾರಂಭ, ಕೃತಿ ಲೋಕಾರ್ಪಣೆ: ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್, ಕೃತಿ ಕುರಿತು : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಮುಖ್ಯ ಅತಿಥಿಗಳು : ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಸಂಸದ ಸುನೀಲ್ ಬೋಸ್, ಸ್ಥಳ: ಪತ್ರಕರ್ತರ ಭವನ, ಮಧ್ಯಾಹ್ನ 12.30ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ವಿಧಾನಸಭಾ ಸಭಾಪತಿ ಯು.ಟಿ. ಖಾದರ್ ಅವರೊಂದಿಗೆ ಮಾಧ್ಯಮ ಸಂವಾದ, ಅಭಿನಂದನಾ ಸಭೆ, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ಮಧ್ಯಾಹ್ನ 2ಕ್ಕೆ.

■ **ಗಾನಭಾರತಿ :** ಕಾಶಿ ಸುಂದರದಾಸ ಸಂಸ್ಮರಣಾ ಮೌನಿ ಅಮಾವಾಸ್ಯೆ ಸಂಗೀತ ಕಾರ್ಯಕ್ರಮ, ವಿದುಷಿ ಶುಭಾ ರಾಘವೇಂದ್ರ ಅವರಿಂದ ಗಾಯನ, ಕುಮಾರಿ ತನುಶ್ರೀ–ಸಹ ಗಾಯನ, ವಿದುಷಿ ಕೂಜಳ್ಳಿ ಗಣೇಶ್ ಭಟ್–ಕೀಬೋರ್ಡ್, ವಿದ್ವಾನ್ ರಮೇಶ್ ಧನ್ನೂರ್–ತಬಲಾ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಪಂಚಗರುಡೋತ್ಸವ ಸೇವಾ ಸಮಿತಿ :** ಸಂಜೆ 4ಕ್ಕೆ ಪಂಚ ಗರುಡೋತ್ಸವ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಶ್ರೀ ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮೀಜಿ, ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್, ಶ್ರೀ ಭಾಷ್ಯಂ ಸ್ವಾಮೀಜಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಶಾಸಕರಾದ ಹರೀಶ್‌ಗೌಡ, ಜಿ.ಟಿ. ದೇವೇಗೌಡ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಪೊಲೀಸ್ ಆಯುಕ್ತೆ ಶ್ರೀಮತಿ ಸೀಮಾ ಲಾಟ್ಕರ್, ವಾಗ್ಮಿ ಎಸ್.ಎನ್. ಸೇತುರಾಮ್, ಎಸ್.ಎ. ರಾಮದಾಸ್, ಹೆಚ್.ವಿ. ರಾಜೀವ್, ಡಿ.ಟಿ. ಪ್ರಕಾಶ್, ಶ್ರೀಮತಿ ಭಾಗ್ಯ ಮಾದೇಶ್, ಶ್ರೀಮತಿ ನಮ್ರತಾ ರಮೇಶ್, ಶ್ರೀಮತಿ ವಿಜಯಲಕ್ಷ್ಮಿ ಮುರಳೀಧರ್ ಭಾಗವತ್, ಬೆಳಗ್ಗೆ 10 ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಬೆಳಗ್ಗೆ 11.30 ರಿಂದ ವಿದ್ವಾನ್ ಆರ್.ಕೆ. ಪದ್ಮನಾಭ್ ಮತ್ತು ವೃಂದದವರಿಂದ ವೀಣಾವಾದನ, ಮಧ್ಯಾಹ್ನ 2.30 ರಿಂದ ಡಾ. ಶೀಲಾ ಶ್ರೀಧರ್ ಮತ್ತು ಶಾಶ್ವತಿ ರಘುನಂದನ್ ಅವರಿಂದ ದಶಾವತಾರ ನೃತ್ಯರೂಪಕ, ಸಂಜೆ 3.45 ರಿಂದ ಮೈಸೂರು ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದ ಗೋಷ್ಠಿಯವರಿಂದ ನೃತ್ಯ ರೂಪಕ, ಸಂಜೆ 4.05 ರಿಂದ ವೇದಿಕೆ ಕಾರ್ಯಕ್ರಮ, ಸಂಜೆ 5.31ರ ನಂತರ ಪಂಚಗರುಡೋತ್ಸವ ಮೆರವಣಿಗೆಗೆ ಚಾಲನೆ, ಸಂಜೆ 6.30 ರಿಂದ ನೃತ್ಯ ವಿದ್ಯಾಪೀಠ ಕಲಾವಿದರಿಂದ ಭರತನಾಟ್ಯ ಕಾರ್ಯಕ್ರಮ, ಸ್ಥಳ: ಮಹಾಜನ ವಿದ್ಯಾಸಂಸ್ಥೆ ಕ್ರೀಡಾಂಗಣ, ಜಯಲಕ್ಷ್ಮಿಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ರಂಗ ದಿಗ್ಗಜರು–ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ಲೇಖನ–ಎಸ್. ರಾಮನಾಥ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ರಾಘವೇಂದ್ರ, ಎಸ್. ಸಂಗೀತಾ, ಪಿ. ಸುರಭಿ, ವ್ಯಾಖ್ಯಾನ–ಡಾ. ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಆರೋಗ್ಯವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, 8.30 ಚಿತ್ರಗೀತೆಗಳು, 9.05 ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, 9.10 ವೃತ್ತಿ ಮಾರ್ಗದರ್ಶನ 'ವಿಜುಅಲ್ ಕಮ್ಯುನಿಕೇಷನ್ ವಿಷಯದಲ್ಲಿ ಇರುವ ಅಧ್ಯಯನ ಹಾಗೂ ವೃತ್ತಿಪರ ಅವಕಾಶಗಳು' ಕುರಿತು ಅಮೃತ ವಿಶ್ವವಿದ್ಯಾಪೀಠಂ, ಮೈಸೂರ್ ಕ್ಯಾಂಪಸ್‌ನ ವಿಜುಅಲ್ ಕಮ್ಯುನಿಕೇಷನ್ ವಿಭಾಗದ ಮುಖ್ಯಸ್ಥರಾದ ಡಾ. ಮೌಲ್ಯಾ ಬಾಲಾಡಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ರಜನ್ ಮಿಶ್ರ ಮತ್ತು ಸಾಜನ್ ಮಿಶ್ರ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.35 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಾಂಬೆ ಜಯಶ್ರೀ – ಹಾಡುಗಾರಿಕೆ, 4.00 ಮಹಿಳಾರಂಗ, 4.45 ಹಿಂದಿ ಪಾಠ, ಪ್ರಸ್ತುತಿ : ಡಾ. ಸ್ಮಿತಾ ಚಿಪ್ಳೂಣ್‌ಕರ್, 6.50 ಕೃಷಿರಂಗ: ಮೇವು–ಮೆಲುಕು ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ. ಸುಸ್ಥಿರ ಹೈನುಗಾರಿಕೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಕೆ.ಆರ್. ಪೇಟೆ ತಾಲೂಕು ಬೂಕನಕೆರೆ ಹೋಬಳಿ ಕಾಪನಹಳ್ಳಿ ಗ್ರಾಮದ ಕೃಷಿಕ ದಂಪತಿ ಕೆ.ಸಿ. ನಾಗೇಶ ಹಾಗೂ ಆರ್. ನಳಿನ, ಪ್ರಸ್ತುತಿ: ಎನ್. ಕೇಶವಮೂರ್ತಿ, 7.45 'ನಕ್ಷತ್ರ ಲೋಕ' ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, ಹೆಸರಾಂತ ಚಿತ್ರಸಾಹಿತಿ 'ಹೃದಯ ಶಿವ' ಅವರೊಂದಿಗೆ ಮಾತುಕತೆ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಶ್ರೀಮಾನ್, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಸುತ್ತೂರಿನಲ್ಲಿಂದು, ನಂಜನಗೂಡು ತಾ.
ಸುತ್ತೂರು ಜಾತ್ರಾ ಮಹೋತ್ಸವ

■ **ಬೆಳಗ್ಗೆ 10.30ಕ್ಕೆ ಕೃಷಿ ವಿಚಾರ ಸಂಕಿರಣ : ಉದ್ಘಾಟನೆ, ವಿಷಯ : ಸುಸ್ಥಿರ ಕೃಷಿಗಾಗಿ ನಿಖರ ಬೇಸಾಯ ಕ್ರಮಗಳು :** ಸಮ್ಮುಖ : ಡಾ. ಶ್ರೀ ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ : ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಅಧ್ಯಕ್ಷತೆ : ಗೃಹ ಸಚಿವ ಡಾ. ಜಿ. ಪರಮೇಶ್ವರ, ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ : ಅರಣ್ಯ ಸಚಿವ ಈಶ್ವರ್ ಬಿ. ಖಂಡ್ರೆ, ಪ್ರಗತಿಪರ ರೈತ ಮಹಿಳೆಯರಿಗೆ ಪ್ರಶಸ್ತಿ ಪ್ರದಾನ : ವಿಧಾನಸಭೆ ವಿರೋಧ ಪಕ್ಷದ ನಾಯಕ ಅರವಿಂದ ಬೆಲ್ಲದ್, ಮುಖ್ಯ ಅತಿಥಿಗಳು : ಶಾಸಕ ಸಿ.ಟಿ. ರವಿ, ಸಂಸದ ಎಂ. ಮಲ್ಲೇಶ್ ಬಾಬು, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಸಾ.ರಾ. ಮಹೇಶ್, ಬಿ.ಸಿ. ಪಾಟೀಲ್, ಜಿಲ್ಲಾಧಿಕಾರಿ ಡಾ. ಕುಮರ್, ಡಾ. ಮಹಾಂತೇಶ್ ಬಿ. ಪಾಟೀಲ್, ವಿನೋದ್ ಸುಂದರಂ; ಸಂಜೆ 4.30ಕ್ಕೆ ವಿಚಾರ ಸಂಕಿರಣದ ಸಮಾರೋಪ, ಸಮ್ಮುಖ : ಶ್ರೀ ವೇಮನಾನಂದ ಸ್ವಾಮೀಜಿ, ಮಾತಾಜಿ ವಿವೇಕಮಯಿ, ಅಧ್ಯಕ್ಷತೆ : ಆಹಾರ, ನಾಗರಿಕ ಸರಬರಾಜು ಸಚಿವ ಕೆ.ಹೆಚ್. ಮುನಿಯಪ್ಪ, ಸಮಾರೋಪ ಭಾಷಣ: ಕಂದಾಯ ಸಚಿವ ಕೃಷ್ಣಬೈರೇಗೌಡ, ಮುಖ್ಯ ಅತಿಥಿಗಳು : ಶಾಸಕ ಹೆಚ್.ಡಿ. ರೇವಣ್ಣ, ಸಂಸದ ತೇಜಸ್ವಿ ಸೂರ್ಯ, ಶಾಸಕ ಧೀರಜ್ ಮುನಿರಾಜ್, ಸಿ.ಎನ್. ಮಂಜೇಗೌಡ, ಮಾಜಿ ಶಾಸಕ ಡಾ. ಕೆ. ಅನ್ನದಾನಿ, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಲೇಖಕ ವಾದಿರಾಜ್ ಸಾಮರಸ್ಯ, ಪ್ರಾದೇಶಿಕ ಆಯುಕ್ತ ಡಿ.ಎಸ್. ರಮೇಶ್.

■ **ಚಿತ್ರಕಲೆ, ಗಾಳಿಪಟ ಮತ್ತು 54ನೇ ದನಗಳ ಜಾತ್ರೆ :** ಸಮ್ಮುಖ : ಶ್ರೀ ವಲಾರ್ ಶಿವಾನಂದ ಮಲಿಪ್ಪನಿ ಪಾತಿರಕರ ಸ್ವಾಮಿಗಳ್, ಶ್ರೀ ಯೋಗೀಶ್ವರ ಸ್ವಾಮಿಗಳು, ಅಧ್ಯಕ್ಷತೆ : ಸಚಿವ ಶಿವಾನಂದ ಎಸ್. ಪಾಟೀಲ್, ದನಗಳ ಜಾತ್ರೆ ಉದ್ಘಾಟನೆ : ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್, ಚಿತ್ರಕಲೆ ಸ್ಪರ್ಧೆ ಉದ್ಘಾಟನೆ: ಮೀನುಗಾರಿಕೆ ಸಚಿವ ಮಂಕಾಳ ಎಸ್. ವೈದ್ಯ, ಗಾಳಿಪಟ ಸ್ಪರ್ಧೆ ಉದ್ಘಾಟನೆ : ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಮುಖ್ಯ ಅತಿಥಿಗಳು : ಶಾಸಕರಾದ ಅಡಗೂರು ಹೆಚ್. ವಿಶ್ವನಾಥ್, ಪಿ.ಎಂ. ನರೇಂದ್ರ, ದರ್ಶನ್ ಧ್ರುವನಾರಾಯಣ್, ಎಂ.ಆರ್. ಮಂಜುನಾಥ್, ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ, ಯುಎಸ್‌ಎ ಅಕ್ಕ ವಿಶ್ವಸ್ಥ ಮಂಡಳಿ ಅಧ್ಯಕ್ಷ ಅಮರನಾಥ ಗೌಡ, ವಿಎಸ್‌ಎನ್‌ಎ, ಯುಎಸ್‌ಎ ಅಧ್ಯಕ್ಷ ದಯಾನಂದ ತುಮಕೂರು, ಸಂಜೆ 4ಕ್ಕೆ.

ಮುಡಾ ಹಗರಣದ ಸಿಬಿಐ ತನಿಖೆ ಪ್ರಸ್ತಾಪದಿಂದ ನನಗೇನು ಆತಂಕವಿಲ್ಲ

ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ

ಬೆಂಗಳೂರು, ಜ.28(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಬಿಡಿ ನಿವೇಶನಗಳ ಹಂಚಿಕೆ ಪ್ರಕರಣ ತನಿಖೆಯನ್ನು ಸಿಬಿಐ ನಡೆಸಲಿದೆ ಎಂಬ ಆತಂಕ ತಮಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ವಿಚಾರವನ್ನು ರಾಜಕೀಯ ಮಾಡಲಾಗುತ್ತಿದೆ. ಇದರ ಹಿಂದೆ ಬಿಜೆಪಿ ಇದೆ ಎಂಬುದು ಜಗಜ್ಜಾಹೀರಾಗಿದೆ. ಪ್ರಕರಣವನ್ನು ಸಿಬಿಐಗೆ ವಹಿಸುವ ಸಂಬಂಧ ನ್ಯಾಯಾಲಯ ವಾದ–ಪ್ರತಿವಾದ ಆಲಿಸಿ ತೀರ್ಪು ಕಾಯ್ದಿರಿಸಿದೆ.

ಇದರಲ್ಲಿ ನಮಗೆ ನ್ಯಾಯ ದೊರಕುತ್ತದೆ ಎಂಬ ವಿಶ್ವಾಸವಿದೆ. ತೀರ್ಪು ಕಾಯ್ದಿರಿಸಿರುವಾಗ ಸಿಬಿಐ ತನಿಖೆ ಬಗ್ಗೆ ಉತ್ತರಿಸಲಾಗದು ಎಂದರು.

ಜಾರಿ ನಿರ್ದೇಶನಾಲಯ (ಇ.ಡಿ.) ನೋಟಿಸ್ ನೀಡಿ ವಿಚಾರಣೆಗೆ ಆತುರವೇಕೆ ಎಂದು ನ್ಯಾಯಾಲಯವೇ ತಡೆಯಾಜ್ಞೆ ನೀಡಿದೆ. ಸಿಬಿಐಗೆ ವಹಿಸುವ ಅರ್ಜಿ ವಿಚಾರಣೆ ಹಂತದಲ್ಲಿ ಇರುವಾಗ ತನಿಖೆಗೆ ಆತುರ ಏಕೆ ಎಂದು ನ್ಯಾಯಪೀಠವೇ ಪ್ರಶ್ನಿಸಿದೆ. ಹೀಗಿರುವಾಗ ನಾನು ಏತಕ್ಕೆ ಆತಂಕಪಟ್ಟುಕೊಳ್ಳಲಿ, ನಾವೇನು ತಪ್ಪು ಮಾಡಿದ್ದೇವೆಯೇ ಎಂದು ಪ್ರಶ್ನಿಸಿದರು.

ಏ.4ರಿಂದ 14ರವರೆಗೆ ಐತಿಹಾಸಿಕ ಬೆಂಗಳೂರು ಕರಗ

ಬೆಂಗಳೂರು, ಜ.28– ವಿಶ್ವ ವಿಖ್ಯಾತ, ಐತಿಹಾಸಿಕ ಪ್ರಸಿದ್ಧ ಬೆಂಗಳೂರು ಕರಗ ಏ.4ರಿಂದ 14ರವರೆಗೆ ನಡೆಯಲಿದೆ ಎಂದು ತಿಳಿದುಬಂದಿದೆ. ಏಪ್ರಿಲ್ 12ರ ಚೈತ್ರ ಪೌರ್ಣಮಿಯಂದು ಕರಗ ಶಕ್ತ್ಯೋತ್ಸವ ನಡೆಯಲಿದೆ. ಒಟ್ಟು 11 ದಿನಗಳ ಕಾಲ ಬೆಂಗಳೂರು ಕರಗ ಮಹೋತ್ಸವ ನಡೆಯಲಿದ್ದು, ಈ ಬಾರಿಯೂ ಪೂಜಾರಿ ಎ.ಜ್ಞಾನೇಂದ್ರ ಕರಗ ಹೊರಲಿದ್ದಾರೆ. ಜ್ಞಾನೇಂದ್ರ ಅವರು 15ನೇ ಬಾರಿ ಬೆಂಗಳೂರು ಕರಗ ಹೊರುತ್ತಿದ್ದಾರೆ. ನಿನ್ನೆ ಅಂದರೆ ಫೆ.27ರಂದು ನಡೆದ ಸಭೆಯಲ್ಲಿ ಧರ್ಮರಾಯ ಸ್ವಾಮಿ ದೇವಾಲಯದ ಆಡಳಿತ ಮಂಡಳಿ ಹಾಗೂ ಮುಜರಾಯಿ ಇಲಾಖೆ ಎ.ಜ್ಞಾನೇಂದ್ರ ಸ್ವಾಮಿ ಅವರನ್ನು ಕರಗ ಹೊರಲು ಆಯ್ಕೆ ಮಾಡಿದೆ. ಏಪ್ರಿಲ್ 4 ರಿಂದ ಉತ್ಸವ ಆರಂಭವಾಗಿ ಏಪ್ರಿಲ್ 14 ರವರೆಗೆ ನಡೆಯಲಿದ್ದು, ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಶ್ರೀ ಧರ್ಮರಾಯಸ್ವಾಮಿ ಕರಗ ವಿಜೃಂಭಣೆಯಿಂದ ನಡೆಯಲಿದೆ.

ಸುಳ್ಳು ಜಾತಿ ಪ್ರಮಾಣ ಪತ್ರ ನೀಡುವ ಅಧಿಕಾರಿಗೆ ಶಿಕ್ಷೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ● ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ ಆಗುವಂತೆ ಕ್ರಮ ಕೈಗೊಳ್ಳಲು ಸೂಚನೆ
● ದೇವದಾಸಿ ಪದ್ಧತಿ ಕಂಡು ಬಂದರೆ ಡಿಸಿ, ಎಸ್ಪಿ ಹೊಣೆ ● ಅರಣ್ಯವಾಸಿಗಳ ಒಕ್ಕಲೆಬ್ಬಿಸಕೂಡದು



ಬೆಂಗಳೂರು ಜ.28– ಇನ್ನು ಮುಂದೆ ಸುಳ್ಳು ಜಾತಿ ಪ್ರಮಾಣಪತ್ರ ನೀಡುವ ಅಧಿಕಾರಿಯನ್ನು ಆರೋಪಿಯನ್ನಾಗಿ ಮಾಡುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ಎಚ್ಚರಿಕೆ ನೀಡಿದ್ದಾರೆ.

ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಅನುಸೂಚಿತ ಜಾತಿ ಮತ್ತು ಬುಡಕಟ್ಟು ಸಮುದಾಯದವರ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಂದಾಯ ಇಲಾಖಾ ಅಧಿಕಾರಿಗಳು ಜಾತಿ ಪ್ರಮಾಣಪತ್ರ ನೀಡುವ ಸಂದರ್ಭದಲ್ಲಿ ಕಟ್ಟೆಚ್ಚರ ವಹಿಸಬೇಕು, ತಪ್ಪಿದಲ್ಲಿ ಕಾನೂನು ಶಿಕ್ಷೆಗೆ ಒಳಪಡುತ್ತೀರಿ ಎಂದು ಎಚ್ಚರಿಸಿದರು.

ಪರಿಶಿಷ್ಟ ಸಮುದಾಯದವರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಸರ್ಕಾರಿ ವಕೀಲರುಗಳು ಸರಿಯಾಗಿ ವಾದ ಮಂಡಿಸಿ ದೌರ್ಜನ್ಯಕ್ಕೀಡಾದವರಿಗೆ ನ್ಯಾಯ ಒದಗಿಸಬೇಕು, ಅಲ್ಲದೆ, ದೌರ್ಜನ್ಯ ಎಸಗಿದವರು ಸುಲಭವಾಗಿ ಜಾಮೀನು ಪಡೆಯದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಸಿಗುವಂತೆ ಮಾಡುವುದು ಎಲ್ಲರ ಜವಾಬ್ದಾರಿ.

ಪರಿಶಿಷ್ಟ ಜಾತಿ ಮತ್ತು ಪಂಗಡ ಕಾಯ್ದೆಯಡಿ ದಾಖಲಾದ ಪ್ರಕರಣಗಳಲ್ಲಿ ನ್ಯಾಯಾಲಯಗಳ ತಡೆಯಾಜ್ಞೆ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

ಪ್ರಕರಣ ನಡೆದ 60 ದಿನಗಳೊಳಗೆ ಆರೋಪಪಟ್ಟಿ ದಾಖಲಿಸಬೇಕು, ರಾಜ್ಯದಲ್ಲಿ ಇನ್ನೂ 665 ಪ್ರಕರಣಗಳು ತನಿಖೆಗೆ ಬಾಕಿಯಿದ್ದು, ತ್ವರಿತವಾಗಿ ಪೂರ್ಣಗೊಳಿಸಬೇಕು, ತಪ್ಪಿತಸ್ಥರಿಗೆ ಶಿಕ್ಷೆ ಪ್ರಮಾಣ ಕಡಿಮೆಯಾಗುವುದನ್ನು ಒಪ್ಪಲು ಸಾಧ್ಯವಿಲ್ಲ.

ಪ್ರತಿ ಜಿಲ್ಲೆಯಲ್ಲಿ ಡಿಸಿಆರ್‌ಇ ಕೋಶ ಸ್ಥಾಪನೆಗೆ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆ ಕಡ್ಡಾಯವಾಗಿ ನಡೆಸಬೇಕು, ಪ್ರಾಸಿಕ್ಯೂಶನ್ ಪರಿಶೀಲನೆ ಸಹ ನಡೆಸಬೇಕು, ಈ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಭಾಗವಹಿಸಲು ಸೂಚಿಸಲಾಗುವುದು.

ದೇವದಾಸಿ ಪದ್ಧತಿಗೆ ಡಿಸಿ, ಎಸ್ಪಿ ಹೊಣೆ: ರಾಜ್ಯದ ಯಾವುದೇ ಜಿಲ್ಲೆಯಲ್ಲಿ ದೇವದಾಸಿ ಪದ್ಧತಿ ಕಂಡುಬಂದರೆ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ದೇವದಾಸಿಯರಿಗೆ ಪುನರ್ವಸತಿ ಕಲ್ಪಿಸುವುದು ಜಿಲ್ಲಾಡಳಿತದ ಜವಾಬ್ದಾರಿಯಾಗಿದ್ದು, ಯಾವುದೇ ದೂರಿಗೆ ಅವಕಾಶವಿಲ್ಲದಂತೆ ಕಾರ್ಯ ನಿರ್ವಹಿಸಬೇಕು ಎಂದು ತಾಕೀತು ಮಾಡಲಾಗಿದೆ ಎಂದರು.

ಅರಣ್ಯವಾಸಿಗಳ ಒಕ್ಕಲೆಬ್ಬಿಸಕೂಡದು: ಅರಣ್ಯ ಹಕ್ಕು ಸಮಿತಿಗಳು ನಿಗದಿತವಾಗಿ ಸಭೆಗಳನ್ನು ನಡೆಸಿ, ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವ ಪ್ರಕ್ರಿಯೆ ತ್ವರಿತಗೊಳಿಸಬೇಕು, 3,430 ಪ್ರಕರಣಗಳಲ್ಲಿ ಹಕ್ಕುಪತ್ರ ಬಾಕಿಯಿದ್ದು, ಒಂದು ತಿಂಗಳೊಳಗೆ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಹಕ್ಕುಪತ್ರ ನೀಡಿದ ಬಳಿಕ ಪಹಣಿಯಲ್ಲಿ ಫಲಾನುಭವಿ ಹೆಸರು ನಮೂದಿಸುವ ಕಾರ್ಯ ತ್ವರಿತಗೊಳಿಸಬೇಕು, ಕಂದಾಯ ಇಲಾಖೆ ಅಧಿಕಾರಿಗಳು ಆದ್ಯತೆ ಮೇಲೆ ಕ್ರಮಕೈಗೊಳ್ಳಬೇಕು, ಯಾವುದೇ ಕಾರಣಕ್ಕೂ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸಬಾರದು.

ಬ್ಯಾಕ್‌ಲಾಗ್ ನೇಮಕಾತಿ ಮತ್ತು ಮುಂಬಡ್ತಿ ವಿಷಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ಎಚ್ಚರಿಕೆ ವಹಿಸಬೇಕು, ಈ ಕುರಿತು ಇಲಾಖಾವಾರು ಸಭೆ ನಡೆಸುವಂತೆ ಮುಖ್ಯಕಾರ್ಯದರ್ಶಿ ಅವರಿಗೆ ಸೂಚಿಸಲಾಗಿದೆ ಎಂದರು.

ಉದ್ಯೋಗ ಕಲ್ಪಿಸಲು ಅಪ್ರಾಪ್ತರ ವಯೋಮಿತಿ ಸಡಿಲಿಕೆ

ಬೆಂಗಳೂರು: ಸರ್ಕಾರಿ ಉದ್ಯೋಗಿಗಳು ನಿವೃತ್ತಿಗೆ ಮುನ್ನ ಮೃತಪಟ್ಟ ಪ್ರಕರಣಗಳಲ್ಲಿ ಕುಟುಂಬದಲ್ಲಿ ವಯಸ್ಕರು ಲಭ್ಯವಿಲ್ಲದ ಸಂದರ್ಭಗಳಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳಿಗೂ ಕೆಲಸ ಕೊಡಲು ನಿರ್ಧರಿಸಲಾಗಿದೆ. ಮೃತಪಟ್ಟ ಪ್ರಕರಣಗಳಲ್ಲಿ ಆ ಕುಟುಂಬದವರಿಗೆ 3 ವರ್ಷದ ಒಳಗೆ ಅನುಕಂಪ ಆಧಾರದ ಉದ್ಯೋಗ ಒದಗಿಸಬೇಕು. ಫಲಾನುಭವಿ 18 ವರ್ಷಗಳನ್ನು ಪೂರೈಸದಿದ್ದ ಸಂದರ್ಭದಲ್ಲೂ ವಯಸ್ಸಿನ ಮಿತಿಯನ್ನು ಸಡಿಲಗೊಳಿಸಿ ಉದ್ಯೋಗ ಒದಗಿಸುವ ತೀರ್ಮಾನ ಕೈಗೊಳ್ಳಲಾಗಿದೆ.

ಸದ್ಯದಲ್ಲೇ ಬೆಂಗಳೂರಲ್ಲಿ ಕುಡಿಯುವ ನೀರಿನ ದರ ಏರಿಕೆ

ತಿಂಗಳಿಗೆ 85 ಕೋಟಿ ನಷ್ಟವಾಗ್ತಿದೆ



ಬೆಂಗಳೂರು, ಜ.28(ಕೆಎಂಶಿ)– ಕುಡಿಯುವ ನೀರಿನ ಬೆಲೆ ಹೆಚ್ಚಳದ ಬಗ್ಗೆ ವರದಿ ನೀಡಿದ ತಕ್ಷಣ ಬೆಂಗಳೂರಲ್ಲಿ ಕುಡಿಯುವ ನೀರಿನ ದರ ಏರಿಕೆ ಅನುಷ್ಠಾನಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ನೀರಿನ ಅಕ್ರಮ ಸಂಪರ್ಕಗಳ ಸಕ್ರಮೀಕರಣ, ನೀರಿನ ಸಂಪರ್ಕ ಹಾಗೂ ಬಳಕೆಯ ನಿಖರವಾದ ಲೆಕ್ಕವನ್ನು ಪಡೆಯಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು. ಬಿಬಿಎಂಪಿ, ಬಿಡಿಎ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಎಂಆರ್‌ಡಿಎ ಅಧಿಕಾರಿಗಳ ಜತೆ ಸಭೆ ನಡೆಸಿದ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಡಿ.ಕೆ. ಶಿವಕುಮಾರ್, ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 2014 ರಿಂದ ನಗರದಲ್ಲಿ ನೀರಿನ ಬಿಲ್ ಹೆಚ್ಚಳ ಮಾಡಿಲ್ಲ, ಬಿಡಬ್ಲ್ಯೂಎಸ್‌ಎಸ್‌ಬಿಗೆ ವರ್ಷಕ್ಕೆ 1 ಸಾವಿರ ಕೋಟಿ ನಷ್ಟವಾಗುತ್ತಿದೆ.

ವಿದ್ಯುತ್ ಬಿಲ್ ಈ ಹಿಂದೆ 35 ಕೋಟಿ ರೂ. ಆಗುತ್ತಿತ್ತು. ಈ ಬಾರಿ 75 ಕೋಟಿ ರೂ. ಆಗಿದೆ. ಇತರೇ ಸೇವೆಗಳು, ಮಾನವ ಸಂಪನ್ಮೂಲ ವೆಚ್ಚ ಸೇರಿದಂತೆ ತಿಂಗಳಿಗೆ 85 ಕೋಟಿ ರೂ. ನಷ್ಟವಾಗುತ್ತಿದೆ ಎಂದರು.

ನೀರಿನ ಬಿಲ್ ಹೆಚ್ಚಳ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ, ನಗರದ ಎಲ್ಲಾ ಶಾಸಕರ ಬಳಿ ಮಂಡಳಿಯವರು ಚರ್ಚೆ ನಡೆಸಿದ್ದಾರೆ, ಅಲ್ಲದೇ ನೀರಿನ ಜಾಲ ವಿಸ್ತರಣೆ ಮಾಡಲು ಬ್ಯಾಂಕ್‌ಗಳ ಸಾಲ ಕೇಳಿದರೆ, ಮಂಡಳಿ ನಷ್ಟದಲ್ಲಿದೆ ಸಹಾಯ ಮಾಡಲು ಆಗುವುದಿಲ್ಲ ಎನ್ನುತ್ತಿದ್ದಾರೆ. ನಮಗೆ ಹಣ ನೀಡುತ್ತಿರುವ ಜೈಕಾ ಸಂಸ್ಥೆ ಸೇರಿದಂತೆ ಹಲವಾರು ಸಂಸ್ಥೆಗಳು ನೆರವು ಬೇಕು ಎಂದಾದರೆ ಹಣ ವಾಪಸಾತಿಯ ಬಗ್ಗೆ ಭರವಸೆ ನೀಡಿ ಎನ್ನುತ್ತಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ಲರನ್ನು ಒಳಗೊಂಡಿರುವ ತೆರಿಗೆ ಪಾವತಿಗೆ ವ್ಯವಸ್ಥೆ ರೂಪಿಸಿರುವ ಮಾದರಿಯಲ್ಲಿ ನೀರಿನ ಸಂಪರ್ಕ, ಬಳಕೆಯಾಗುವ ನೀರಿನ ಬಗ್ಗೆ ನಿಖರ ಮಾಹಿತಿ ಸಿಗಬೇಕು ಎಂದು ಯೋಜನೆ ರೂಪಿಸಲಾಗಿದೆ.

ಬಡವರು, ಶ್ರೀಮಂತರು, ವಸತಿ ಸಮುಚ್ಚಯಗಳು ಹೀಗೆ ಪ್ರತಿಯೊಂದು ಲೆಕ್ಕವೂ ಸಿಗಬೇಕು, ಸಾರ್ವಜನಿಕರು ಕೊಂಚವಾದರೂ ಹಣ ಪಾವತಿ ಮಾಡಿ ನೀರಿನ ಸಂಪರ್ಕ ಪಡೆಯಬೇಕು, ಅಕ್ರಮ ಸಂಪರ್ಕ ಪಡೆದಿರುವವರು ಸಕ್ರಮ ಮಾಡಿಕೊಳ್ಳಬೇಕು, ಬಿಡಬ್ಲ್ಯೂಎಸ್‌ಎಸ್‌ಬಿ ಉಳಿವಿಗೆ ಮತ್ತು ಎಲ್ಲರಿಗೂ ನೀರನ್ನು ಒದಗಿಸಿಕೊಡಲು ನಾವು ತೀರ್ಮಾನ ಮಾಡಬೇಕಿದೆ ಎಂದರು. ಮುಂಬರುವ ಬೇಸಿಗೆ ವೇಳೆಗೆ ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಉಂಟಾಗಬಾರದು ಎಂಬ ಸೂಚನೆ ನೀಡಲಾಗಿದೆ, ಜೊತೆಗೆ ಅಂತರ್ಜಲ ಹೆಚ್ಚಳಕ್ಕೆ ಯಾವುದಾದರೂ ಕೆರೆ ತುಂಬಿಸಬೇಕಿದ್ದರೆ ಈ ಕುರಿತು ಶೀಘ್ರ ಕ್ರಮ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಡವರು ಹೆಚ್ಚು ಹಣ ನೀಡಲು ಆಗದಿದ್ದರೆ ಒಂದು ಲೀಟರ್‌ಗೆ ಒಂದು ಪೈಸೆಯಾದರೂ ನೀಡಲಿ ಎಂಬುದು ನಮ್ಮ ಅಭಿಲಾಷೆ, ಇದರಿಂದ ನೀರಿನ ಬಳಕೆಯ ಲೆಕ್ಕ ದೊರೆಯಲಿ ಎನ್ನುವುದು ಇದರ ಉದ್ದೇಶ ಎಂದರು.

ಮೈಸೂರಿನ ವಾರ್ಡ್ 19ರ ಮೇದರ್ ಬ್ಲಾಕ್‌ನಲ್ಲಿ ಶಾಸಕ ಹರೀಶ್‌ಗೌಡ ಪಾದಯಾತ್ರೆ

ಮೈಸೂರು, ಜ.28(ಬಿಎಲ್‌ಯು)– ಮೈಸೂರಿನ ವಾರ್ಡ್ ನಂಬರ್ 19ರ ಮೇದರ್ ಬ್ಲಾಕ್‌ನಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ನಗರಪಾಲಿಕೆ ಅಧಿಕಾರಿಗಳೊಂದಿಗೆ ಇಂದು ಪಾದಯಾತ್ರೆ ನಡೆಸಿದರು.

ಈ ಬಡಾವಣೆಯಲ್ಲಿ ವಾಸವಿದ್ದ ನಿವಾಸಿಗಳನ್ನು ಏಕಲವ್ಯನಗರ ಹಾಗೂ ಕೆಸರೆಯ ನರ್ಮ್ ಮನೆಗಳಿಗೆ ಸ್ಥಳಾಂತರಿಸಲಾಗಿದೆ. ಆದರೆ ಅಲ್ಲಿ ಮೂಲ ಸೌಕರ್ಯ ಕಲ್ಪಿಸಿಲ್ಲ ಎಂದು ನಿವಾಸಿಗಳು ಆರೋಪಿಸಿದರು. ಕೊಳಚೆ ನಿರ್ಮೂಲನ ಮಂಡಳಿಯಿಂದ ಯಶವಂತನಗರದಲ್ಲಿ ಹಲವು ವರ್ಷಗಳ ಹಿಂದೆಯೇ ಮನೆ ಹಂಚಿಕೆ ಮಾಡಲಾಗಿದೆ. ಆದರೆ ಆ ಮನೆಗಳನ್ನು ದುರಸ್ತಿ ಮಾಡಿಲ್ಲ. ಈ ಹಿನ್ನೆಲೆ ಆದಷ್ಟು ಬೇಗ ರಿಪೇರಿ ಕೆಲಸ ಮಾಡಿಸಬೇಕೆಂದು ಕೋರಿದರು.

ಯಾದವಗಿರಿಯಿಂದ ಹರಿದು ಬರುವ ದೊಡ್ಡ ಮೋರಿಯನ್ನು ಸ್ವಚ್ಛ ಮಾಡಬೇಕು. ಮೋರಿಯ ಎರಡು ಬದಿಗಳಲ್ಲಿ ಕಬ್ಬಿಣದ ಮೆಸ್ ನಿರ್ಮಿಸಬೇಕು ಎಂದು ಮನವಿ ಮಾಡಿದರು. ಮನೆಗಳ ಹಕ್ಕುಪತ್ರ ನೀಡದಿರುವುದು ಹಾಗೂ ಖಾತೆ ಮಾಡಿಕೊಡದ ಬಗ್ಗೆ ಶಾಸಕ ಹರೀಶ್ ಗೌಡರ ಗಮನಕ್ಕೆ ತಂದ ನಿವಾಸಿಗಳು ಆದಷ್ಟು ಬೇಗ ನಮ್ಮ ಬೇಡಿಕೆ ಈಡೇರಿಸಬೇಕೆಂದು ಆಗ್ರಹಿಸಿದರು.

ನಗರಪಾಲಿಕೆಯಿಂದ ಮೂಲ ಸೌಕರ್ಯ ಕಲ್ಪಿಸುತ್ತಿರುವ ಕಾರಣ ಈ ಬಡಾವಣೆಗಳನ್ನು ನಗರಪಾಲಿಕೆ ವ್ಯಾಪ್ತಿಗೆ ತರುವಂತೆ ಒತ್ತಾಯಿಸಿದರು. ಇಲ್ಲಿನ ನಿವಾಸಿಗಳ ಸಮಸ್ಯೆಯನ್ನು ಶೀಘ್ರ ಪರಿಹಾರ ಮಾಡಬೇಕೆಂದು ಸ್ಥಳದಲ್ಲಿದ್ದ ನಗರಪಾಲಿಕೆ ಅಧಿಕಾರಿಗಳಿಗೆ ಹರೀಶ್ ಗೌಡ ಸೂಚಿಸಿದರು.



ಶಾಸಕ ಕೆ.ಹರೀಶ್‌ಗೌಡ ನಗರಪಾಲಿಕೆ ಅಧಿಕಾರಿಗಳೊಂದಿಗೆ ಪಾದಯಾತ್ರೆ ನಡೆಸಿದರು.

ಡಾ. ಸತೀಶ್ ಮೆಡಿಕಲ್ ಕಾಲೇಜು ಪ್ರಾಂಶುಪಾಲ



ಮೈಸೂರು, ಜ.28– ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಮ್ ಎಮ್ ಸಿಆರ್‌ಐ) ನೇತ್ರಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಸತೀಶ್ ಅವರನ್ನು ಸಂಸ್ಥೆಯ ಪ್ರಾಂಶುಪಾಲರ ಹುದ್ದೆಯ ಪ್ರಭಾರದಲ್ಲಿರಿಸಿ ಸರ್ಕಾರ ಜನವರಿ 24ರಂದು ಆದೇಶ ಹೊರಡಿಸಿದೆ.

ಪ್ರಸ್ತುತ ಪ್ರಾಂಶುಪಾಲರ ಹುದ್ದೆಯ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ.ಪಿ.ಎಲ್ ಬಸವಣ್ಣ ಅವರು ಕ್ಲಿನಿಕಲ್ ಫಾರ್ಮಕಾಲಜಿ ವಿಭಾಗದ ಪ್ರಾಧ್ಯಾಪಕರ ಹುದ್ದೆಯಲ್ಲಿ ಮುಂದುವರಿಯುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಮೈಸೂರನ್ನು ಸುಸ್ಥಿರ, ವಾಸಯೋಗ್ಯ ನಗರವನ್ನಾಗಿಸಲು ವಿಶ್ವಬ್ಯಾಂಕ್‌ನಿಂದ

2,843 ಕೋಟಿ ನೆರವಿಗೆ ಪಾಲಿಕೆ ಪ್ರಸ್ತಾವನೆ

ಬೆಂಗಳೂರಲ್ಲಿ ಉನ್ನತ ಮಟ್ಟದ ಸಭೆ ನಡೆಸಿದ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್



ಎಸ್.ಟಿ.ರವಿಕುಮಾರ್

ಮೈಸೂರು, ಜ. 28– ಮೂಲಭೂತ ಸೌಲಭ್ಯದೊಂದಿಗೆ ಮೈಸೂರನ್ನು ಸುಸ್ಥಿರ ಮತ್ತು ವಾಸಯೋಗ್ಯ ನಗರವನ್ನಾಗಿ ಪರಿವರ್ತಿಸಲು ಮೈಸೂರು ಮಹಾನಗರ ಪಾಲಿಕೆಯು 2,843 ಕೋಟಿ ರೂ.ಗಳ ವಿಶ್ವಬ್ಯಾಂಕ್ ನೆರವು ಕೋರಿದೆ.

ಪಾಲಿಕೆಯ ಪ್ರಸ್ತಾವನೆ ಸಂಬಂಧ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಕಳೆದ ಶುಕ್ರವಾರ ಬೆಂಗಳೂರಿನ ವಿಕಾಸಸೌಧದಲ್ಲಿ ಮೈಸೂರು ಮಹಾನಗರ ಪಾಲಿಕೆ ನಿರ್ಗಮಿತ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಉಪ ಆಯುಕ್ತ (ಅಭಿವೃದ್ಧಿ)ರಾದ ಕೆ.ಜೆ.ಸಿಂಧು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆ.ಎಸ್. ಮೃತ್ಯುಂಜಯ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಸಿಫ್ ಇಕ್ಬಾಲ್ ಖಲೀಲ್, ಮೈಸೂರು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ವಿ. ಪ್ರಿಯದರ್ಶಿನಿ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮಂಜುನಾಥ್, ವಿಶ್ವಬ್ಯಾಂಕ್ ಹಿರಿಯ ಅಧಿಕಾರಿಗಳಾದ ಜಿಯು ಚೆರ್ರಿ ಚೆನ್, ಪಂಕಜ್ ಗುಪ್ತಾ ಅವರೊಂದಿಗೆ ಮಹತ್ವದ ಸಭೆ ನಡೆಸಿದ್ದಾರೆ. ಸುಸ್ಥಿರ ನಗರ ಅಭಿವೃದ್ಧಿ ಮತ್ತು ಹವಾಮಾನ ಸ್ಥಿತಿಸ್ಥಾಪಕತ್ವದ ಜಾಗತಿಕ ಉದ್ದೇಶಗಳಿಗನುಗುಣವಾಗಿ ಪ್ರಪಂಚದಾದ್ಯಂತ ಅಭಿವೃದ್ಧಿ ಯೋಜನೆಗಳಿಗೆ ಹಣಕಾಸು ಒದಗಿಸುವಲ್ಲಿ ಹೆಸರುವಾಸಿಯಾಗಿರುವ ವಿಶ್ವಬ್ಯಾಂಕ್‌ನ ಆರ್ಥಿಕ ನೆರವು ಪಡೆಯಲು ಮೈಸೂರು ಮಹಾನಗರ ಪಾಲಿಕೆ ಹಿಂದಿನ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ 2,843 ಕೋಟಿ ರೂ.ಗಳ ಯೋಜನಾ ವರದಿ ಸಿದ್ಧಪಡಿಸಿ, ಅನುದಾನದ ನೆರವು ಕೋರಿ ಪ್ರಸ್ತಾವನೆ ಸಲ್ಲಿಸಿದರಲ್ಲದೆ, ಪವರ್‌ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಸಭೆಗೆ ಮಾಹಿತಿ ನೀಡಿದರು.

ಮೈಸೂರಿನ ಸುಸ್ಥಿರ ಪರಿಸರ ವ್ಯವಸ್ಥೆ, ನಗರ ಮೂಲಸೌಕರ್ಯವನ್ನು ಗಮನದಲ್ಲಿಟ್ಟುಕೊಂಡು ಪಾಲಿಕೆ ಅಧಿ ಕಾರಿಗಳು ಪ್ರಸ್ತಾವನೆ ಸಿದ್ಧಪಡಿಸಿದ್ದಾರೆ. ಇತ್ತೀಚೆಗಷ್ಟೇ ಮೈಸೂರಿಗೆ ಭೇಟಿ ನೀಡಿದ್ದ ವೇಳೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನಗರವನ್ನು ಅಭಿವೃದ್ಧಿಪಡಿಸುವ ಇಂಗಿತ ವ್ಯಕ್ತಪಡಿಸಿದ್ದರಲ್ಲದೇ, ಯೋಜನೆ ಅನುಷ್ಠಾನಕ್ಕೆ ಅಗತ್ಯ ನೆರವು ನೀಡುವಂತೆ ವಿಶ್ವಬ್ಯಾಂಕ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರಿಂದ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಬೆಂಗಳೂರಲ್ಲಿ ಸಭೆ ನಡೆಸಿದ್ದಾರೆ.

ಸಭೆಯು ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ನೇತೃತ್ವದಲ್ಲಿ ನಿಗದಿಯಾಗಿತ್ತಾದರೂ, ಜನವರಿ 24 ರಂದು ಬೇರೊಂದು ಮಹತ್ವದ ತುರ್ತು ಸಭೆ ಆಯೋಜನೆ ಕಾರಣ, ದೀಪಾ ಚೋಳನ್ ನೇತೃತ್ವದಲ್ಲಿ ಚರ್ಚೆ ನಡೆಸಲಾಯಿತು. ಸುಮಾರು 3 ತಾಸು ಸುದೀರ್ಘ ಚರ್ಚೆ ನಡೆದ ಬಳಿಕ ಕೆಲ ಅಂಶಗಳ ಮಾರ್ಪಾಟಿನೊಂದಿಗೆ ಶೀಘ್ರ ಅಂತಿಮ ಪ್ರಸ್ತಾವನೆ ಸಲ್ಲಿಸುವಂತೆ ವಿಶ್ವಬ್ಯಾಂಕ್ ಅಧಿಕಾರಿಗಳು ಸಲಹೆ ನೀಡಿದರು ಎಂದು ಸಭೆಯಲ್ಲಿ ಹಾಜರಿದ್ದ ಪಾಲಿಕೆ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಘನತ್ಯಾಜ್ಯ ನಿರ್ವಹಣೆ: ಯೋಜನೆಯಡಿ ಘನತ್ಯಾಜ್ಯ ನಿರ್ವಹಣೆ, ಸಂಗ್ರಹಣೆ, ವಿಂಗಡಣೆ, ಮರು ಬಳಕೆ, ಸಂಸ್ಕರಣೆ ಮತ್ತು ವಿಲೇವಾರಿ ಮೂಲಕ ನಗರದ ಸ್ವಚ್ಛತೆ, ಪರಿಸರ ಸಂರಕ್ಷಣೆ ಮಾಡಲು ಪ್ರಸ್ತಾವನೆಯಲ್ಲಿ ನಮೂದಿಸಿದ್ದು, ಭೂ ಕುಸಿತದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು, ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ತ್ಯಾಜ್ಯ ನಿರ್ವಹಣೆ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ಕಣ್ಗಾವಲು ವ್ಯವಸ್ಥೆ: ಮೈಸೂರು ನಗರದಾದ್ಯಂತ ಸುಧಾರಿತ ತಂತ್ರಜ್ಞಾನ ಹೊಂದಿರುವ ಹೈ–ಡೆಫಿನಿಷನ್ ಕ್ಯಾಮರಾಗಳು ಸಂವೇದಕಗಳು ಮತ್ತು ಸಾಫ್ಟ್‌ವೇರ್‌ಗಳೊಂದಿಗೆ ಸುರಕ್ಷತೆ ಮತ್ತು ನಿರ್ವಹಣೆಯನ್ನು ಅಭಿವೃದ್ಧಿಪಡಿಸುವ ಹಾಗೂ ಸ್ಮಾರ್ಟ್ ಸಿಟಿ ಉಪಕ್ರಮಗಳನ್ನು ಬೆಂಬಲಿಸುವುದು ಇದರ ಉದ್ದೇಶವಾಗಿದೆ.

ಕಣ್ಗಾವಲು ಉಪಕರಣಗಳು, ನಿಯಂತ್ರಣ ಕೇಂದ್ರಗಳು, ಸರ್ವರ್ ಮೂಲಸೌಕರ್ಯ, ಸಂಚಾರ, ಅಪರಾಧ ನಿಯಂತ್ರಣ ಸೇರಿದಂತೆ ಸಾರ್ವಜನಿಕರ ಸುರಕ್ಷತಾ ಕ್ರಮ ವಹಿಸಲು ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ. ಇದರಿಂದ ರಸ್ತೆ ಅಪಘಾತಗಳ ಡೇಟಾಬೇಸ್ ಅಭಿವೃದ್ಧಿ, ಡ್ರೋಣ್ ಆಧಾರಿತ ರೋಡ್ ಮ್ಯಾಪಿಂಗ್, ಉತ್ತಮ ಗುಣಮಟ್ಟದ ರಸ್ತೆ, ಅಪಘಾತ ನಿಯಂತ್ರಿಸುವ ಬಗ್ಗೆಯೂ ಪಾಲಿಕೆ ಅಧಿಕಾರಿಗಳು ಪ್ರಸ್ತಾಪಿಸಿದ್ದಾರೆ.

ಮಳೆ ನೀರು ಚರಂಡಿ: ಮಳೆ ನೀರಿನ ಚರಂಡಿ ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿದು ಹೋಗಲು ಸಂಪರ್ಕ ಜಾಲ ಸದೃಢಪಡಿಸುವುದು, ಪ್ರವಾಹಗಳಂತಹ ಸ್ಥಿತಿ ಉಂಟಾದಾಗ ಅಪಾಯವಾಗದಂತೆ ಕ್ರಮ ವಹಿಸುವುದು, ಎಸ್‌ಟಿಪಿ, ತ್ಯಾಜ್ಯ ಸಂಸ್ಕರಣಾ ಕೇಂದ್ರಗಳನ್ನು ಸಂಪನ್ಮೂಲ ಉತ್ಪಾದನೆಗಾಗಿ ಬಳಕೆ, ಸ್ವಚ್ಛತೆ, ಹವಾಮಾನ ನಿಯಂತ್ರಣ ಹಾಗೂ ಸಾರ್ವಜನಿಕ ಆರೋಗ್ಯ ಸುಧಾರಿಸುವ ಬಗ್ಗೆ ಯೋಜನೆ ರೂಪಿಸಲಾಗಿದೆ.

ಮಲಿನ ನೀರಿನ ಸುಧಾರಣೆ: ಪಾಲಿಕೆ ಸಿದ್ಧಪಡಿಸಿರುವ ಪ್ರಸ್ತಾವನೆಯಲ್ಲಿ ಹಳೆಯ ತ್ಯಾಜ್ಯ ನೀರಿನ ಸಂಸ್ಕರಣಾ ಘಟಕಗಳನ್ನು ನವೀಕರಿಸಿ ಮಾಲಿನ್ಯ ಕಡಿಮೆ ಮಾಡುವುದು, ನೀರಿನ ಮರು ಬಳಕೆ, ಶುದ್ಧ ಜಲ ಮೂಲ ಸಂರಕ್ಷಣೆ, ಸಾರ್ವಜನಿಕ ಆರೋಗ್ಯ ಮತ್ತು ಸುಸ್ಥಿರ ಅಭಿವೃದ್ಧಿಯೂ ಸೇರಿದೆ.

ನೀರು ಸರಬರಾಜು: ನೀರಿನ ಸೋರಿಕೆ ತಡೆದು ಅನಧಿಕೃತ ಸಂಪರ್ಕ ಸ್ಥಗಿತ, ಜಾಲ ಬಲಪಡಿಸುವ, ಅಧಿಕೃತ ಮೀಟರ್ ಅಳವಡಿಸಿ ನಿರಂತರ ಶುದ್ಧ ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸಲೂ ಈ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ.

ಸಭೆಯಲ್ಲಿ ಚರ್ಚೆಯಾದ ಪ್ರಮುಖ ಅಂಶಗಳು

- ಸಮಗ್ರ ಘನತ್ಯಾಜ್ಯ ನಿರ್ವಹಣೆ: 110 ಕೋಟಿ ರೂ.
- ನಗರ ಕಣ್ಗಾವಲು ವ್ಯವಸ್ಥೆ ಜಾರಿ: 410 ಕೋಟಿ ರೂ.
- ಡಿಜಿಟಲ್ ರಸ್ತೆ ಮಾಪನ, ಜಿಪಿಆರ್ ಪರಿಹಾರಗಳು: 9.02 ಕೋಟಿ ರೂ.
- ಮಳೆ ನೀರು ಚರಂಡಿ ವ್ಯವಸ್ಥೆಯ ಪುನರ್ರಚನೆ: 500 ಕೋಟಿ ರೂ.
- ಯುಟಿಲಿಟಿ ಕಾರಿಡಾರ್‌ಗಳ ಸ್ಥಾಪನೆ: 400 ಕೋಟಿ ರೂ.
- ಹಸಿರು ವಲಯಕ್ಕಾಗಿ ಕೊಳಚೆ ನೀರಿನ ಸಂಸ್ಕರಣಾ ಸೌಲಭ್ಯಗಳ ನವೀಕರಣ: 1,138 ಕೋಟಿ ರೂ.
- ನೀರು ಸರಬರಾಜು ಸಾಮರ್ಥ್ಯ ಹೆಚ್ಚಿಸುವುದು: 276 ಕೋಟಿ ರೂ.

ದೇವರಾಜ ಸಂಚಾರ ಠಾಣೆ ಪೊಲೀಸರಿಂದ ರಕ್ತದಾನ

ಮೈಸೂರು, ಜ. 28(ಆರ್‌ಕೆ)– ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ಮೈಸೂರಿನ ದೇವರಾಜ ಸಂಚಾರ ಠಾಣೆ ಆವರಣದಲ್ಲಿ ಇಂದು ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿ ಎಸ್.ಜಾಹ್ನವಿ, ಸಂಚಾರ ಉಪವಿಭಾಗದ ಎಸಿಪಿ ಪರಶುರಾಮಪ್ಪ ಮಾರ್ಗದರ್ಶನದಂತೆ ದೇವರಾಜ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ವಿ.ಡಿ. ಮಮತಾ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇವರಾಜ ಠಾಣೆ ಇನ್‌ಸ್ಪೆಕ್ಟರ್ ರಘು, ಸಂಚಾರ ಠಾಣೆ ಸಬ್ ಇನ್‌ಸ್ಪೆಕ್ಟರ್‌ಗಳಾದ ಚಂದ್ರಶೇಖರ್, ಶಿವಕುಮಾರ, ಎಎಸ್‌ಐ ಬಸವರಾಜು ಸೇರಿದಂತೆ 40ಕ್ಕೂ ಹೆಚ್ಚು ಸಿಬ್ಬಂದಿಗಳು ರಕ್ತದಾನ ಮಾಡಿದರು.

ಮೈಸೂರಿನ ಅಪೋಲೋ ಬಿಜಿಎಸ್ ರಕ್ತನಿಧಿ ಕೇಂದ್ರದ ವೈದ್ಯರು, ನರ್ಸ್‌ಗಳು ದಾನಿಗಳಿಂದ ರಕ್ತ ಪಡೆದರಲ್ಲದೇ, ಖ್ಯಾತ ಮೂಳೆ ತಜ್ಞ ಶ್ರೇಯಸ್ ಆಳ್ವ ಅವರು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಬಿಎಂಡಿ ಪರೀಕ್ಷೆ ಮಾಡಿ ಮೂಳೆ ಸಾಂದ್ರತೆ ಮತ್ತು ಸದೃಢವಾಗಿರಿಸಲು ಕ್ರಮ ವಹಿಸುವಂತೆ ಸಲಹೆ ನೀಡಿದರು.

ಆಹಾರ ಪದ್ಧತಿ, ಜೀವನ ಶೈಲಿ ಬದಲಾಯಿಸಿಕೊಂಡು ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಂಡು ನಿತ್ಯ ವ್ಯಾಯಾಮ, ಯೋಗ, ಧ್ಯಾನ ಮಾಡುವ ಮೂಲಕ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಂಡು ಒತ್ತಡದಿಂದ ದೂರ ಉಳಿಯಬೇಕೆಂದು ಇನ್‌ಸ್ಪೆಕ್ಟರ್ ಮಮತ ಇದೇ ಸಂದರ್ಭ ಸಿಬ್ಬಂದಿಗೆ ಕಿವಿಮಾತು ಹೇಳಿದರು.



ನೆಟ್‌ವರ್ಕ್ ಸಮಸ್ಯೆ: ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ನೋಂದಣಿ, ಇಸಿ ಪಡೆಯಲು ಪರದಾಟ



ಮೈಸೂರು, ಜ.28(ಆರ್‌ಕೆ)– ನೆಟ್‌ವರ್ಕ್ ಸಮಸ್ಯೆ, ಸರ್ವರ್ ದೋಷದಿಂದಾಗಿ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಸ್ವತ್ತುಗಳ ನೋಂದಣಿ ಪ್ರಕ್ರಿಯೆ ಕುಂಠಿತವಾಗಿದೆ.

ಬೆಂಗಳೂರಿನ ಸಾಫ್ಟ್‌ವೇರ್ ಕೇಂದ್ರದಲ್ಲಿನ ತಾಂತ್ರಿಕ ದೋಷದಿಂದಾಗಿ ಕಳೆದ ಒಂದು ವಾರದಿಂದ ರಾಜ್ಯಾದ್ಯಂತ ನೆಟ್‌ವರ್ಕ್ ಸಮಸ್ಯೆ ಉಂಟಾಗಿದ್ದು, ಉಪ ನೋಂದಣಾಧಿಕಾರಿ ಕಚೇರಿಗಳ ಕೆಲಸಕ್ಕೆ ಅಡ್ಡಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಸಿ (ಎನ್‌ಕಂಬರೆನ್ಸ್ ಸರ್ಟಿಫಿಕೇಟ್)ಗಾಗಿ ಅರ್ಜಿ ಸಲ್ಲಿಸುವ ಸಾರ್ವಜನಿಕರಿಗೆ ಸೇವೆ ಲಭ್ಯವಾಗುತ್ತಿಲ್ಲ. ನೆಟ್‌ವರ್ಕಿಂಗ್, ಸರ್ವರ್ ಸ್ಲೋ ಇದೆ. ತಾಂತ್ರಿಕ ತೊಂದರೆಯಾಗುತ್ತಿದೆ ಎಂದು ಉಪ ನೋಂದಣಾಧಿಕಾರಿ ಕಚೇರಿಗಳ ಸಿಬ್ಬಂದಿ ಹೇಳುತ್ತಿದ್ದಾರೆ.

ನೋಂದಣಿ ಸೇರಿದಂತೆ ಹಲವು ಸೇವೆಗೆ ಅರ್ಜಿ ಸಲ್ಲಿಸುವವರಿಗೆ ಶುಲ್ಕ ಪಾವತಿಯನ್ನು ಆನ್‌ಲೈನ್‌ನಲ್ಲಿ ತೆಗೆದುಕೊಳ್ಳದ ಕಾರಣ ಸೇವೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಇದು ಕೇವಲ ಮೈಸೂರು ಸಮಸ್ಯೆಯಲ್ಲ. ರಾಜ್ಯಾದ್ಯಂತ ಎಲ್ಲಾ ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲೂ ಜನರಿಗೆ ತೊಂದರೆಯಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ಪರಿಣಾಮ ಆಸ್ತಿಗಳ ಎನ್‌ಕಂಬರೆನ್ಸ್ ಸರ್ಟಿಫಿಕೇಟ್ (ಇಸಿ) ಪಡೆಯಲು, ಕ್ರಯಪತ್ರ, ಕರಾರು, ವಿವಾಹ ನೋಂದಣಿ ಮಾಡಲು ತೊಂದರೆಯಾಗಿದ್ದು, ಸಾರ್ವಜನಿಕರು ತೀವ್ರ ಸಮಸ್ಯೆ ಎದುರಿಸುವಂತಾಗಿದೆ. ಈ ಬಗ್ಗೆ ಇಲಾಖೆಯ ಯಾವುದೇ ಅಧಿಕಾರಿ ಪ್ರತಿಕ್ರಿಯೆ ನೀಡುತ್ತಿಲ್ಲ.

ನಕ್ಕರೆ ಅದೇ ಸ್ವರ್ಗ

ರಾಜ : ಮಂತ್ರಿಯುವರೇ ಯಾಕೆ ಅವನನ್ನು ಹೊಡೀತಿದ್ದೀರಾ...?
ಮಂತ್ರಿ : ರಾಜರೇ ಇವನು ನಮ್ಮ ಸೇನಾ ರಹಸ್ಯವನ್ನು ಹೊರಗಡೆ ಹೇಳಿಬಿಟ್ಟಿದ್ದಾನೆ!!!
ರಾಜ : ನಮ್ಮತ್ರ ಸೇನೆಯೇ ಇಲ್ಲವಲ್ಲ...!
ಮಂತ್ರಿ : ಅದನ್ನೇ ಹೇಳಿಬಿಟ್ಟಿದ್ದಾನೆ ಮಹಾರಾಜ!!

ಮೈಸೂರು ಮಿತ್ರ

ಬುಧವಾರ, 29 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಮನುಷ್ಯನ ಸ್ವಭಾವವೇ ಹಾಗೆ ತಪ್ಪು ತಮ್ಮದಾದರೆ ವಕೀಲರಾಗುತ್ತಾರೆ. ತಪ್ಪು ಬೇರೆಯವರದಾದರೆ ನ್ಯಾಯಾಧೀಶರಾಗುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇಲಿ ಸಿಕ್ಕರೆ ಬೆಕ್ಕು ಆಗುವುದು ಹುಲಿ.

ನಿಮ್ಮ ಪತ್ರಗಳು

ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಯಲ್ಲಿದೆಯೇ?

ಮಾನ್ಯರೆ,

ಜನವರಿ 26ರಂದು ಇಡೀ ದೇಶವೇ 76ನೇ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಿದೆ. ಆದರೆ ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆ 26.1.25 ರಂದು ಪತ್ರಿಕೆಗಳಲ್ಲಿ ಗಣರಾಜ್ಯೋತ್ಸವದ ಪ್ರಯುಕ್ತ ನೀಡಿರುವ ಜಾಹೀರಾತಿನಲ್ಲಿ ಒಂದೆಡೆ, ಫ್ಯಾಸಿಸಮ್ ತಿರಸ್ಕರಿಸೋಣ, ಕೋಮುವಾದ ಹಿಮ್ಮೆಟ್ಟಿಸೋಣ, ಸಂವಿಧಾನ ಬಲಪಡಿಸೋಣ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯೋಣ ಎನ್ನುವ ಸಾಲುಗಳಿವೆ. ಅದನ್ನು ದೇಶ ಇಂದಿಗೂ ಪಾಲಿಸುತ್ತಾ ಬಂದಿದೆ. ಇದನ್ನು ಒಪ್ಪಬಹುದು.


ಆದರೆ ಅದರ ಕೆಳಗಡೆ ಸಾಲಿನಲ್ಲಿ ಇಂದು ನಮ್ಮ ಸಂವಿಧಾನ ಮತ್ತು ಗಣರಾಜ್ಯ ಅಪಾಯದಲ್ಲಿದೆ. ಫ್ಯಾಸಿಸ್ಟ್ ಮತ್ತು ವಿಭಜಕ ಶಕ್ತಿಗಳು ನಮ್ಮ ರಾಷ್ಟ್ರದ ಒಕ್ಕೂಟ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ದುರ್ಬಲಗೊಳಿಸುತ್ತಿವೆ ಎಂದು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳು ಹೇಳಿರುವ ವಾಕ್ಯಗಳನ್ನು ಉಲ್ಲೇಖ ಮಾಡಲಾಗಿದೆ.

ಹಾಗಾದರೆ ನಮ್ಮ ದೇಶದಲ್ಲಿ ಇಂದು 1975ರಲ್ಲಿ ಇದ್ದಂತೆ ತುರ್ತು ಪರಿಸ್ಥಿತಿ ಜಾರಿಯಲ್ಲಿದೆಯೇ? ಅಂದಿನಂತೆ ಪತ್ರಿಕಾ ಸೆನ್ಸಾರ್ ಜಾರಿ ಮಾಡಿದೆಯೇ? ರಾಜಕೀಯ ವಿರೋಧಿಗಳನ್ನು ಅಂದಿನಂತೆ ಜೈಲಿಗೆ ಹಾಕಿರುವರೇ? 1984ರಲ್ಲಿ ಸಿಖ್ಖರ ಮಾರಣಹೋಮ ನಡೆದಾಗ ಫ್ಯಾಸಿಸಮ್, ಕೋಮುವಾದ ಇರಲಿಲ್ಲವೇ? ಸಂವಿಧಾನಕ್ಕೆ 71 ಬಾರಿ ತಿದ್ದುಪಡಿ ಮಾಡಿದಾಗ ಸಂವಿಧಾನಕ್ಕೆ ಅಪಾಯವಾಗಲಿಲ್ಲವೇ? ಪಾಕಿಸ್ತಾನ್ ಜಿಂದಾಬಾದ್ ಎಂದಾಗ ಸಂವಿಧಾನ, ಗಣರಾಜ್ಯಕ್ಕೆ ಅಪಾಯವಾಗಲಿಲ್ಲವೇ? ಮುಸ್ಲಿಂ ಓಟ್ ಬ್ಯಾಂಕ್ ಸಲುವಾಗಿ ವಕ್ಫ್ ಕಾಯ್ದೆ ಜಾರಿ ಮಾಡಿ ಇಡೀ ಭಾರತವೇ ವಕ್ಫ್ ಆಸ್ತಿ ಎಂದು ಹೇಳುವಾಗ ಗಣರಾಜ್ಯ, ಸಂವಿಧಾನ ಅಪಾಯದಲ್ಲಿರಲಿಲ್ಲವೇ? ಕಾಶ್ಮೀರದಲ್ಲಿ ಭಯೋತ್ಪಾದಕರು ಅಟ್ಟಹಾಸ ಮೆರೆಯುತ್ತಿದ್ದಾಗ ಅವರನ್ನು ನಿರ್ನಾಮ ಮಾಡದೆ ಬಿಟ್ಟಾಗ ದೇಶ ಅಪಾಯದಲ್ಲಿರಲಿಲ್ಲವೇ? ಅಸ್ಸಾಂ, ಬಂಗಾಳಗಳಲ್ಲಿ ಅಕ್ರಮವಾಗಿ ಬಾಂಗ್ಲಾದೇಶಿಯರನ್ನು ನುಸುಳಲು ಬಿಟ್ಟಾಗ, ಪಾಕಿಸ್ತಾನಿಯರು ಅಕ್ರಮವಾಗಿ ನುಸುಳಿದಾಗ ದೇಶ ಅಪಾಯದಲ್ಲಿರಲಿಲ್ಲವೆ? ಕಾಶ್ಮೀರದ 370ನೇ ವಿಧಿಯನ್ನು ರದ್ದುಪಡಿಸಿದಾಗ ಅದನ್ನು ನಾವು ಅಧಿಕಾರಕ್ಕೆ ಬಂದರೆ ಮತ್ತೆ ನೀಡುತ್ತೇವೆ ಎನ್ನುವುದು ಸಂವಿಧಾನ, ಗಣರಾಜ್ಯದ ಬಲವರ್ಧನೆಯೇ? ಕಾಶ್ಮೀರದಲ್ಲಿ ಕಾಶ್ಮೀರಿ ಪಂಡಿತರನ್ನು ಕಾಶ್ಮೀರದಿಂದಲೇ ಹೊರ ಹಾಕಿದಾಗ ಗಣರಾಜ್ಯ ಅಪಾಯದಲ್ಲಿರಲಿಲ್ಲವೇ? 293 ಸದಸ್ಯ ಬಲದ ಬಿಜೆಪಿ ನೇತೃತ್ವದ ಎನ್‌ಡಿಎ, ಸರ್ಕಾರ ಬಹುಮತದಿಂದ ಕೇಂದ್ರದಲ್ಲಿ ಸರ್ಕಾರ ರಚಿಸಿದೆ. ಹೀಗಿರುವಾಗ ಚುನಾವಣೆ ಭಾಷಣ ಮಾಡುವಾಗ ಇಂತಹ ಹೇಳಿಕೆಗಳನ್ನು ಒಪ್ಪಬಹುದು. ಆದರೆ ಸರ್ಕಾರದ ಅಧಿಕೃತ ಗಣರಾಜ್ಯೋತ್ಸವ ಸಂದರ್ಭದಲ್ಲಿ ಕೇಂದ್ರ ಸರ್ಕಾರವನ್ನು ಉದ್ದೇಶಿಸಿ ಈ ರೀತಿ ಗಣರಾಜ್ಯ ಮತ್ತು ಸಂವಿಧಾನ ಅಪಾಯದಲ್ಲಿದೆ ಎಂದು ರಾಜ್ಯ ಸರ್ಕಾರ ಅಧಿಕೃತವಾಗಿ ಹೇಳುವುದು ಸಂವಿಧಾನ ವಿರೋಧಿ ನಡೆಯಲ್ಲವೇ?

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಸಾರಿಗೆ ಬಸ್ಸಿನಲ್ಲಿ ಜಾಹೀರಾತು ಅವಶ್ಯಕತೆಯಿದೆಯೇ?

ಮಾನ್ಯರೆ,



ಇತ್ತೀಚಿನ ದಿನಗಳಲ್ಲಿ ಅನೇಕ ಕಂಪನಿಗಳ ಪದಾರ್ಥಗಳು ಸಾಮಾನ್ಯ ಜನರಿಗೆ ಆಕರ್ಷಣೆಯಾಗಲಿ ಎಂಬ ಉದ್ದೇಶದಿಂದಲೇ ವಿಮಲ್ ಪಾನ್ ಮಸಾಲ, ಆಶೀರ್ವಾದ ಪೈಪ್ಸ್, ದ್ವಿಚಕ್ರಗಳು ಹಾಗೂ ಇನ್ನಿತರ ಜಾಹೀರಾತು ಫಲಕಗಳನ್ನು ಅಳವಡಿಸಿಕೊಂಡು ಮೈಸೂರು ನಗರ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ಬಸ್ಸುಗಳಲ್ಲಿ ಸಹ ಹೆಚ್ಚಾಗಿ ಬಳಸಲಾಗುತ್ತಿದೆ. ಇಂತಹ ಜಾಹೀರಾತುಗಳು ಬಸ್ಸಿಗೆ ಅಳವಡಿಸಿ ಪ್ರಚಾರ ಮಾಡುವುದು ಸರಿಯೇ? ಕಳೆದೆರಡು ದಿನಗಳ ಹಿಂದೆ ಮೈಸೂರು – ಊಟಿ ರಸ್ತೆಯಲ್ಲಿ ಮಹಿಳೆಯೊಬ್ಬರು ಬಸ್ಸಿನ ಕಿಟಕಿಯ ಆಚೆ ತಲೆ ಹಾಕಿರುವಾಗ ಅಪಘಾತವಾಗಿ ಜೀವ ಕಳೆದುಕೊಂಡಿರುವುದನ್ನು ಕಾಣಬಹುದು. ಸಾರ್ವಜನಿಕರು ಬಸ್ಸುಗಳಲ್ಲಿ ಪ್ರಯಾಣ ಮಾಡುವಾಗ ಯಾವ ರೀತಿ ನಡೆದುಕೊಳ್ಳಬೇಕು. ಚಿಲ್ಲರೇ ಸಮಸ್ಯೆಗೆ ಸೇರಿದಂತೆ ಈ ವಿಷಯಕ್ಕೆ ಸಂಬಂಧಿಸಿದ ಮನವರಿಕೆ ಮಾಡಿಕೊಡುವಂತಹ ಜಾಹೀರಾತು ಫಲಕಗಳನ್ನು ಅಳವಡಿಸಿದರೆ ಅನುಕೂಲವಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಸಾರಿಗೆ ಸಚಿವರು ಹಾಗೂ ಸಾರಿಗೆ ನಿಗಮದ ಹಿರಿಯ ಅಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಪ್ರಯಾಣಕ್ಕೆ ಅನುಕೂಲವಾದ ಜಾಹೀರಾತುಗಳನ್ನು ಅಳವಡಿಸುವುದು ಸೂಕ್ತ ಎನಿಸುತ್ತದೆ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ವಿಪರ್ಯಾಸ!

ಮಾನ್ಯರೆ,

ಗೃಹಲಕ್ಷ್ಮಿ ಹಣದಲ್ಲಿ ಕೊಳವೆ ಬಾವಿ ತೋಡಿಸಿದ ಮಹಿಳೆ.....
ಗೃಹಲಕ್ಷ್ಮಿ ಹಣದಲ್ಲಿ ಮಗಳಿಗೆ ಕಂಪ್ಯೂಟರ್ ಕೊಡಿಸಿದ ಮಹಿಳೆ....
ಗೃಹಲಕ್ಷ್ಮಿ ಹಣದಲ್ಲಿ ಶೌಚಾಲಯ ನಿರ್ಮಿಸಿದ ಮಹಿಳೆ...
ಇಂತಹ ಸುದ್ದಿಗಳನ್ನು ಓದುವಾಗ ಖುಷಿಯಾಗುತ್ತದೆ.
ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಆತ್ಮಹತ್ಯೆಗೆ ಶರಣಾದ ಮಹಿಳೆ....
ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಊರು ತೊರೆದ ಮಹಿಳೆ....
ಇಂತಹ ಸುದ್ದಿಗಳು ಬೇಸರ ತರಿಸುತ್ತವೆ.
ಗೃಹಲಕ್ಷ್ಮಿಯಂತಹ ಯೋಜನೆಗಳಿದ್ದರೂ ರಾಜ್ಯದ ಮಹಿಳೆಯರು ಮೈಕ್ರೋ ಫೈನಾನ್ಸ್ ಕಂಪನಿಯ ಬಲೆಗೆ ಬಿದ್ದುದು ವಿಪರ್ಯಾಸ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು

ಪಾಲಿಕೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆ?

ಮಾನ್ಯರೆ,

ಮೈಸೂರಿನ ಚಾಮರಾಜಪುರಂ ದೇವಪಾರ್ಥಿವ ರಸ್ತೆ ಹಾಗೂ ವಿಷ್ಣುವರ್ಧನ ರಸ್ತೆಯ ಐಕಾನಿಕ್ ಹೋಟೆಲ್ ಎದುರು ರಸ್ತೆಯನ್ನು ಅಗೆದ ಒಂದು ವಾರವಾದರೂ ಮುಚ್ಚದೇ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯುಂಟು ಮಾಡಿದ್ದಾರೆ. ಬಹುಶಃ ಕಟ್ಟಿಕೊಂಡ ಒಳಚರಂಡಿಯನ್ನು ಶುಚಿಗೊಳಿಸಲು ಮನೆಯ ಮಾಲೀಕರು ಅನಧಿಕೃತವಾಗಿ ರಸ್ತೆಯನ್ನು ಮುಚ್ಚದೇ ಹಾಗೇ ಬಿಟ್ಟಿದ್ದಾರೆಂದು ತೋರುತ್ತದೆ. ಪಾಲಿಕೆಯ ಅಧಿಕಾರಿಗಳು ಈ ಕಡೆ ಗಮನಹರಿಸಿ ಅಗೆದ ರಸ್ತೆಯನ್ನು ಮುಚ್ಚಿ ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಭಗವದ್‌ಗೀತೆಯಲ್ಲಿ ಯೋಗ

ಭಗವದ್ಗೀತೆಯು ಭಾರತೀಯರಿಗೆ ಪೂಜ್ಯ ಗ್ರಂಥ. ಅಧ್ಯಾತ್ಮ, ಧರ್ಮ, ದರ್ಶನ ಮುಂತಾದ ಅನೇಕ ವಿಷಯಗಳಲ್ಲಿ ಮಾರ್ಗದರ್ಶಕ ಗ್ರಂಥ. ಗೀತೆಯ ಪ್ರಾಥಮಿಕ ಉದ್ದೇಶ ಕರ್ತವ್ಯವಿಮುಖನಾಗಿದ್ದ ಅರ್ಜುನನನ್ನು ಕರ್ಮಯೋಗದಲ್ಲಿ ತೊಡಗಿಸುವುದಾಗಿತ್ತು. ಈ ಅವಕಾಶವನ್ನು ಬಳಸಿಕೊಂಡು ಭಗವಾನ್ ಕೃಷ್ಣನು ಸಮಸ್ತ ಜಗತ್ತಿನ ಜಿಜ್ಞಾಸುಗಳಿಗೆ ಯೋಗ ಸ್ವರೂಪವನ್ನು ಸರಳ ಭಾಷೆಯಲ್ಲಿ ತಿಳಿಸಿದ್ದಾನೆ. ಆದ್ದರಿಂದಲೇ ಗೀತೆಯು ಕೃಷ್ಣನನ್ನು ಯೋಗೇಶ್ವರ ಎಂದು ಸ್ತುತಿಸಿದೆ.

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ।
ತತ್ರ ಶ್ರೀರ್ವಿಜಯೋ ಭೂತಿ ಧ್ರುವಾ ನೀತಿರ್ಮತಿರ್ಮಮ॥
(18–78)

(ಎಲ್ಲಿ ಯೋಗೇಶ್ವರ ಕೃಷ್ಣನಿರುವನೋ ಎಲ್ಲಿ ಬಿಲ್ಲನ್ನು ಧರಿಸಿರುವ ಅರ್ಜುನನಿರುವನೋ ಅಲ್ಲಿ ಐಶ್ವರ್ಯ ಜಯ, ಸಂಪತ್ತು, ನೀತಿ ಇವೆಲ್ಲ ದೃಢವಾಗಿರುವುದೆಂದು ನನ್ನ ಅನಿಸಿಕೆ) ಎಂಬುದೇ ಗೀತೆಯ ಕೊನೆಯ ಮಾತು.

ಯೋಗಕ್ಕೆ ತಾನೇ ಗುರು, ಆದಿಗುರು ಎಂದು ಪರಮಾತ್ಮ ಕೃಷ್ಣನು ಹೇಳಿಕೊಂಡಿದ್ದಾನೆ–

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಮವ್ಯಯಮ್।
ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾಕವೇಂಬ್ರವೀತ್॥
ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ॥
ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ ।
ಸ ಏವಾಯಂ ಮಯಾ ತೇದ್ಯ ಯೋಗಃ ಪ್ರೋಕ್ತಃ ಪುರಾತನಃ।
ಭಕ್ತೋಽಸಿ ಮೇ ಸಖಾ ಚೇತಿ ರಹಸ್ಯಂ ಹ್ಯೇತದುತ್ತಮಮ್॥
(4.1–3)

(ಈ ಶಾಶ್ವತವಾದ ಯೋಗವನ್ನು ನಾನು ವಿವಸ್ವಂತನಿಗೆ ಹೇಳಿದೆನು. ವಿವಸ್ವಂತನು ಮನುವಿಗೂ ಮನುವು ಇಕ್ಷ್ವಾಕುವಿಗೂ ಕಲಿಸಿದರು. ಹೀಗೆ ಪರಂಪರಾಪ್ರಾಪ್ತವಾದ ಯೋಗವನ್ನು ರಾಜರ್ಷಿಗಳು ಮಾತ್ರ ಅರಿತಿರುವರು. ಕಾಲವು ಕಳೆಯುತ್ತಿರಲು ಯೋಗವು ಲೋಕದಲ್ಲಿ ಅದೃಶ್ಯವಾಗಿತ್ತು. ಆ ಯೋಗವನ್ನೇ ನಾನು ನಿನಗಾಗಿ ಹೇಳುತ್ತಿದ್ದೇನೆ. ಏಕೆಂದರೆ ನೀನು ಭಕ್ತನೂ ಮಿತ್ರನೂ ಆಗಿರುವೆ. ಈ ಯೋಗವು ರಹಸ್ಯವೂ ಉತ್ತಮವೂ ಆಗಿರುವುದು)

ಈ ವಿಷಯದಲ್ಲಿ ನಾವು ಪತಂಜಲಿಯ 'ಸ ಏಷ ಪೂರ್ವೇಷಾಮ್ ಅಪಿ ಗುರುಃ ಕಾಲೇನಾನವಚ್ಛೇ ದಾತ್' ಎಂಬ ಸೂತ್ರವನ್ನು ನೆನಪಿಸಿಕೊಳ್ಳಬಹುದು.

ಭಗವದ್ಗೀತೆಯಲ್ಲಿ ಯೋಗ, ಯೋಗಿ, ಯುಕ್ತ ಎಂಬ ಶಬ್ದಗಳು ಹೆಚ್ಚಾಗಿ ಪ್ರಯುಕ್ತವಾಗಿವೆ. ಅನೇಕ ವಿಧವಾದ ಯೋಗಗಳನ್ನು ಶ್ರೀ ಕೃಷ್ಣನು ಇಲ್ಲಿ ಉಪದೇಶಿಸಿದ್ದಾನೆ. ಭಗವದ್ಗೀತೆಯಲ್ಲಿರುವ ಹದಿನೆಂಟು ಅಧ್ಯಾಯಗಳಿಗೂ ಯೋಗವೆಂಬ ಹೆಸರನ್ನೇ ಕೊಟ್ಟಿದ್ದಾರೆ. ಅರ್ಜುನ ವಿಷಾದ ಯೋಗ, ಸಾಂಖ್ಯಯೋಗ, ಕರ್ಮಯೋಗ, ಜ್ಞಾನಕರ್ಮಸಂನ್ಯಾಸಹೋಗ, ಕರ್ಮ ಸಂನ್ಯಾಸಯೋಗ, ಆತ್ಮ ಸಂಯಮ ಯೋಗ, ಜ್ಞಾನ ವಿಜ್ಞಾನ ಯೋಗ, ಅಕ್ಷರಬ್ರಹ್ಮ ಯೋಗ, ರಾಜವಿದ್ಯಾ ರಾಜಗುಹ್ಯಯೋಗ, ವಿಭೂತಿಯೋಗ, ವಿಶ್ವರೂಪದರ್ಶನ ಯೋಗ, ಭಕ್ತಿಯೋಗ, ಕ್ಷೇತ್ರ ಕ್ಷೇತ್ರಜ್ಞ ವಿಭಾಗ ಯೋಗ, ಗುಣತ್ರಯ ವಿಭಾಗ ಯೋಗ, ಪುರುಷೋತ್ತಮಯೋಗ, ದೈವಾಸುರ ಸಂಪದ್ವಿಭಾಗ ಯೋಗ, ಶ್ರದ್ಧಾತ್ರಯ ವಿಭಾಗ ಯೋಗ, ಮೋಕ್ಷ ಸಂನ್ಯಾಸ ಯೋಗ ಎಂಬ ಹೆಸರುಗಳು ಯಥಾಕ್ರಮವಾಗಿ ಹದಿನೆಂಟು ಅಧ್ಯಾಯಗಳಿಗೆ ಇವೆ – ಈ ಹೆಸರುಗಳನ್ನು ಯಾರು ಇಟ್ಟರೋ ತಿಳಿಯದು. ಮಹಾಭಾರತದಲ್ಲಿ ಈ ಯಾವ ಹೆಸರುಗಳೂ ಇಲ್ಲ.

ಭಗವದ್ಗೀತೆಯು ತಾನಾಗಿ ಕೆಲವು ಯೋಗಗಳ ಹೆಸರನ್ನು ಹೇಳಿದೆ.

ಲೋಕೇ ಸ್ಮಿನ್ ದ್ವಿವಿಧಾನಿಷ್ಠಾ ಪುರಾ ಪ್ರೋಕ್ತಾಮಯಾನಘ।
ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್।
(3.3)

ಎಂಬಲ್ಲಿ ಜ್ಞಾನಯೋಗ, ಕರ್ಮಯೋಗಗಳನ್ನು ನಮೂದಿಸಲಾಗಿದೆ.

ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಮ್ ।
ಅಭ್ಯಾಸ ಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ । (12.9)

ಎಂಬಲ್ಲಿ ಅಭ್ಯಾಸ ಯೋಗವನ್ನು ಭಗವಂತನು ಹೇಳಿದ್ದಾನೆ.

ಮಾಂ ಚ ಯೋ, ವ್ಯಭಿಚಾರೇಣ ಭಕ್ತಿಯೋಗೇನ ಸೇವತೇ
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥ (14.26)

ಎಂಬ ಶ್ಲೋಕದಲ್ಲಿ ಭಕ್ತಿಯೋಗ ಎಂಬ ಶಬ್ದವು ಪ್ರಯುಕ್ತವಾಗಿದೆ.


ಚೇತಸಾ ಸರ್ವಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಃ
ಬುದ್ಧಿಯೋಗಮುಪಾಶ್ರಿತ್ಯ ಮಚ್ಚಿತ್ತಃ ಪತತಂ ಭವ ॥ (18.57)

ಎಂಬಲ್ಲಿ ಬುದ್ಧಿ ಯೋಗದ ಪ್ರಸ್ತಾವವಿದೆ. ಬುದ್ಧಿಯೋಗವೆಂದರೆ ಜ್ಞಾನಯೋಗವೇ ಎಂದು ವ್ಯಾಖ್ಯಾನಕಾರರ ಅಭಿಪ್ರಾಯ.

ಶುಭಾ ಶುಭಫಲೈರೇವಂ ಮೋಕ್ಷ್ಯಸೇ ಕರ್ಮ ಬಂಧನೈಃ ।
ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೆಷ್ಯಸಿ ॥ (9.28)

ಇಲ್ಲಿ ಸಂನ್ಯಾಸಯೋಗ ಶಬ್ದ ಪ್ರಯೋಗವನ್ನು ಕಾಣಬಹುದು.

ಬಾಹ್ಯ ಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ ಯತ್ಸುಖಮ್ ।
ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯ್ಯಮಶ್ನುತೇ ॥ (5.21)



ಈ ಶ್ಲೋಕದಲ್ಲಿ ಬ್ರಹ್ಮ ಯೋಗ ಎಂದು ಹೊಸ ಯುಗವನ್ನು ತೋರಿಸಿದ್ದಾನೆ ಭಗವಂತನು. ಹೀಗೆ ಭಗವದ್ಗೀತೆಯು ನಾನಾ ಯೋಗಗಳನ್ನು ಕಲಿಸಿದೆ. ಇವುಗಳ ಅನುಷ್ಠಾನವನ್ನು ಮಾತ್ರವಲ್ಲದೆ ಅಷ್ಟಾಂಗ ಯೋಗವನ್ನು ಆರನೆಯ ಅಧ್ಯಾಯದಲ್ಲಿ ಸೂಕ್ಷ್ಮವಾಗಿ ತಿಳಿಸಿಕೊಡಲಾಗಿದೆ.

ಯೋಗಿಯಾಗಲು ಬಯಸುವವನು ಕರ್ಮಯೋಗದಿಂದಲೇ ಆರಂಭಿಸಬೇಕು. ಕರ್ಮವು ಕರ್ಮಯೋಗವಾಗುವುದು ಹೇಗೆ? ಸ್ವಾರ್ಥಾಸಕ್ತಿಯನ್ನು ಬಿಟ್ಟು ಭಗವಂತನ ಸೇವೆಯೆಂಬ ಭಾವನೆಯಿಂದ ಕರ್ಮವನ್ನು ಮಾಡಿದಾಗ ಅದು ಕರ್ಮಯೋಗವಾಗುತ್ತದೆ.

ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।
ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮ ಶುದ್ಧಯೇ ॥ (5.11)

(ಯೋಗಿಗಳು ತಾವು ಮಾಡುತ್ತಿರುವೆವು ಎಂಬ ಅಭಿಮಾನವನ್ನಿಟ್ಟುಕೊಳ್ಳದೆ ಶರೀರದಿಂದ, ಮನಸ್ಸಿನಿಂದ, ಬುದ್ಧಿಯಿಂದ, ಕೇವಲ ಇಂದ್ರಿಯಗಳಿಂದ ಕರ್ಮವನ್ನು ಮಾಡುತ್ತಾರೆ. ಆತ್ಮಶುದ್ಧಿಗಾಗಿ ಅವರು ಈ ಕೆಲಸಗಳನ್ನೆಲ್ಲ ಮಾಡುವುದು) ಎಂದು ಶ್ರೀಕೃಷ್ಣನು ಇದನ್ನು ಸ್ಪಷ್ಟಪಡಿಸಿದ್ದಾನೆ.

'ಸಮತ್ವಂ ಯೋಗ ಉಚ್ಯತೇ' (2.48) ಎಂದು ಗೀತೆಯು ಪ್ರತಿಪಾದಿಸಿದೆ. ಕಾರ್ಯಗಳನ್ನು ಮಾಡುವಾಗ ಕೆಲವು ಬಾರಿ ಸಿದ್ಧಿ, ಅನೇಕ ಬಾರಿ ಅಸಿದ್ಧಿ. ಯೋಗಿಯು ಎಲ್ಲ ಸಂದರ್ಭಗಳಲ್ಲೂ ಮನಸ್ಸಿನ ಸಮತ್ವವನ್ನು) ಕಾಪಾಡಿಕೊಳ್ಳಬೇಕು. ಹರ್ಷದಲ್ಲಿ ಹಿಗ್ಗದೆ, ಶೋಕದಲ್ಲಿ ಕುಗ್ಗದೆ ಇರುವುದು ಯೋಗಿಯ ಲಕ್ಷಣ ಎಂದು ಇದರ ಅಭಿಪ್ರಾಯ.

ಯೋಗಾಭ್ಯಾಸಿಯು ಮೊದಲು ಕರ್ಮಯೋಗವನ್ನೇ ಆರಂಭಿಸಬೇಕು. ಅಂತಹವನನ್ನು ಆರುರುಕ್ಷು ಎನ್ನುತ್ತಾರೆ. ಯೋಗ ಸಿದ್ಧಿಯನ್ನು ಪಡೆದ ವ್ಯಕ್ತಿ ಯೋಗಾರೂಢ. ಅವನಿಗೆ ಕರ್ಮಗಳು ಬೇಕಿಲ್ಲ. ಕೇವಲ ಶಾಂತಿಯಲ್ಲೇ ಅವನ ಕಾಲವು ಕಳೆಯುತ್ತದೆ. ಆಮೇಲೆ ಅವನ ದೇಹಪಾತವಾದಾಗ ಕೈವಲ್ಯವು ಅವನದಾಗುತ್ತದೆ.

ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ।
ಯೋಗಾರೂಢಸ್ಯ ತಸ್ಯೈವ ಶರ್ಮ ಕಾರಣಮುಚ್ಯತೇ॥ (6.3)

(ಯೋಗದಲ್ಲಿ ಮೇಲೇರಲು ಬಯಸುವ ಮುನಿಗೆ ನಿಷ್ಕಾಮಕರ್ಮವೇ ಸಾಧನವೆಂದು ಹೇಳುತ್ತಾರೆ. ಅವನೇ (ಸಿದ್ಧಿಯನ್ನು ಪಡೆದು) ಯೋಗಾರೂಢನಾದಾಗ ಶಮವೇ (ಶಾಂತಸ್ಥಿತಿಯೇ) ಸಾಧನವೆನ್ನುತ್ತಾರೆ)

ಯೋಗ ಬುದ್ಧಿಯುಳ್ಳವನು ಏಕಾಂಗಿಯಾಗಿರಲು ಬಯಸುತ್ತಾನೆ. ಜನರ ಗುಂಪು, ಜಂಗುಳಿ, ಹರಟೆ ಇತ್ಯಾದಿಗಳಲ್ಲಿ ಅವನಿಗೆ ಆಸಕ್ತಿಯಿರುವುದಿಲ್ಲ. ಏಕಾಂತದಲ್ಲಿದ್ದು ಸಾಧನೆ ಮಾಡಲು ಮಾತ್ರ ಅವನು ಅಪೇಕ್ಷಿಸುತ್ತಾನೆ. ಪ್ರಾಪಂಚಿಕ ವ್ಯವಹಾರಗಳಲ್ಲಿ ಅವನಿಗೆ ಅಪೇಕ್ಷೆಯುಂಟಾಗದು. ಇದನ್ನು ಭಗವದ್ಗೀತೆಯು ಹೇಳಿರುವ ರೀತಿಯೂ ಚೆನ್ನಾಗಿದೆ.

ಯಾನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುದೇಃ ॥
(2.69)

(ಸಾಮಾನ್ಯ ಜನರಿಗೆ ಯಾವುದು ರಾತ್ರಿಯೋ ಅದರಲ್ಲಿ ಸಂಯಮ (ಯೋಗಿ)ಯು ಎಚ್ಚರಗೊಂಡಿರುತ್ತಾನೆ. ಸಾಮಾನ್ಯ ಜನರು ಎಚ್ಚರದಿಂದ ಇರುವ ವೇಳೆ(ಸತ್ಯವನ್ನು) ಕಾಣುತ್ತಿರುವ ಮುನಿಗೆ ರಾತ್ರಿ).

ಇಲ್ಲಿರುವ ಪದಗಳ ವಾಚ್ಯಾರ್ಥವನ್ನು ಮಾತ್ರ ನಾವು ಗ್ರಹಿಸಬಾರದು. ಧ್ವನಿತಾರ್ಥವನ್ನು ಗ್ರಹಿಸಬೇಕು. ಅದೇನೆಂದರೆ– ಯಾವ ಅಧ್ಯಾತ್ಮಿಕ ವಿಷಯಗಳಲ್ಲಿ ಸಾಮಾನ್ಯ ಜನರಿಗೆ ಆಸಕ್ತಿಯಿಲ್ಲವೋ ಅವುಗಳಲ್ಲಿ ಯೋಗಿಯು ಆಸಕ್ತಿ ಹೊಂದಿರುತ್ತಾನೆ. ಯಾವ ವಿಷಯ ಸುಖಾದಿಗಳಲ್ಲಿ ಸಾಮಾನ್ಯ ಜನರು ಮುಳುಗಿರುವರೋ ಅವು ಯೋಗಿಗೆ ಇರುಳಿನಂತೆ ಭಾಸವಾಗುತ್ತವೆ.

ಲೋಕಾಸಕ್ತರಾದ ಜನರು ಧನಕನಕ ಭವನಾದಿಗಳನ್ನು ಗಳಿಸಲು ಮತ್ತು ಉಳಿಸಲು ಹೆಣಗಾಡುತ್ತಿರುತ್ತಾರೆ. ಅವೇ ಸರ್ವಸ್ವವೆಂದು ಭಾವಿಸುತ್ತಾರೆ. ಆದರೆ ಸ್ಥಿತಪ್ರಜ್ಞನಾದ ಯೋಗಿಗೆ ಅವು ತೃಣಸಮಾನ. ಅವನಿಗೆ ಪ್ರಮುಖನಾಗಿ ತೋರುವ ಭಗವಂತನೂ ಭಗವತ್ ಸಾಕ್ಷಾತ್ಕಾರಕ್ಕೆ ಅನುಕೂಲವಾದ ಜ್ಞಾನ, ಭಕ್ತಿ, ಯೋಗ ಮುಂತಾದವೂ ಸಾಮಾನ್ಯರಿಗೆ ಇರುಳಿನಂತೆ ಕಾಣುತ್ತದೆ. ಅವರಿಗೆ ಅವು ಬೇಕಿಲ್ಲ ಎಂಬುದು ಈ ಶ್ಲೋಕದ ತಾತ್ಪರ್ಯ.

ಯೋಗವೆಂದರೆ ಮನೋವೃತ್ತಿಗಳ ನಿರೋಧವೆಂದು ಪತಂಜಲಿ ಮಹರ್ಷಿಗಳ ಮತ. ಅದನ್ನೇ ಭಗವದ್ಗೀತೆಯು ಹೇಳಿದೆ. ಇದರಲ್ಲಿ ಜಿಜ್ಞಾಸುವಾದ ಅರ್ಜುನನು ಜಾನಿವರೇಣ್ಯನಾದ ಕೃಷ್ಣನನ್ನು ಕೇಳುತ್ತಾನೆ

ಯೋಽಯಂ ಯೋಗಸ್ತಯಾ ಪ್ರೋಕ್ತಃ ಸಾಮ್ಯೇನ ಮಧುಸೂದನ।
ಏತಸ್ಯಾಹಂ ನ ಪಶ್ಯಾಮಿ ಚಂಚಲತ್ವಾತ್ ಸ್ಥಿತಂ ಸ್ಥಿರಾಮ್ ॥
(6.333)

(ಕೃಷ್ಣನೇ ಮನಸ್ಸಿನ ಸ್ಥಿರತ್ವದಿಂದ ಯೋಗದ ಸಿದ್ಧಿಯೆಂದು ನೀನು ಹೇಳಿರುವೆ. ಆದರೆ ಮನಸ್ಸು ಚಂಚಲವಾದುದರಿಂದ ಇಂತಹ ಸ್ಥಿರ ಸ್ಥಿತಿ ಅಸಾಧ್ಯವೆಂದು ನಾನು ಭಾವಿಸಿರುವೆನು)

ಇದಕ್ಕೆ ಉತ್ತರವಾಗಿ ಕೃಷ್ಣನ ಮಾತು ಒಂದಿದೆ.

ಅಸಂಶಯಂ ಮಹಬಾಹೋ ಮನೋ ದುರ್ನಿಗ್ರಹಂ ಚಲಮ್।
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥ (6.35)

(ಮಹಾವೀರನಾದ ಅರ್ಜುನನ, ಮನಸ್ಸು ಚಂಚಲವಾದುದರಿಂದ ಅದರ ನಿಗ್ರಹ ಕಷ್ಟ ಎಂಬುದರಲ್ಲಿ ಸಂಶಯವಿಲ್ಲ. ಆದರೆ, ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಮನಸ್ಸನ್ನು ನಿಗ್ರಹಿಸಬಹುದು).

ಈ ಎರಡು ಯೋಗಾಭ್ಯಾಸಿಯ ಮುಖ್ಯ ಸಾಧನಗಳು. ನಿರಂತರಾಭ್ಯಾಸ ಮತ್ತು ನಿಶ್ಚಲವಾದ ವೈರಾಗ್ಯ – ಇವುಗಳಿಗೆ ಅಸಾಧ್ಯವಾದುದು ಯಾವುದೂ ಇಲ್ಲ. ಇದನ್ನೇ ಪತಂಜಲಿಯು ಅಭ್ಯಾಸ ವೈರಾಗ್ಯಾಭ್ಯಾಂ ತನ್ನಿರೋಧ ಎಂಬ ಸೂತ್ರದಲ್ಲಿ ಹೇಳಿದ್ದಾನೆ. ಇವೆರಡೂ ಪಕ್ಷಿಯ ಎರಡು ರೆಕ್ಕೆಗಳಂತೆ. ಅಭ್ಯಾಸವೇ ಇಲ್ಲದ ವೈರಾಗ್ಯ, ವೈರಾಗ್ಯವಿಲ್ಲದ ಅಭ್ಯಾಸ ಸಿದ್ಧಿಯನ್ನು ತರಲಾರದು. ಅದು ಒಂದೇ ರೆಕ್ಕೆಯಿಂದ ಹಾರಲು ಪ್ರಯತ್ನಿಸುವ ಹಕ್ಕಿಯಂತೆ ವಿಫಲ.

ಭಗವದ್ಗೀತೆಯ ದೃಷ್ಟಿಯಲ್ಲಿ ಯೋಗಿಯು ತಪಸ್ವಿಗಿಂತ, ಜ್ಞಾನಿಗಿಂತ, ಕರ್ಮಿಗಿಂತ ಶ್ರೇಷ್ಠ. ಆದ್ದರಿಂದಲೇ ಶ್ರೀ ಕೃಷ್ಣನು ಅರ್ಜುನನಿಗೆ ಮಾಡಿದ ಪ್ರಧಾನ ಉಪದೇಶ–

ತಪಸ್ವಿಭ್ಯೋಧಿಕೋ ಯೋಗೀ ಜ್ಞಾನಿಭ್ಯೋ, ಪಿ ಮತೋಧಿಕಃ।
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ ಯೋಗೀ ಭವಾರ್ಜುನ।
(6.46)

ಕಾರ್ಪಣ್ಯದೋಷೋಪಹತ ಸ್ವಭಾವರಾದ ನಮ್ಮೆಲ್ಲರಿಗೂ ಅನ್ವಯಿಸುವ ಈ ಮಾತನ್ನು ಗಂಭೀರವಾಗಿ ಸ್ವೀಕರಿಸಿ ಯೋಗಾಭ್ಯಾಸದಲ್ಲಿ ತೊಡಗಿರೋಣ.

ಸರ್ವೇ ಜನಾಃ ಸುಖಿನೋ ಭವಂತು


ಎ.ಕೆ.ಶಿವರಾಯ್‌ರಂತಹ ಅಧಿಕಾರಿಗಳಿದ್ದಿದ್ದರೆ ಮುಡಾಗೆ ಇಂತಹ ದುರ್ಗತಿ ಬರುತ್ತಿರಲಿಲ್ಲ

ಒಂದು ನೆನಪು

ಕೊಡಗಿನ ಕಟ್ಟ ಕಡೆಯ ಗ್ರಾಮ ಕರಿಕೆ (ಅದರ ನಿಜವಾದ ಹೆಸರು ಕನಿಕೆ)ಯಿಂದ ಬಂದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಪ್ರಧಾನ ಅಕೌಂಟ್ಸ್ ಆಫೀಸರ್ ಆಗಿ ಸೇವೆ ಸಲ್ಲಿಸಿದ ಎ.ಕೆ.ಶಿವರಾಯ್ ಇಂದು ನಮ್ಮೊಂದಿಗಿಲ್ಲ. ಆದರೆ ಅವರ ಸೇವಾವಧಿಯ ಸಿಹಿ ನೆನಪುಗಳ ಬುತ್ತಿಯನ್ನೇ ನಮ್ಮೆದುರು ಇಟ್ಟು ಹೋಗಿದ್ದಾರೆ. ತಾನು ಅಧಿಕಾರ ಹೊಂದಿರುವುದು ಸಾಮಾನ್ಯ ಜನರ ಸೇವೆಗೆ ಎಂಬುದನ್ನು ಸದಾ ಕಾಲ ನೆನಪಿನಲ್ಲಿಟ್ಟುಕೊಂಡು ಅದರಂತೆ ನಡೆದ ಹೆಗ್ಗಳಿಕೆ ಅವರದು. ಅವರು ಅಧಿಕಾರದಲ್ಲಿದ್ದಷ್ಟು ಕಾಲ ಅವರ ಇರುವಿಕೆಯೇ ಭ್ರಷ್ಟ ಅಧಿಕಾರಿಗಳಿಗೆ ಸಿಂಹಸ್ವಪ್ನವೆನಿಸಿತ್ತು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇರುವುದು ಸಾಮಾನ್ಯರಿಗೆ ಎಂಬುದನ್ನು ಮನವರಿಕೆ ಮಾಡಿಕೊಂಡು ಸದಾ ಕಾರ್ಯಮಗ್ನರಾಗಿದ್ದ ಅಧಿಕಾರಿಗಳಲ್ಲಿ ಅವರೊಬ್ಬರು. ಕೆಲಸದ ಅವಧಿಯಲ್ಲಿ ಅವರ ಕಾರ್ಯಾಲಯದಲ್ಲಿ ತ್ವರಿತ ಸೇವೆ ಲಭ್ಯವಾಗುತ್ತಿತ್ತು.

ಅವರು, ಈ ದೇಶಕ್ಕೆ ಶಾಪವಾಗಿರುವ ಜಾತಿ, ಪಂಗಡ ಅಥವಾ ಗುಂಪು ಎಂಬ ಪದಗಳಿಂದ ಮೈಲು ದೂರ ಉಳಿದಿದ್ದರು. ದೇಶಾಭಿಮಾನಕ್ಕೆ ವಿರುದ್ಧವಾದ ಯಾವುದೇ ಆರೋಪಗಳು ಬಂದರೂ ಅವರ ಆತ್ಮಾಭಿಮಾನ ಸೆಟೆದು ನಿಲ್ಲುತ್ತಿತ್ತು. ತಾನು ಭಾರತೀಯ ಮಾತ್ರ ಮತ್ತು ಕೊನೆತನಕ ಭಾರತೀಯ ಎನ್ನುವುದನ್ನು ಅವರು ನಿಸ್ಸಂಕೋಚವಾಗಿ ವ್ಯಕ್ತಪಡಿಸುತ್ತಿದ್ದರು. ತನ್ನ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ಅವರು ನಿಯಮಗಳ ಪಾಲನೆ ಹೊರತಾಗಿ ಮತ್ಯಾವುದನ್ನು ಎಂದೂ ಅಪೇಕ್ಷಿಸುತ್ತಿರಲಿಲ್ಲ. ಯಾರಿಗೂ ಯಾವುದೇ ಭೇದ–ಭಾವವನ್ನು ಮಾಡದೆ ತಮ್ಮ ಕರ್ತವ್ಯವನ್ನು ಚಾಚೂ ತಪ್ಪದೆ ನೆರವೇರಿಸುತ್ತಿದ್ದರು. ಇದರಿಂದ ಅವರನ್ನು ಶಪಿಸುತ್ತಿದ್ದ ಅನೇಕ ಅಧಿಕಾರಿಗಳು ಪ್ರಾಧಿಕಾರದಲ್ಲಿ ಹುಟ್ಟಿಕೊಂಡಿದ್ದರು. ಆದರೆ ಅವರು ಅದನ್ನು ಲೆಕ್ಕಿಸುತ್ತಿರಲಿಲ್ಲ. ಇಂದು ಸಹಸ್ರಾರು ಜನ ತಮ್ಮ ಯೋಗ್ಯತೆಗನುಸಾರ ಪ್ರಾಧಿಕಾರದಲ್ಲಿ ನಿವೇಶನ ಅಥವಾ ಮನೆಗಳನ್ನು ಪಡೆದುಕೊಂಡಿದ್ದರ ಹಿಂದೆ ಶಿವರಾಯ್‌ರವರ ನಿಷ್ಠೆ ಮತ್ತು ಪ್ರಾಮಾಣಿಕತೆ ಇದೆ ಎನ್ನುವುದರಲ್ಲಿ ಸಂಶಯವಿಲ್ಲ.

ನಾನು ಹಿಂದೊಮ್ಮೆ ಅವರ ಭೇಟಿಗೆ ಹೋಗಿದ್ದಾಗ ಅವರ ಕಾರ್ಯಾಲಯದಲ್ಲಿ ಆಗಿನ ಕಾಲದ ರಾಜಕಾರಣಿಯೊಬ್ಬರು ಆಸೀನರಾಗಿದ್ದರು. ಆ ರಾಜಕಾರಣಿ ಕೊಡಗಿನ ಹೆಸರನ್ನು ಕಾವೇರಿ ಜಿಲ್ಲೆ ಎಂದು ಬದಲಾಯಿಸಲು ಪ್ರಯತ್ನಿಸುತ್ತಿದ್ದುದು ಶಿವರಾಯ್‌ರವರ ಗಮನಕ್ಕೆ ಬಂದಿತ್ತು. ಆ ಬಗ್ಗೆ ಶಿವರಾಯ್‌ರವರು ನನ್ನೆದುರಿನಲ್ಲಿಯೇ ಆ ರಾಜಕಾರಣಿಯನ್ನು ತರಾಟೆಗೆ ತೆಗೆದುಕೊಂಡರು. ಒಂದು ಪ್ರದೇಶದ ವೈಶಿಷ್ಟ್ಯತೆ ಬಗ್ಗೆ ಏನೂ ಅರಿವಿಲ್ಲದಿರುವ ವ್ಯಕ್ತಿಯಿಂದ ಮಾತ್ರ ಇಂತಹ ಹೇಳಿಕೆ ಬರಲು



ಎ.ಕೆ.ಶಿವರಾಯ್


ಸಾಧ್ಯ ಎಂದು ಶಿವರಾಯ್ ಕಟುವಾಗಿ ಹೇಳಿದರು. ಅದಕ್ಕೆ ಆ ರಾಜಕಾರಣಿ ದುರ್ದಾನ ತೆಗೆದುಕೊಂಡವರಂತೆ ಎದ್ದು ಹೋದುದು ನನ್ನ ಕಣ್ಣಿಗೆ ಕಟ್ಟಿದಂತಿದೆ.

ಈ ಸತ್ಯ, ನಿಷ್ಠೆ, ಕರ್ತವ್ಯ ಪ್ರಜ್ಞೆ ಮತ್ತು ನಿರ್ಭೀತ ನಡವಳಿಕೆಯಿಂದ ಅವರಿಗೆ ಕೆಲವು ಜನ ಶತ್ರುಗಳೂ ಹುಟ್ಟಿಕೊಂಡರು. ಅವರ ಖಂಡಿತವಾದಕ್ಕೆ ಕೆಲವರ ಬಳಿ ಯಾವುದೇ ಉತ್ತರವಿರಲಿಲ್ಲ. ಆದರೆ ಶಿವರಾಯ್ ಎಂದೂ ತಾನು ನಂಬಿದ ಸಿದ್ಧಾಂತದೊಂದಿಗೆ ಸಂಧಾನ ಮಾಡಿಕೊಳ್ಳಲಿಲ್ಲ. ಅಲ್ಲದೆ ನಿಯಮಾವಳಿಗಳಿಗೆ ವಿರುದ್ಧವಾಗಿ ಅವರು ಯಾರಿಗೂ ನಿವೇಶನವನ್ನಾಗಲೀ ಅಥವಾ ಮನೆಗಳನ್ನಾಗಲೀ ಮಾಡಿಸಿಕೊಡಲು ಯತ್ನಿಸಲಿಲ್ಲ. ನನಗೆ ತಿಳಿದಂತೆ ಅವರ ಅಭಿಪ್ರಾಯಗಳನ್ನು ಮತ್ತು ತೀರ್ಮಾನಗಳನ್ನು ಯಾರೂ ಪ್ರಶ್ನಿಸುತ್ತಿರಲಿಲ್ಲ. ಬದಲಾಗಿ ಅವುಗಳನ್ನು ಎಲ್ಲರೂ ಗೌರವಿಸುತ್ತಿದ್ದರು.

1980ರ ದಶಕದಲ್ಲಿ ನಾನು ಮತ್ತು ಒಂದು ಸಂಘಟನೆಯ ಹಲವರು ಕರಿಕೆಯಲ್ಲಿ ಅರಣ್ಯ ಲೂಟಿಯನ್ನು ತಡೆಯಲು ಎರಡು ತಿಂಗಳ ಕಾಲ ಅರಣ್ಯಾಗ್ರಹ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೆವು. ಅದು ಕಳೆದ ನಂತರ ನಾನೊಮ್ಮೆ ಅವರನ್ನು ಭೇಟಿಯಾದಾಗ ಅವರು ಆ ಬಗ್ಗೆ ಅದೆಷ್ಟು ಸಂತಸ ವ್ಯಕ್ತಪಡಿಸಿದರು ಎಂಬುದನ್ನು ಶಬ್ದಗಳಲ್ಲಿ ವರ್ಣಿಸಲಾರೆ. ಈ ಘಟನೆ ಅವರು ಪರಿಸರವಾದಿಯೂ ಹೌದು ಎಂಬುದಕ್ಕೆ ಸ್ಪಷ್ಟ ನಿದರ್ಶನ. ನನಗೆ ತಿಳಿದಿರುವಂತೆ ಒಬ್ಬರು ಅವರ ಬಳಿ ನಿವೇಶನ ಮಂಜೂರಾತಿ ಮಾಡಲು ಕೋರಿದರು. ತಕ್ಷಣ ಶಿವರಾಯ್‌ರವರು ನಿವೇಶನ ಲಭ್ಯವಿಲ್ಲವೆಂದೂ ಆದರೆ ಒಂದು ಮನೆ ಮಂಜೂರಾತಿಗೆ ಲಭ್ಯವಿದೆ ಎಂದೂ ಹೇಳಿದರಲ್ಲದೆ ನಿಯಮಾನುಸಾರ ಸದರಿ ಮನೆಯನ್ನು ಅವರಿಗೆ ಮಂಜೂರು ಮಾಡಿಸಿಕೊಟ್ಟರು.

ನಂತರದಲ್ಲಿ ಉಪಕೃತರು ತಾನು ಹಿಂದೆ ನೋಂದಾಯಿಸಿದ ನಿವೇಶನ ಕೋರಿದ ಅರ್ಜಿಯನ್ನು ರದ್ದುಪಡಿಸಿ ಎಂಬ ಅರ್ಜಿಯನ್ನು ಶಿವರಾಯ್‌ರವರ ಬಳಿ ತೆಗೆದುಕೊಂಡು ಹೋದರು. ಅವರನ್ನು ಕಾಣುತ್ತಲೇ ಶಿವರಾಯ್ ನಿಮಗೆ ಈಗ ಮನೆ ಮಂಜೂರಾಗಿದೆಯಲ್ಲ, ಆದುದರಿಂದ ನಿವೇಶನದ ಹಿಂದಿನ ನೋಂದಾವಣಿಯನ್ನು ರದ್ದು ಮಾಡಿಸಿ ಎಂದು ಹೇಳಿಬಿಟ್ಟರು. ಉಪಕೃತರು ಅದಕೋಸ್ಕರವೇ ಈ ಅರ್ಜಿಯನ್ನು ತಂದಿದ್ದೇನೆ ಎಂದು ಹೇಳುತ್ತಲೇ, ಶಿವರಾಯ್‌ರವರ ಮುಖ ಇಷ್ಟಗಲವಾಯಿತು ಹಸನ್ಮುಖರಾಗಿ ಸದರಿ ಅರ್ಜಿಯನ್ನು ತೆಗೆದು ಕೊಂಡು ಸದರಿ ನೋಂದಾವಣಿಯನ್ನು ಅಲ್ಲಿಯೇ ರದ್ದು ಮಾಡಲು ಲಿಖಿತ ಆದೇಶವನ್ನು ಇತ್ತರು. ಇಂತಹ ಅಧಿಕಾರಿಗಳನ್ನು ಪಡೆದಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಈಗಿನ ದುರವಸ್ಥೆಯ ಬಗ್ಗೆ ಬರಿಯ ಕನಿಕರ ಮಾತ್ರವಲ್ಲ ಬದಲಾಗಿ ಜನತೆಯಲ್ಲಿ ಆಕ್ರೋಶ ಹೆಪ್ಪುಗಟ್ಟಿದೆ. ಕಾನೂನು ನಿರ್ಮಿತ ಸಂಸ್ಥೆಯೊಂದು ಈ ಮಟ್ಟಕ್ಕೆ ಇಳಿಯ ಬಹುದೇ ಎಂಬ ಸಂದೇಹ ಎಲ್ಲರನ್ನು ಕಾಡುತ್ತದೆ. ಇದಕ್ಕೆ ಏಕೈಕ ಉತ್ತರವೆಂದರೆ ಶಿವರಾಯ್‌ರಂತಹ ಅಧಿಕಾರಿಯನ್ನು ತಕ್ಷಣ ವಿಳಂಬವಿಲ್ಲದೆ ನೇಮಿಸುವುದು. ಆದರೆ ಅಂತಹ ಕಾರ್ಯವನ್ನು ಕೈಗೊಳ್ಳತಕ್ಕ ಧಾರ್ಷ್ಟ್ಯ ಹೊಂದಿರುವ ಆಡಳಿತ ನಡೆಸುವವರು ನಮ್ಮಲ್ಲಿದ್ದಾರೆಯೇ?

ಆದರೆ ಒಂದಂತು ನಿಶ್ಚಯ. ಶಿವರಾಯ್ ಅವರು ಹಳೆಯ ತಲೆಮಾರಿನ ಉತ್ತಮೋತ್ತಮ ಆದರ್ಶಗಳನ್ನು ಹೊಂದಿದ್ದ ಪ್ರಾತಃಸ್ಮರಣೀಯ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಅವರು ನಮ್ಮಿಂದ ಮರೆಯಾಗಿರಬಹುದು. ಆದರೆ ಅವರು ಬಿಟ್ಟುಹೋದ "ಸತ್ಯದ ಜತೆ ಎಂದೂ ರಾಜಿ ಮಾಡಿಕೊಳ್ಳಲಾರೆ, ಕರ್ತವ್ಯವೇ ನನ್ನ ದೇವರು ಮತ್ತು ಪ್ರಾಮಾಣಿಕತೆಯೇ ನನ್ನ ಬದುಕು" ಎಂಬುದು ಇಂದಿನ ತಲೆಮಾರಿಗೆ ಎಲ್ಲ ಕಾಲಕ್ಕೂ ಆದರ್ಶಪ್ರಾಯವಾಗಿ ಇರುತ್ತದೆ. ಅವರಂತಹವರ ಸಂಖ್ಯೆ ವೃದ್ಧಿಸುತ್ತಲೇ ಇರಲಿ. ಅಲ್ಲದೆ ಅವರ ಆತ್ಮಕ್ಕೆ ಮುಕ್ತಿ ದೊರಕಲಿ.



–ಪಿ.ಡಿ.ಮೇದಪ್ಪ,
ನ್ಯಾಯವಾದಿ
ಮೊ.9449819422

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಸಮರ್ಥನಂ ಅಂಗವಿಕಲರ ಸಂಸ್ಥೆಯಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಸಮರ್ಥನಂ ಅಂಗವಿಕಲರ ಸಂಸ್ಥೆಯ ಆವರಣದಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಸಮರ್ಥನಂ ಬುದ್ಧಿ ವಿಕಲಚೇತನ ಮಕ್ಕಳ ಶಾಲೆಯ ಮುಖ್ಯೋಪಾಧ್ಯಾಯಿನಿ ಭ್ರಮಾರಂಬ ಧ್ವಜಾರೋಹಣ ನೆರವೇರಿಸಿದರು. ಸಂಯೋಜಕ ಮಹಂತೇಶ, ಕಂಪ್ಯೂಟರ್ ಶಿಕ್ಷಕಿ ಸ್ಪರ್ಶ, ಶಾಲೆಯ ವಿಶೇಷ ಶಿಕ್ಷಕಿಯರಾದ ಬೃಂದಾಬಾಯಿ, ಹೆಚ್.ವಿದ್ಯಾವತಿ, ಭುವನ, ಶರೀಫ್, ಸಿಬ್ಬಂದಿಗಳಾದ ಮಹದೇವ, ಮಂಜುಳ ನಾಗರಾಜು, ಪ್ರತಿಮಾ ಇತರರಿದ್ದರು.

ಗಣರಾಜ್ಯೋತ್ಸವದಂದು ಆರೋಗ್ಯ ತಪಾಸಣೆ



76ನೇ ಗಣರಾಜ್ಯೋತ್ಸವದ ಅಂಗವಾಗಿ ಬೋಗಾದಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ಪೌರಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕಪ್ (ಸಮಗ್ರ ಆರೋಗ್ಯ ತಪಾಸಣೆ) ಅನ್ನು ಸಮತಾ ಆಯುರ್ವೇದಿಕ್ ಮೆಡಿಕಲ್ ಆಸ್ಪತ್ರೆ ಮತ್ತು ಪ್ರಯೋಗಾಲಯ ಸಹಯೋಗದೊಂದಿಗೆ ನಡೆಸಲಾಯಿತು. ಮುಖ್ಯಾಧಿಕಾರಿ ಬಸವರಾಜು, ಆರೋಗ್ಯಾಧಿಕಾರಿ ಪುನಿತ್‌ಕುಮಾರ್ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಮಹಾವೀರ ವಿದ್ಯಾಮಂದಿರದಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಶ್ರೀರಾಂಪುರದಲ್ಲಿರುವ ಶ್ರೀ ಜೈನ ಎಜುಕೇಶನ್ ಸೊಸೈಟಿ ನೋಂದಾಯಿತ ಮಹಾವೀರ ವಿದ್ಯಾಮಂದಿರದಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಎನ್‌ಸಿಸಿ ಕೆಡೆಟ್ ಕುಮಾರಿ ಪ್ರಮೀಳಾ ಕುನ್ವರ್, ಕ್ಯಾಪ್ಟನ್ ಕೆ.ಎಸ್.ಚಂದ್ರಶೇಖರ್ ಮತ್ತು ಡಾ. ಪ್ರೀತಿ ಶ್ರೀಮಂದರ್ ಕುಮಾರ್ ಆಗಮಿಸಿದ್ದರು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎನ್. ಪ್ರಸನ್ನ ಕುಮಾರ್, ಸಂಸ್ಥೆಯ ಅಧ್ಯಕ್ಷ ಡಾ. ಬಾಹುಬಲಿ ನಾಗಾವಿ, ಉಪಾಧ್ಯಕ್ಷ ಸುರೇಶ್, ಕಾರ್ಯದರ್ಶಿ ಇಚ್ಛಾ ಜೆ, ಸದಸ್ಯರಾದ ಪ್ರೊ.ಶುಭಚಂದ್ರ ಹಾಗೂ ಶಾಲೆಯ ಪ್ರಾಂಶುಪಾಲರಾದ ಅನಿತಾ ಡಿ., ಉಪಪ್ರಾಂಶುಪಾಲರಾದ ಆಶಾ ಎಸ್., ಸಿಬ್ಬಂದಿ ಉಪಸ್ಥಿತರಿದ್ದರು. ಇದೇ ವೇಳೆ ಶೈಕ್ಷಣಿಕ ವರ್ಷ 23–24ರ ಸಾಲಿನ 10ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಮಕ್ಕಳನ್ನು ಪುರಸ್ಕರಿಸಿ ಸನ್ಮಾನಿಸಲಾಯಿತು. ಹಾಗೂ ಶಾಲೆಯ ವಾರ್ಷಿಕ ಕೈಪಿಡಿ ಆದ ತತ್ವ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಕೃಷಿ ನಿರ್ದೇಶಕರ ಕಛೇರಿಯಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಮೈಸೂರು ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಭಾನುವಾರ 76ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಾಯಕ ಕೃಷಿ ನಿರ್ದೇಶಕರಾದ ಜಯರಾಮ್, ಕೃಷಿ ಅಧಿಕಾರಿಗಳಾದ ಜೀವನ್. ಪಿ.ಎನ್. ಮತ್ತು ಪಿ.ಎನ್.ವೆಂಕಟೇಶ್ ಹಾಗೂ ಕಚೇರಿ ಸಿಬ್ಬಂದಿ ಹಾಜರಿದ್ದರು.

ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ಇನ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಸರಸ್ವತಿಪುರಂ ಪೊಲೀಸ್ ಠಾಣೆಯ ಪಿಎಸ್‌ಐ ಮಹೇಂದ್ರ ಟಿ.ಎಸ್. ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ನೆರವೇರಿಸಿದರು. ಚಿತ್ರದಲ್ಲಿ ಎಎಸ್‌ಐ ಸೋಮಣ್ಣ, ಹೆಡ್ ಕಾನ್‌ಸ್ಟೇಬಲ್ ಅಶೋಕ್, ಬಸವಣ್ಣ, ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಓಂ ಪ್ರಕಾಶ್, ಪ್ರಭಾಕರಯ್ಯ, ರಾಯಣ್ಣ ಗೌಡರ್, ಹರಿಯಪ್ಪ ನಾಯಕ್, ಶಿಕ್ಷಕಿಯರು ಹಾಗೂ ಶ್ರವಣದೋಷ ಮಕ್ಕಳು ಇದ್ದಾರೆ.

ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಗಣರಾಜ್ಯೋತ್ಸವ



ಮೈಸೂರು ಯಾದವಗಿರಿಯ ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಜ್ಞಾನಪ್ರಕಾಶ ಭವನದ ಆವರಣದಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಸಂಸ್ಥೆಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಸೋಮ ಪ್ರಭಾಜೀ, ರಾಮಚಂದ್ರಜೀ, ರಂಗನಾಥ ಜಿ. ಹಾಜರಿದ್ದರು.

ವಿವಿಧ ಕ್ಷೇತ್ರದ ಸಾಧಕರಿಗೆ ನಿವೇಶನ ನೀಡುವುದಾಗಿ ಹಣ ಕಟ್ಟಿಸಿಕೊಂಡ ಮುಡಾದಿಂದ ಈಗ ಕಣ್ಣಾಮುಚ್ಚಾಲೆ

ಫಲಾನುಭವಿಗಳ ಆತಂಕ; ನೋವಿನ ನುಡಿ

ಮೈಸೂರು, ಜ.28(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ದೇವನೂರ ಬಡಾವಣೆ ಮೂರನೇ ಹಂತದಲ್ಲಿ ನಿವೇಶನ ನೀಡುವುದಾಗಿ ವಿವಿಧ ಕ್ಷೇತ್ರಗಳ ಸಾಧಕರಿಂದ ಅರ್ಜಿಯೊಂದಿಗೆ ಹಣ ಕಟ್ಟಿಸಿಕೊಂಡಿದ್ದರೂ ನಿವೇಶನ ನೀಡದೆ ನಿರ್ಲಕ್ಷಿಸುತ್ತಿದೆ ಎಂದು ಶೌರ್ಯ ಪ್ರಶಸ್ತಿ ವಿಜೇತ ಮಾಜಿ ಸೈನಿಕ ಬಿ.ಆರ್. ನಿಂಗರಾಜು ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2023ರ ಫೆಬ್ರವರಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ದೇವನೂರ ಬಡಾವಣೆ ಮೂರನೇ ಹಂತದಲ್ಲಿ ನಿವೇಶನ ನೀಡುವುದಾಗಿ ಅರ್ಜಿ ಆಹ್ವಾನಿಸಿತ್ತು. ಮುಡಾದಲ್ಲಿ 188 ನಿವೇಶನಗಳನ್ನು ಸಾಧಕರಿಗೆ ನೀಡುವುದಾಗಿ ಮುಡಾ ಪ್ರಕಟಣೆಯಲ್ಲಿ ತಿಳಿಸಿತ್ತು. ಈ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ 488 ಮಂದಿ ಒಡವೆ ಮಾರಿ, ಬಡ್ಡಿಗೆ ಸಾಲ ತಂದು ಮುಡಾ ನಿವೇಶನಕ್ಕಾಗಿ ಹಣ ಕಟ್ಟಿದ್ದಾರೆ. ಒಟ್ಟು 9.60 ಕೋಟಿ ರೂ. ಮುಡಾಗೆ ಕಟ್ಟಿದ್ದಾರೆ. ಆದರೆ, 23 ತಿಂಗಳಾದರೂ ನಿವೇಶನ ನೀಡುವ ಪ್ರಕ್ರಿಯೆ ಆರಂಭಿಸಿಲ್ಲ. ನಿವೇಶನ ಕೇಳಿದರೆ ಅಧಿಕಾರಿಗಳು ಸಾಧಕರಿಗೆ ನಿವೇಶನ ನೀಡಲು ಈ ಹಿಂದೆ ಮುಡಾ ಕೈಗೊಂಡ ಪ್ರಕ್ರಿಯೆ ನಿಯಮಬಾಹಿರ. ನಿವೇಶನ ನೀಡಲು ಸಾಧ್ಯವಿಲ್ಲ ಎನ್ನುತ್ತಾರೆ ಎಂದು ದೂರಿದರು.



> ಮುಡಾದಲ್ಲಿ ಸಾಧಕರಿಗೆ ನಿವೇಶನ ನೀಡುವುದಾಗಿ ಅರ್ಜಿ ಆಹ್ವಾನಿಸಿರುವ ಪ್ರಕ್ರಿಯೆ ಹೇಗೆ ನಡೆದಿದೆ ಎಂದು ನನ್ನ ಗಮನಕ್ಕೆ ಬಂದಿಲ್ಲ. ನಾನು ಮುಡಾ ಆಯುಕ್ತನಾಗಿ ಬರುವ ಮೊದಲೇ ಈ ಪ್ರಕ್ರಿಯೆ ನಡೆದಿದೆ. ಈ ಸಂಬಂಧ ಪರಿಶೀಲನೆ ಮಾಡಿ ಕೈಗೊಳ್ಳಬಹುದಾದ ಕ್ರಮದ ಕುರಿತಂತೆ ಪ್ರತಿಕ್ರಿಯೆ ನೀಡುತ್ತೇನೆ.
>
> **–ರಘುನಂದನ್, ಮುಡಾ, ಆಯುಕ್ತ**

ನಿವೇಶನಕ್ಕೆ ಅರ್ಜಿ ಸಲ್ಲಿಸಿರುವ 488 ಮಂದಿಯಲ್ಲಿ ಶೌರ್ಯ ಪ್ರಶಸ್ತಿ ವಿಜೇತ ಮಾಜಿ ಸೈನಿಕನಾಗಿ ನಾನೊಬ್ಬನೇ ಅರ್ಜಿ ಸಲ್ಲಿಸಿದ್ದೇನೆ. ಉಳಿದ ಅರ್ಜಿದಾರರು ಕ್ರೀಡೆ, ಸಂಗೀತ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಾಗಿದ್ದಾರೆ. ಕೆಲವು ಅರ್ಜಿದಾರರು ಮುಡಾಗೆ ಕಟ್ಟಿದ್ದ ಹಣ ಹಿಂಪಡೆದಿದ್ದಾರೆ. ಉಳಿದ ಸಾಧಕರು ಮುಡಾಗೆ ಕಟ್ಟಿರುವ ಹಣ ಏನಾಯಿತು? ಸಾಧಕರಿಗೆ ನೀಡಲು ಉದ್ದೇಶಿಸಿದ್ದ ನಿವೇಶನ ಏನಾದವು? ಎಂದು ಜನರ ಮುಂದೆ ಇಡಬೇಕೆಂದು ಒತ್ತಾಯಿಸಿದರು. ನಿವೇಶನ ನೀಡುವ ಪ್ರಕ್ರಿಯೆ ಆರಂಭಿಸಬೇಕೆಂದು ಹಲವು ಬಾರಿ ಮುಡಾಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಪ್ರಕ್ರಿಯೆಯೆ ರದ್ದಾಗಿದೆ ಎಂದು ಹೇಳುವ ಮೂಲಕ ಕೆಲ ಅಧಿಕಾರಿಗಳು ಆತಂಕ ಮೂಡಿಸುತ್ತಿದ್ದಾರೆ. ಹೀಗಾಗಿ ಇನ್ನಷ್ಟು ವಿಳಂಬ ಮಾಡಿದಲ್ಲಿ ಕಾನೂನು ಹೋರಾಟ ಪ್ರಾರಂಭಿಸಿ, ಹೈಕೋರ್ಟ್ ಮೊರೆ ಹೋಗಲಾಗುವುದೆಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವ ಕ್ರೀಡಾ ಕ್ಷೇತ್ರದ ಸಾಧಕರಾದ ಎಂ.ಪಿ. ಅಜಿತ್, ಟಿ.ಎಸ್. ರವಿ, ಬಿ.ಕೆ.ಸೋಮಶೇಖರ್, ಪುನೀತ್ ಇದ್ದರು.

ಇಂದು ಮಹಾಜನ ವಿದ್ಯಾಸಂಸ್ಥೆ ಕ್ರೀಡಾಂಗಣದಲ್ಲಿ ಪಂಚ ಗರುಡೋತ್ಸವ ಧಾರ್ಮಿಕ ಕಾರ್ಯಕ್ರಮ

ಮೈಸೂರು, ಜ.28(ಎಂಟಿವೈ)– ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ವಿದ್ಯಾಸಂಸ್ಥೆಯ ಕ್ರೀಡಾಂಗಣದಲ್ಲಿ ಜ.29ರಂದು ಪಂಚಗರುಡೋತ್ಸವ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದ ಪಂಚ ಗರುಡೋತ್ಸವ ಸೇವಾ ಸಮಿತಿಯ ಖಜಾಂಚಿ ಹೆಚ್.ವಿ.ಎಲ್.ಎನ್. ಆಚಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯಲಕ್ಷ್ಮೀಪುರಂ ಕಾಳಿದಾಸ ರಸ್ತೆಯ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯದ ಪಂಚ ಗರುಡೋತ್ಸವ ಸೇವಾ ಸಮಿತಿ ದ್ವಿತೀಯ ಬಾರಿಗೆ ಜ. 29ರಂದು ಪಂಚ ಗರುಡೋತ್ಸವ ಸಂಭ್ರಮ ಕಾರ್ಯಕ್ರಮ ಆಯೋಜಿಸಿದೆ. ಈ ಕಾರ್ಯಕ್ರಮದಲ್ಲಿ ಶ್ರೀರಂಗಂ, ತಿರುಪತಿ, ಕಾಂಚಿಪುರಂ, ಮೇಲುಕೋಟೆಯಿಂದ ಪಂಚ ಗರುಡ ಪಾಲ್ಗೊಳ್ಳಲಿವೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಪರಕಾಲ ಮಠದ ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮೀಜಿ, ಯದುಗಿರಿ ಯತಿರಾಜ ಮಠದ ಶ್ರೀ ಯತಿರಾಜ ನಾರಾಯಣ ರಾಮಾನುಜ ಜೀಯರ್, ಸುದರ್ಶನ ನಾರಸಿಂಹ ಕ್ಷೇತ್ರದ ಧರ್ಮಾಧಿಕಾರಿ ಭಾಷ್ಯಂ ಸ್ವಾಮೀಜಿ ವಹಿಸಲಿದ್ದಾರೆ. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪಂಚ ಗರುಡೋತ್ಸವ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ ಎಂದರು.

ಕಾರ್ಯಕ್ರಮದ ಅಂಗವಾಗಿ ಜ.28ರ ಸಂಜೆ 5.30ಕ್ಕೆ ಎಂ.ಜಿ. ರಂಗನಾಥ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಸಂಜೆ 6.30ಕ್ಕೆ ವಂಶಿಧರ್ ಮತ್ತು ವೃಂದದಿಂದ ಕೊಳಲು ವಾದನ ನೆರವೇರಲಿದೆ.

ಜ.29ರಂದು ಬೆಳಗ್ಗೆ 10ರಿಂದ 11 ಗಂಟೆವರೆಗೆ ವಿಷ್ಣು ಸಹಸ್ರನಾಮ ಪಾರಾಯಣ, ಬೆಳಗ್ಗೆ 11.30ರಿಂದ ಮಧ್ಯಾಹ್ನ 1 ಗಂಟೆವರೆಗೆ ವಿದ್ವಾನ್ ಆರ್.ಕೆ.ಪದ್ಮನಾಭನ್ ಮತ್ತು ವೃಂದದಿಂದ ವೀಣಾ ವಾದನ, ಮಧ್ಯಾಹ್ನ 2.30ರಿಂದ 3.30ರವರೆಗೆ ಡಾ.ಶೀಲಾ ಶೀಧರ್, ಶಾಶ್ವತಿ ರಘುನಂದನ್ ಅವರಿಂದ ದಶಾವತಾರ ನೃತ್ಯ ರೂಪಕ ನೆರವೇರಲಿದೆ. ಸಂಜೆ 4.05ಕ್ಕೆ ಪಂಚ ಗರುಡೋತ್ಸವದ ಉದ್ಘಾಟನಾ ಕಾರ್ಯಕ್ರಮ ಜರುಗಲಿದೆ. ಸಂಜೆ 5.31ಕ್ಕೆ ಪಂಚಗರುಡೋತ್ಸವದ ಮೆರವಣಿಗೆ ಆರಂಭವಾಗಲಿದೆ. ಕ್ರೀಡಾಂಗಣದಿಂದ ವಿವಿಧ ರಸ್ತೆಗಳಲ್ಲಿ ಸಾಗಿ ಮತ್ತೆ ಅದೇ ಸ್ಥಳಕ್ಕೆ ಹಿಂದಿರುಗಲಿದೆ. ಬಳಿಕ ಸಂಜೆ 6.30ರಿಂದ ನೃತ್ಯ ವಿದ್ಯಾಪೀಠದಿಂದ ಭರತ ನಾಟ್ಯ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪಂಚ ಗರುಡೋತ್ಸವ ಸೇವಾ ಸಮಿತಿ ಪದಾಧಿಕಾರಿಗಳಾದ ಕೆ.ಆರ್.ಯೋಗಾನರಸಿಂಹನ್, ವೀರರಾಘವನ್, ಜೆ.ಪಿ.ಕೃಷ್ಣಮೂರ್ತಿ ಇದ್ದರು.

ಫೆ.2ರಂದು ದೇವರನಾಮ ಸ್ಪರ್ಧೆ

ಮೈಸೂರು: ಮೈಸೂರಿನ ಕೆ.ಆರ್. ಮೊಹಲ್ಲಾದಲ್ಲಿರುವ ಶ್ರೀ ಗೌರಿ ಸಂಗೀತ ಶಾಲಾ ವತಿಯಿಂದ 10ನೇ ವರ್ಷದ ಪುರಂದರದಾಸರ ಆರಾಧನೆಯ ಪ್ರಯುಕ್ತ ಫೆ.2ರಂದು ಬೆಳಗ್ಗೆ 9.30ರಿಂದ ನಂಜುಮಳಿಗೆಯಲ್ಲಿರುವ ಗೋಪಾಲಸ್ವಾಮಿ ಶಿಶುವಿಹಾರದಲ್ಲಿ ದೇವರನಾಮ ಸ್ಪರ್ಧೆ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ.9916954433 ಸಂಪರ್ಕಿಸಬಹುದು.

ರೈತರಿಗೆ ಮೂರು ದಿನಗಳ ತರಬೇತಿ

ಮೈಸೂರು,ಜ.28– ಜಿಲ್ಲಾ ಕೃಷಿ ತರಬೇತಿ ಕೇಂದ್ರ ವತಿಯಿಂದ ಫೆ.3ರಿಂದ 5 ರವರೆಗೆ 'ತುಂತುರು ನೀರಾವರಿ ಹಾಗೂ ಹನಿ ನೀರಾವರಿ ಘಟಕಗಳ ನಿರ್ವಹಣೆ ಹಾಗೂ ಸೂಕ್ಷ್ಮ ನೀರಾವರಿ, ರಸಾವರಿ ತಾಂತ್ರಿಕತೆಗಳು' ವಿಷಯದ ಬಗ್ಗೆ ರೈತ, ರೈತ ಮಹಿಳೆಯರಿಗೆ 3 ದಿನಗಳ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಆಸಕ್ತ ರೈತ, ರೈತ ಮಹಿಳೆಯರು ತಮ್ಮ ಹೆಸರನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕೃಷಿ ಅಧಿಕಾರಿಗಳ ದೂ.ಸಂ: 8277933205ಗೆ ಕರೆ ಮಾಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ರೈತರು ತರಬೇತಿಗೆ ಬರುವಾಗ ರೇಷನ್ ಕಾರ್ಡ್, FID ನಂಬರ್, ಆಧಾರ್, ಬ್ಯಾಂಕ್ ಪಾಸ್ ಪುಸ್ತಕ ಜೆರಾಕ್ಸ್ ಪ್ರತಿಗಳನ್ನು ತಪ್ಪದೇ ತರಬೇಕು. 45 ರೈತ, ರೈತಮಹಿಳೆಯರಿಗೆ ಮಾತ್ರ ಅವಕಾಶವಿದೆ ಎಂದು ಪ್ರಕಟಣೆ ತಿಳಿಸಿದೆ.

ಕಲಾಮಂದಿರದಲ್ಲಿ ಜ.30ರಂದು ಕರಾಳ ದಿನಾಚರಣೆ

ಮೈಸೂರು,ಜ.28(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಜ.30ರಂದು ಜನಾಂದೋಲನಗಳ ಮಹಾ ಮೈತ್ರಿ, ಗಾಂಧಿ ವಿಚಾರ ಪರಿಷತ್ತು, ಪ್ರಗತಿಪರ ಸಂಘಟನೆಗಳ ಒಕ್ಕೂಟ ಕರಾಳ ದಿನಾಚರಣೆ ಆಚರಿಸಲು ನಿರ್ಧರಿಸಿವೆ.

ಕರಾಳ ದಿನವನ್ನು 'ಸತ್ಯವನ್ನು ಕೊಲೆ ಮಾಡಿದ ಗೋಡ್ಸೆಯ ನಿಜರೂಪವನ್ನು, ಕರಾಳ ಮುಖ'ವನ್ನು ಚಿತ್ರಿಸುವ ದಿನವಾಗಿ ಆಚರಿಸಲು ಮುಂದಾಗಿದೆ. ಅಂದು ಬೆಳಗ್ಗೆ 10 ರಿಂದ ಸಂಜೆಯವರೆಗೆ ವಿವಿಧ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 8.30ಕ್ಕೆ ನ್ಯಾಯಾಲಯದ ಮುಂಭಾಗದಲ್ಲಿರುವ ಗಾಂಧಿ ಪುತ್ಥಳಿಗೆ ಸುಮಾರು 200 ಮಕ್ಕಳು ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ನಂತರ ಮಕ್ಕಳು ಮೆರವಣಿಗೆಯ ಮೂಲಕ ಕಲಾಮಂದಿರಕ್ಕೆ ಸಾಗುವರು. ಕಿಂದರಿಜೋಗಿ ಪ್ರತಿಮೆಯ ಮುಂಭಾಗದಲ್ಲಿ ಚರಕವನ್ನಿಟ್ಟುಕೊಂಡು ನೂಲು ತೆಗೆಯುವುದು, ಗಾಂಧಿಯನ್ನು ಬಣ್ಣಗಳಲ್ಲಿ ಮೂಡಿಸುವುದು ನಡೆಯುತ್ತದೆ.

ಕಲಾಮಂದಿರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಿನಿಮಾ ಕ್ಷೇತ್ರದ ಪ್ರಸಿದ್ಧ ಕಲಾವಿದರು 'ಗಾಂಧಿ: ನನ್ನ ಕಣ್ಣಲ್ಲಿ' ವಿಷಯ ಕುರಿತು ಮಾತನಾಡಲಿದ್ದಾರೆ. ರಾಜ್ಯದ ಬೇರೆ ಬೇರೆ ಭಾಗಗಳಿಂದ ಬರುವ ಹೆಸರಾಂತ ಕಲಾವಿದರು ಗೆರೆ ಮತ್ತು ಬಣ್ಣಗಳಲ್ಲಿ ಗಾಂಧಿಯನ್ನು ಮೂಡಿಸುವರು. ಮಕ್ಕಳಿಗಾಗಿ ಗಾಂಧಿ ಚಿತ್ರ ರಚನಾ ಸ್ಪರ್ಧೆ ಎರಡು ವಿಭಾಗಗಳಲ್ಲಿ ನಡೆಯುತ್ತದೆ.

ಪಿಯುಸಿ ಮತ್ತು ಪದವಿ ತರಗತಿಗಳಲ್ಲಿ ಓದುವ ವಿದ್ಯಾರ್ಥಿ ಗಳಿಗಾಗಿ ಕ್ವಿಜ್ ಆಯೋಜಿಸಲಾಗಿದೆ. ವಿಜೇತರಿಗೆ ನಗದು ಬಹುಮಾನ ವಿತರಿ ಸಲಾಗುವುದು. ಗಾಂಧಿಯನ್ನು ಕುರಿತ ಕಿರುಚಿತ್ರ ನಿರ್ಮಾಣ ಸ್ಪರ್ಧೆ ಏರ್ಪಡಿಸಲಾಗಿದೆ. ಗಾಂಧೀಜಿಯವರಿಗೆ ಪ್ರಿಯ ವಾಗಿದ್ದ ಭಜನ್ ಹಾಗೂ ಕವಿತಾ ವಾಚನ, ಮಕ್ಕಳಿಂದ ಮಾತು, ನಾಟಕ ವಾಚನ ಇತ್ಯಾದಿ ಕಾರ್ಯಕ್ರಮಗಳೂ ನಡೆಯಲಿವೆ. ಸಮಾರೋಪ ಸಮಾರಂಭದಲ್ಲಿ ವಿವಿಧ ಧಾರ್ಮಿಕ ನಂಬಿಕೆಯ ಹಲವು ನಾಯಕರು, ಮಹಿಳಾ ಸಂಘಟನೆಗಳ ಮುಖ್ಯಸ್ಥರು, ದಲಿತ ಮುಖಂಡರು, ವಿದ್ಯಾರ್ಥಿ ಪ್ರತಿನಿಧಿಗಳು, ಕ್ರಿಯಾಶಾಲಿ ಯುವಜನರು ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ವಿವಿಧ ಸಂಘಟನೆಗಳ ಮುಖಂಡರಾದ ಸವಿತಾ ಮಲ್ಲೇಶ್, ಅಭಿರುಚಿ ಗಣೇಶ್, ಉಗ್ರನರಸಿಂಹೇಗೌಡ, ಸುಶೀಲಾ, ಶಬೀರ್ ಮುಸ್ತಾಫ, ಹೊಸಕೋಟೆ ಬಸವರಾಜು, ಕಾಳಚನ್ನೇಗೌಡ, ನಗರ್ಲೆ ವಿಜಯ್ ಕುಮಾರ್, ಹರೀಶ್ ಕುಮಾರ್, ವರಹಳ್ಳಿ ಆನಂದ ಸೇರಿದಂತೆ ಇನ್ನಿತರರು ಸಿದ್ಧತಾ ಕಾರ್ಯದಲ್ಲಿ ತೊಡಗಿದ್ದಾರೆ.

ದೆಹಲಿಯ ಬುರಾರಿಯಲ್ಲಿ 4 ಅಂತಸ್ತಿನ ಕಟ್ಟಡ ಕುಸಿತ; ಇಬ್ಬರು ಸಾವು, 12 ಜನರ ರಕ್ಷಣೆ

ದೆಹಲಿ, ಜ.28– ಉತ್ತರ ದೆಹಲಿಯ ಬುರಾರಿ ಪ್ರದೇಶದಲ್ಲಿ ನಾಲ್ಕು ಅಂತಸ್ತಿನ ಕಟ್ಟಡ ಕುಸಿದು ಇಬ್ಬರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ಆಸ್ಕರ್ ಪಬ್ಲಿಕ್ ಶಾಲೆಯ ಬಳಿ ಹೊಸದಾಗಿ ನಿರ್ಮಿಸಲಾದ ಕಟ್ಟಡ ಸೋಮವಾರ ಸಂಜೆ ಕುಸಿದಿದೆ. ಇಲ್ಲಿಯವರೆಗೆ 12 ಜನರನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಲ್ಲಿಯವರೆಗೆ ಇಬ್ಬರು ಮೃತಪಟ್ಟಿರುವುದು ದೃಢವಾಗಿದ್ದು, 12 ಜನರನ್ನು ರಕ್ಷಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದ್ದು, ಇನ್ನೂ ಹೆಚ್ಚಿನ ಜನರು ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಸಾಧ್ಯತೆ ಇದೆ ಎಂದು ಅವರು ಹೇಳಿದರು. ಸೋಮವಾರ ರಾತ್ರಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ದೆಹಲಿ ಪೊಲೀಸರು, ಸಂಜೆ 7 ಗಂಟೆ ಸುಮಾರಿಗೆ ಕುಸಿತದ ಬಗ್ಗೆ ಮಾಹಿತಿ ಪಡೆದರು.

ರಥಸಪ್ತಮಿ ಅಂಗವಾಗಿ 108 ಸಾಮೂಹಿಕ ಸೂರ್ಯ ನಮಸ್ಕಾರ

ಮೈಸೂರು, ಜ. 28– ಮೈಸೂರು ಯೋಗ ಒಕ್ಕೂಟದ ವತಿಯಿಂದ 24ನೇ ವಾರ್ಷಿಕೋತ್ಸವ ಮತ್ತು ರಥಸಪ್ತಮಿ ಅಂಗವಾಗಿ 108 ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮಗಳನ್ನು ಫೆ. 4 ರಂದು ಬೆಳಗ್ಗೆ 5.30ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಎಲ್ಲಾ ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಯೋಗ ಕೇಂದ್ರದ ವಿದ್ಯಾರ್ಥಿಗಳು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಮೊ. 9481170530 ಸಂಪರ್ಕಿಸಬಹುದು.

ರಿಷಬ್ ಸಿದ್ದಿ ಲೇಔಟ್‌ನಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಕೇರ್ಗಳ್ಳಿಯಲ್ಲಿರುವ ರಿಷಬ್ ಸಿದ್ದಿ ಲೇಔಟ್‌ನಲ್ಲಿ ನಿವಾಸಿಗಳು 76ನೇ ಗಣರಾಜ್ಯೋತ್ಸವ ಆಚರಿಸಿದರು. ಈ ವೇಳೆ ಧ್ವಜಾರೋಹಣ ನೆರವೇರಿಸಿ, ಪರಸ್ಪರ ಸಿಹಿ ವಿತರಿಸಿಕೊಂಡು ಸಂವಿಧಾನ ದಿನವನ್ನು ಸಂಭ್ರಮಿಸಿದರು.

ಡಾ.ಜೆ.ಪೂಜಾ ಅತ್ಯುತ್ತಮ ಶಿಕ್ಷಕಿ



ಮೈಸೂರಿನ ಶಾರದಾವಿಲಾಸ ಪದವಿ ಪೂರ್ವ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಜೆ. ಪೂಜಾ ಅವರಿಗೆ ಬೆಂಗಳೂರಿನ ಪ್ರತಿಷ್ಠಿತ IIBS (International Institute of business studies) ಸಹಯೋಗ ಹಾಗೂ ಬಿ.ದೇವಿ ಶೈಕ್ಷಣಿಕ ಮತ್ತು ಚಾರಿಟಬಲ್ ಟ್ರಸ್ಟ್ ವತಿಯಿಂದ ಕೊಡಮಾಡುವ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಯನ್ನು ಅವರ ವಿಶೇಷ ಬೋಧನ ಕೌಶಲ, ಸಮರ್ಪಣಾ ಮನೋಭಾವ ಹಾಗೂ ಪುಸ್ತಕಗಳ ಬರವಣಿಗೆಗಾಗಿ ನೀಡಿ ಗೌರವಿಸಲಾಯಿತು.

ಕೆ.ಹೆಮ್ಮನಹಳ್ಳಿ ಶಾಲೆಯಲ್ಲಿ 76ನೇ ಗಣರಾಜ್ಯೋತ್ಸವ



ಮೈಸೂರು ತಾ. ಕೆ.ಹೆಮ್ಮನಹಳ್ಳಿ ಶಾಲೆಯಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷೆ ಲಕ್ಷ್ಮಿ, ಮಾಜಿ ಗ್ರಾ.ಪಂ ಸದಸ್ಯ ಎಂ. ಗಣೇಶ್, ಮುಖ್ಯಶಿಕ್ಷಕಿ ಸುಮಂಗಲ, ಶಿಕ್ಷಕರಾದ ವಚನ ಕುಮಾರಸ್ವಾಮಿ, ತಾರಾ, ಜ್ಯೋತಿ, ಎಸ್‌ಡಿಎಂಸಿ ಸದಸ್ಯರಾದ ಮಹೇಶ್, ರಾಜಮ್ಮ, ಶಾಲಾ ಅಡುಗೆ ಸಿಬ್ಬಂದಿ ಸವಿತ, ಗೌರಮ್ಮ ಇತರರು ಉಪಸ್ಥಿತರಿದ್ದರು.

ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಬೋಗಾದಿ ಮುಖ್ಯ ರಸ್ತೆಯಲ್ಲಿರುವ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಸರಸ್ವತಿಪುರಂ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಪುರುಷೋತ್ತಮ್, ಮೈಸೂರು ವಿವಿ ಆರ್ಗಾನಿಕ್ ಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥ ಕೆ.ಬಸಪ್ಪ ಹಾಗೂ ನಿವೃತ್ತ ಪ್ರಾಂಶುಪಾಲ ನಾಗಭೂಷಣ್ ಧ್ವಜಾರೋಹಣ ನೆರವೇರಿಸಿದರು. ಶಾಲಾ ಅಧ್ಯಕ್ಷ ಟಿ.ರಂಗಪ್ಪ, ಆಡಳಿತಾಧಿಕಾರಿ ಕಾಂತಿನಾಯಕ್, ಮುಖ್ಯೋಪಾಧ್ಯಾಯ ಮೊಹಮ್ಮದ್ ಫಾರೂಕ್, ಶಿಕ್ಷಕ ವೃಂದ, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿಶ್ವಪ್ರಜ್ಞ ಶಾಲೆಯಲ್ಲಿ ಗಣರಾಜ್ಯೋತ್ಸವ



ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞ ಶಾಲೆಯಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಶ್ರೀ ಗಣೇಶ ಸಂಸ್ಕೃತ ಜ್ಯೋತಿಷ್ಯ ಪಾಠಶಾಲೆಯ ಆಡಳಿತಾಧಿಕಾರಿ ವೆಂಕಟರಮಣ ಹೆಗಡೆ ಭಾಗವಹಿಸಿದ್ದರು. ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ ಬಿ.ಕೆ.ಸುರೇಶ್‌ಬಾಬು ಧ್ವಜಾರೋಹಣ ನೆರವೇರಿಸಿದರು. ಶಾಲೆಯ ಆಡಳಿತ ಮಂಡಳಿಯ ಉಪಾಧ್ಯಕ್ಷ ವೈ.ಎನ್.ಶಂಕರೇಗೌಡ, ಕಾರ್ಯಾಧ್ಯಕ್ಷ ಎಂ.ಎನ್. ಕೃಷ್ಣಸ್ವಾಮಿ, ಆಡಳಿತ ಮಂಡಳಿಯ ಸದಸ್ಯರಾದ ಎ.ಆರ್.ದೇವರಾಜು, ಎಸ್.ಸತ್ಯಾನಂದ, ಆರ್.ಕೆ.ರಾಜು, ಕಾರ್ಯದರ್ಶಿ ಎಂ.ಎನ್.ಮಹೇಂದ್ರ, ಹಾಗೂ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಜಿ.ಎನ್. ಸುಧಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 29 ಜನವರಿ 2025

ಮೈಕ್ರೋ ಫೈನಾನ್ಸ್‌ನಿಂದ ಸಾಲಕ್ಕೆ ಮನೆ ಜಪ್ತಿ

ಮನನೊಂದ ಮಹಿಳೆ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನ



ಹಲಗೂರು, ಜ.28– ಮೈಕ್ರೋ ಫೈನಾನ್ಸ್ ಕಂಪನಿಯವರು ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿ ಮನೆಯನ್ನೇ ಜಪ್ತಿ ಮಾಡಿದ ಹಿನ್ನೆಲೆಯಲ್ಲಿ ಮನನೊಂದ ಮಹಿಳೆಯೊಬ್ಬರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಹಲಗೂರು ಹೋಬಳಿಯ ಕೊನ್ನಾಪುರ ಗ್ರಾಮದಲ್ಲಿ ಜರುಗಿದೆ.

ಗ್ರಾಮದ ಅಂದಾನಯ್ಯ ಎಂಬುವರ ಪತ್ನಿಯಾದ 52 ವರ್ಷದ ಪ್ರೇಮ ಮಂಗಳವಾರ ಬೆಳಿಗ್ಗೆ 11.30ರ ಸಮಯದಲ್ಲಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಸಾವು ಬದುಕಿನೊಡನೆ ಹೋರಾಟ ನಡೆಸುತ್ತಿದ್ದಾರೆ. ಹಲಗೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

2018ರಲ್ಲಿ ಚನ್ನಪಟ್ಟಣದ ಖಾಸಗಿ ಫೈನಾನ್ಸ್ ಕಂಪನಿಯೊಂದರಿಂದ 6 ಲಕ್ಷ ರೂ. ಸಾಲ ಪಡೆದಿದ್ದ ಪ್ರೇಮ ಅವರು ಕಳೆದ 5–6 ವರ್ಷಗಳಿಂದ ಸಾಲದ ಕಂತಿನ ಹಣ ಕಟ್ಟುತ್ತ ಬಂದಿದ್ದರೂ ಸಹ ಇದು ಬಡ್ಡಿಗೆ ಜಮಾ ಆಗಿದೆ ಎಂದು ಹೇಳಿ 6 ಲಕ್ಷ ಹೊಸ ಸಾಲ ಎಂದು ನವೀಕರಿಸಿಕೊಂಡು ಉಳಿಕೆ ಬಡ್ಡಿ ಸೇರಿ 8 ಲಕ್ಷಕಟ್ಟಬೇಕೆಂದು ಪಟ್ಟು ಹಿಡಿದಿದ್ದ ಕಂಪನಿಯವರು ನೋಟಿಸ್ ನೀಡಿದ್ದರು ಎನ್ನಲಾಗಿದೆ.

ಪತಿಗೆ ಪಾರ್ಶ್ವವಾಯುವಾಗಿ, ಪುತ್ರನಿಗೆ ಅನಾರೋಗ್ಯ ಉಂಟಾದ ಹಿನ್ನೆಲೆಯಲ್ಲಿ ಮೂರು ತಿಂಗಳಿಂದ ಮೈಕ್ರೋ ಫೈನಾನ್ಸ್‌ಗೆ ಸಾಲ ಕಟ್ಟಿರಲಿಲ್ಲ ಎನ್ನಲಾಗಿದೆ. ಸಾಲವನ್ನು ಪುತ್ರಿಯ ವಿವಾಹಕ್ಕೆ ಮಾಡಲಾಗಿತ್ತು ಎಂದು ತಿಳಿದು ಬಂದಿದೆ. ಹಣ ಕಟ್ಟಲು ವಿಳಂಬವಾದ ಕಾರಣಕ್ಕೆ ಒಂದು ವಾರದ ಹಿಂದೆ ಕಂಪನಿಯವರು ಈ ಕುಟುಂಬ ವಾಸವಿದ್ದ ಮನೆಯನ್ನು ಸೀಜ್ ಮಾಡಿದ್ದರು ಎನ್ನಲಾಗಿದೆ. ಕಳೆದ ಒಂದು ವಾರದಿಂದ ಪ್ರೇಮ ಹಾಗೂ ಕುಟುಂಬದವರು ತಮ್ಮ ಸಂಬಂಧಿಕರ ಮನೆಯಲ್ಲಿ ವಾಸವಿದ್ದು ಇದರಿಂದ ಮನನೊಂದು ಪ್ರೇಮ ಮಂಗಳವಾರ ಬೆಳಿಗ್ಗೆ 11.30ರ ಸಮಯದಲ್ಲಿ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲಗೂರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೆಆರ್‌ಎಸ್‌ನಲ್ಲಿ ಅವೈಜ್ಞಾನಿಕ ಡಿಸ್ನಿಲ್ಯಾಂಡ್ ಕೈಬಿಡಿ

ಸಾರ್ವಜನಿಕ ಸಭೆಯಲ್ಲಿ ರೈತರು, ಪರಿಸರವಾದಿಗಳ ಆಗ್ರಹ

ಶ್ರೀರಂಗಪಟ್ಟಣ: ರಾಜ್ಯ ಸರ್ಕಾರ ಕೆಆರ್‌ಎಸ್ ಬೃಂದಾವನದ ಬಳಿ ನಿರ್ಮಿಸಲುದ್ದೇಶಿಸಿರುವ ಅವೈಜ್ಞಾನಿಕ ಅಮ್ಯೂಸ್‌ಮೆಂಟ್ ಪಾರ್ಕ್(ಡಿಸ್ನಿಲ್ಯಾಂಡ್) ಯೋಜನೆಯನ್ನು ಕೈ ಬಿಡುವಂತೆ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಮುಖಂಡರು ಆಗ್ರಹಿಸಿದರು.

ತಾಲೂಕಿನ ಕೆಆರ್‌ಎಸ್ ಬಳಿ ಪ್ರವಾಸಿ ಮಂದಿರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ನಿವೃತ್ತ ಅರಣ್ಯಾಧಿಕಾರಿ ಹಾಗೂ ಹಿರಿಯ ಪರಿಸರವಾದಿ ಡಾ.ಅ.ನ.ಯಲ್ಲಪ್ಪ ರೆಡ್ಡಿ ಅಮ್ಯೂಸ್‌ಮೆಂಟ್ ಪಾರ್ಕಿನಿಂದಾಗುವ ಹಾನಿ ಹಾಗೂ ದುಷ್ಪರಿಣಾಮಗಳ ಕುರಿತು ಮಾತನಾಡಿ, ಸುಮಾರು 2663 ಕೋಟಿ ರೂ. ವೆಚ್ಚದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್‌ನ್ನು ನಿರ್ಮಿಸಿ ಖಾಸಗಿ ವ್ಯವಸ್ಥೆಗೆ 34 ವರ್ಷಗಳಿಗೆ ಗುತ್ತಿಗೆ ನೀಡಲು ಸರ್ಕಾರ ಮುಂದಾಗಿರುವುದು ಅಪಾಯಕಾರಿಯಾದ ಬೆಳವಣಿಗೆಯಾಗಿದ್ದು, ಸಾರ್ವಜನಿಕವಾಗಿ ವಿರೋಧಿಸಬೇಕು ಎಂದರು.

ಪ್ರವಾಸೋದ್ಯಮದ ಹೆಸರಿನಲ್ಲಿ ಕೆಆರ್‌ಎಸ್



ಸಾರ್ವಜನಿಕರ ಸಭೆಯಲ್ಲಿ ಡಿಸ್ನಿಲ್ಯಾಂಡ್ ಯೋಜನೆ ಕೈಬಿಡುವಂತೆ ಆಗ್ರಹಿಸಲಾಯಿತು.

ಅಣೆಕಟ್ಟಿನ ಭದ್ರತೆ ಹಾಗೂ ಕೆಆರ್‌ಎಸ್ ಅಣೆಕಟ್ಟೆಯ ಸುತ್ತಲ ಗ್ರಾಮಗಳ ಕೃಷಿ ಬದುಕು, ರೈತರ ಬೇಸಾಯದ ಬದುಕು ಪಲ್ಲಟಗೊಳಿಸುವ ಅವೈಜ್ಞಾನಿಕ ಯೋಜನೆ ಇದಾಗಿದ್ದು, ಜೀವ ವಿರೋಧಿ, ಜನವಿರೋಧಿ, ಸಂವಿಧಾನ ವಿರೋಧಿ, ಕರಾಳ, ಅಪಾಯಕಾರಿಯಾಗಿದೆ. ಸುಮಾರು 2663 ಕೋಟಿ ರೂ. ವೆಚ್ಚದ ಅಮ್ಯೂಸ್‌ಮೆಂಟ್ (ಡಿಸ್ನಿಲ್ಯಾಂಡ್) ಪಾರ್ಕ್ ನಿರ್ಮಾಣ ಯೋಜನೆಯ ಟೆಂಡರ್‌ನ್ನು ಸರ್ಕಾರ ಕೂಡಲೆ ರದ್ದು ಮಾಡಬೇಕು. ಜೊತೆಗೆ ಈ ಯೋಜನೆಯನ್ನು ಕೈ ಬಿಡಬೇಕು ಎಂದು ಸಭೆಯಲ್ಲಿ ಆಗ್ರಹಿಸಿದರು.

ನಂತರ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷೆ ಸುನಂದ ಜಯರಾಂ ಮಾತನಾಡಿ, ಅಣೆಕಟ್ಟೆ ಬಳಿ ನಿರ್ಮಿಸಲಾಗುವ ಅಮ್ಯೂಸ್‌ಮೆಂಟ್ ಪಾರ್ಕಿನಿಂದ ಅಪಾಯವಾಗಲಿದೆ. ಕೆಆರ್‌ಎಸ್ ಅಣೆಕಟ್ಟು ಸುತ್ತಮುತ್ತಾ 20 ಕಿ.ಮೀ. ವ್ಯಾಪ್ತಿಯಲ್ಲಿ ಗಣಿಗಾರಿಕೆ ಹಾಗೂ ಅಣೆಕಟ್ಟೆಗೆ ಅಪಾಯವಾಗುವ ಇತರೆ ಯಾವುದೇ ತರದ ಚಟುವಟಿಕೆಗಳನ್ನು ಮಾಡಬಾರದು ಎಂದು ನಿಷೇಧಿಸಿದ್ದರೂ ಈ ಯೋಜನೆ ಮಾಡಿರುವುದು ಖಂಡನೀಯ ಎಂದರು.

ಕೆಆರ್‌ಎಸ್ ಅಣೆಕಟ್ಟೆ ಪ್ರದೇಶ ಸೂಕ್ಷ್ಮ ಪ್ರದೇಶಕ್ಕೆ ಒಳಪಟ್ಟಿದ್ದು, ದಟ್ಟಣೆಯ ಸಾರ್ವಜನಿಕ ಚಟುವಟಿಕೆಗಳಿಂದ ಮುಕ್ತವಾಗಿರಬೇಕು. ಅಣೆಕಟ್ಟು ಬಳಿ ಪ್ರವಾಸೋದ್ಯಮದ ಹೆಸರಿನಲ್ಲಿ ಉದ್ಯೋಗ ಸೃಷ್ಟಿ ಬೃಹತ್ ಮನರಂಜನೆ ಪಾರ್ಕ್‌ಗಳ ನಿರ್ಮಾಣ, ಸಾರ್ವಜನಿಕ ವಸತಿ ಸೌಲಭ್ಯ ವ್ಯಾಪಾರ, ವ್ಯವಹಾರದಂತೆ ಈ ಚಟುವಟಿಕೆಗಳು ನಡೆಯಬಾರದು ಎಂದರು.

ಕೆಆರ್‌ಎಸ್ ಗ್ರಾ.ಪಂ ಅಧ್ಯಕ್ಷ ಜೆ.ರವಿ ಶಂಕರ್ ಅಧ್ಯಕ್ಷತೆ ವಹಿಸಿದ್ದರು. ರೈತ ಮುಖಂಡರಾದ ಪಚ್ಚೆ ನಂಜುಂಡಸ್ವಾಮಿ, ಇಂಡವಾಳು ಚಂದ್ರಶೇಖರ್, ಬೋರಯ್ಯ ಡಿಎಸ್‌ಎಸ್ ಮುಖಂಡ ಎಂ.ವಿ.ಕೃಷ್ಣ, ಜಯಕರ್ನಾಟಕ ಸಂಘಟನೆ ನಾರಾಯಣ ಸಭೆ ಕುರಿತು ಮಾತನಾಡಿದರು.

ಈ ವೇಳೆ ಕೆಆರ್‌ಎಸ್ ಗ್ರಾ.ಪಂ ಸದಸ್ಯ ಕೆ.ರಾಜು, ವಸಂತಕುಮಾರ್, ಮೂರ್ತಿ, ಮುಖಂಡರಾದ ನಾಗರಾಜು, ಪಳನಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಪಿಎಚ್.ಡಿ ಪದವಿ



ಮೈಸೂರು: ಡಾ.ಟಿ.ವಿ.ಸೋಮಶೇಖರ ಅವರ ಮಾರ್ಗದರ್ಶನದಲ್ಲಿ ಕೆ.ಕೆಂಪರಾಜು ಅವರು ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಿಷ ಕುಡಿದು ಪ್ರಾಣ ಬಿಡುತ್ತೇವೆ ಹೊರತು ಜಮೀನು ಬಿಡೆವು

ನಾಯಕನಕೊಪ್ಪಲು ಗ್ರಾಮಸ್ಥರ ಆಕ್ರಂದನ



ನಾಯಕನಕೊಪ್ಪಲು ಗ್ರಾಮಸ್ಥರು ಜಮೀನಿನ ಬಳಿ ಪ್ರತಿಭಟನೆ ನಡೆಸುತ್ತಿರುವುದು.

ನಾಗಮಂಗಲ: ವಿಷ ಕುಡಿದು ಪ್ರಾಣ ಬಿಡುತ್ತೇವೆ ಹೊರತು ಜಮೀನು ಬಿಡೆವು... ಇದು ಸರ್ವೆ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆ ಜಂಟಿ ಸರ್ವೇ ಸಂದರ್ಭದಲ್ಲಿ ಅಧಿಕಾರಿಗಳ ಕಾಲು ಹಿಡಿದು ನಮ್ಮ ಜಮೀನನ್ನು ನಮಗೆ ಉಳಿಸಿ ಕೊಡಿ ಇಲ್ಲವಾದರೆ ವಿಷ ಕೊಟ್ಟುಬಿಡಿ ಎಂದು ಆಕ್ರಂದನ ವ್ಯಕ್ತಪಡಿಸಿದವರು ನಾಯಕನಕೊಪ್ಪಲು ಗ್ರಾಮಸ್ಥರು.

ತಾಲೂಕಿನ ಬೆಳ್ಳೂರು ಹೋಬಳಿಯ ನಾಯಕನಕೊಪ್ಪಲು ಗ್ರಾಮದ ಸರ್ವೇ ನಂಬರ್ 45ರಲ್ಲಿ 18 ಎಕರೆ 14 ಕುಂಟೆ ಗೋಮಾಳ ಜಮೀನಿನಲ್ಲಿ ಸುಮಾರು 70ಕ್ಕೂ ಅಧಿಕ ಕುಟುಂಬಗಳು ಸ್ವಾತಂತ್ರ್ಯ ಪೂರ್ವದಿಂದಲೇ ಉಳುಮೆ ಮಾಡಿಕೊಂಡು ಬದುಕು ಕಟ್ಟಿಕೊಂಡು ಜೀವನ ನಡೆಸುತ್ತಿದ್ದೇವೆ ಅಂದಿನಿಂದ ಇಂದಿನವರೆಗೂ ನಾವುಗಳು ಅನುಭವದಲ್ಲಿ ಇದ್ದೇವೆ. ಆದರೆ ಅನ್ಯರು ಅಕ್ರಮವಾಗಿ ಜಾಗ ಕಬಳಿಸಿ ತಮಗೆ ತೊಂದರೆ ನೀಡುತ್ತಿದ್ದಾರೆ. ನಾವು ಪ್ರಾಣ ಬೇಕಾದರೂ ಬಿಟ್ಟೇವು ಜಮೀನು ಮಾತ್ರ ಬಿಡೆವು ಎಂದು ಆಗ್ರಹಿಸಿ ಶಾಮಿಯಾನ ಹಾಕಿ ಧರಣಿ ಕುಳಿತು ಪ್ರತಿಭಟನೆ ನಡೆಸುತ್ತಿದ್ದಾರೆ. ನಮಗೆ ಅನ್ಯಾಯವಾಗಿದೆ. ಅಧಿಕಾರಿಗಳು ನಮಗೆ ಸೂಕ್ತ ನ್ಯಾಯ ಕೊಡಿಸಿ ಕೊಡಬೇಕು ಎಂದು ಆಗ್ರಹಿಸಿದ್ದಾರೆ.

ಜಮೀನು ಅಳತೆಗೆ ಸಂಬಂಧ ಸ್ಥಳಕ್ಕೆ ತಾಲೂಕು ಸರ್ವೇ ಅಧಿಕಾರಿಗಳು ಅಳೆಯಲು ಬಂದ ಸಂದರ್ಭದಲ್ಲಿ ಈ ಜಾಗದಲ್ಲಿ ನಾವು ಉಳುಮೆ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದೇವೆ ಹಾಗೂ ತೆಂಗಿನ ಗಿಡಗಳನ್ನು ಸಹ ನೆಟ್ಟಿದ್ದು ಈ ಜಾಗಕ್ಕೆ ಸಂಬಂಧಪಟ್ಟಂತೆ ನಾಗಮಂಗಲ ಸಿವಿಲ್ ನ್ಯಾಯಾಲಯದಲ್ಲಿ ಕೇಸ್ ದಾಖಲಾಗಿದೆ. ಕೇಸ್ ಅಂತ್ಯವಾಗುವವರೆಗೆ ನೀವು ಅಳತೆ ಕಾರ್ಯ ಮಾಡಕೂಡದು ಹಾಗೂ ನೀವು ಅಳತೆ ಮಾಡುವುದಾದರೆ ನಮಗೆ ವಿಷ ಕೊಟ್ಟು ಅಳತೆ ಮಾಡುವಂತೆ ಗ್ರಾಮಸ್ಥರು ಪಟ್ಟು ಹಿಡಿದಿರುವ ಘಟನೆ ಕಂಡುಬಂದಿದೆ. ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಅಧಿಕಾರಿಗಳು ಅಳತೆ ಮಾಡಲು ಮುಂದಾದಾಗ ದಯವಿಟ್ಟು ಇದು ನಮ್ಮ ಜೀವನಕ್ಕೆ ಆಧಾರವಾಗಿರುವ ಜಾಗ. ನಮಗೆ ಕೊಡಿಸಿಕೊಡಿ ಎಂದು ಗ್ರಾಮಸ್ಥರು ಕಾಲು ಹಿಡಿದು ತಮ್ಮ ಅಳಲನ್ನು ತೋಡಿಕೊಂಡರು.

ಮನ್‌ಮುಲ್, ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಪುಟ್ಟರಾಜು ಮನವಿ



ಕಾರ್ಯಕರ್ತರ ಸಭೆಯಲ್ಲಿ ಸಿ.ಎಸ್.ಪುಟ್ಟರಾಜು ಮಾತನಾಡಿದರು.

ಪಾಂಡವಪುರ, ಜ.28– ಸ್ಥಳೀಯ ಸಂಸ್ಥೆ ಚುನಾವಣೆಗಳಾದ ಮನ್‌ಮುಲ್, ಪಿಎಲ್‌ಡಿ ಬ್ಯಾಂಕ್ ಚುನಾವಣೆಗಳಲ್ಲಿ ಪಕ್ಷದ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಡಬೇಕೆಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರು ಹೇಳಿದರು.

ತಾಲೂಕಿನ ಎಲೆಕೆರೆ ಹ್ಯಾಂಡ್‌ಪೋಸ್ಟ್‌ನ ರುತ್ವಿ ಕನ್ವೆಷನ್ ಹಾಲ್‌ನಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ನೇತೃತ್ವದಲ್ಲಿ ಪಿಎಲ್‌ಡಿ ಬ್ಯಾಂಕ್, ಮನ್‌ಮುಲ್ ಚುನಾವಣೆ ಸಂಬಂಧ ನಡೆದ ಜೆಡಿಎಸ್–ಬಿಜೆಪಿ ಎನ್‌ಡಿಎ ಮೈತ್ರಿಕೂಟದ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಳೆದ ವಿಧಾನಸಭೆ ಚುನಾವಣೆಯ ಸೋಲಿನ ಬಗ್ಗೆ ಚರ್ಚಿಸುವುದು ಬೇಡ, ಚುನಾವಣೆ ಮುಗಿದ ಒಂದೇ ವರ್ಷದಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಎರಡು ಪಕ್ಷದ ಕಾರ್ಯಕರ್ತರು ಹಾಗೂ ಕ್ಷೇತ್ರದ ಜನತೆ ತಮ್ಮ ಶಕ್ತಿಯನ್ನು ತೋರಿಸಿದ್ದಾರೆ. ಇದೀಗ ಎದುರಾಗಿರುವ ಮನ್‌ಮುಲ್, ಪಿಎಲ್‌ಡಿ ಬ್ಯಾಂಕ್ ಹಾಗೂ ಸ್ಥಳೀಯ ಸಂಸ್ಥೆಗಳಲ್ಲೂ ಪಕ್ಷದ ಅಭ್ಯರ್ಥಿಗಳನ್ನು ಎಲ್ಲರೂ ಒಗ್ಗಟ್ಟಿನಿಂದ ವೈಮನಸ್ಸುಬಿಟ್ಟು ಗೆಲ್ಲಿಸಿಕೊಡುವ ಮೂಲಕ ಕೈಬಲಪಡಿಸುವ ಕೆಲಸ ಮಾಡಬೇಕು. 25 ವರ್ಷದಿಂದಲೂ ಪಿಎಲ್‌ಡಿ ಬ್ಯಾಂಕ್ ಜೆಡಿಎಸ್ ಅಧಿಕಾರದಲ್ಲಿಯೇ ಇದೆ. ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲೂ ಮುಖಂಡರು, ಅಭ್ಯರ್ಥಿಗಳು ಕುಳಿತು ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಬೇಕು ಎಂದು ತಿಳಿಸಿದರು.

ಮನ್‌ಮಲ್ ಚುನಾವಣೆಯಲ್ಲಿ ಎದುರು ಅಭ್ಯರ್ಥಿಯ ಬಗ್ಗೆ ಹೆಚ್ಚು ಚರ್ಚಿಸುವ ಅಗತ್ಯವಿಲ್ಲ. ಪಾಪ–ಪುಣ್ಯದ ಲೆಕ್ಕಾಚಾರ ಎಲ್ಲವು ದೇವರ ಬಳಿ ಇದೆ, ಅಂತಿಮವಾಗಿ ದೇವರು, ಮತದಾರರು ತೀರ್ಮಾನಿಸುತ್ತಾರೆ. ರಾಜ್ಯ ಸರಕಾರದಿಂದ ಕನಿಷ್ಠ ಪಕ್ಷ ಕ್ಷೇತ್ರದಲ್ಲಿ ಗುಂಡಿ ಮುಚ್ಚಿಸಲು ಸಾಧ್ಯವಾಗದ ಸ್ಥಿತಿ ಎದುರಾಗಿದೆ. ಚಿನಕುರಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳ ಚುನಾವಣೆಗಳ ಫಲಿತಾಂಶವೇ ಮುಂದಿನ ಚುನಾವಣೆಗಳ ದಿಕ್ಸೂಚಿಯಾಗಲಿವೆ ಎಂದರು.

ಜೆಡಿಎಸ್ ಮುಖಂಡ ರಾಧಾಕೃಷ್ಣ ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಸಿ.ಯಶವಂತ್ ಕುಮಾರ್, ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ಎ.ಮಲ್ಲೇಶ್, ಬಿಜೆಪಿ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಮಂಗಳಾ ನವೀನ್‌ಕುಮಾರ್, ತಾಲೂಕು ಅಧ್ಯಕ್ಷ ಧನಂಜಯ್, ಜಕ್ಕನಹಳ್ಳಿ ಚಂದ್ರಶೇಖರ್ ಮಾತನಾಡಿದರು.

ಬೆಂಕಿಯ ಜ್ವಾಲೆಗೆ ಭಸ್ಮವಾದ ಬಾಳೆ, ತೆಂಗು, ಅಡಿಕೆ ಫಸಲು



ರೈತ ಮಂಜೇಗೌಡರ ಜಮೀನಿಗೆ ಆಕಸ್ಮಿಕ ಬೆಂಕಿ ತಗುಲಿ ತೆಂಗು, ಅಡಿಕೆ, ಬಾಳೆ ಫಸಲು ನಾಶವಾಗಿರುವುದು.

ಕಿಕ್ಕೇರಿ: ಹೋಬಳಿಯ ಗೋವಿಂದನಹಳ್ಳಿ ಗ್ರಾಮದ ಕಿರು ಅರಣ್ಯ ಸಮೀಪದ ತೋಟಕ್ಕೆ ಬೆಂಕಿ ತಗುಲಿ ಭಾರಿ ಪ್ರಮಾಣದ ಬೆಳೆ ನಷ್ಟವಾಗಿದೆ.

ಕಿಕ್ಕೇರಿ ಗ್ರಾಮದ ರೈತ ಮಂಜೇಗೌಡರಿಗೆ ಸೇರಿದ ತೋಟದಲ್ಲಿ ಬಹಳ ವರ್ಷದಿಂದ ತೋಟದಲ್ಲಿ ಮನೆ ಮಾಡಿಕೊಂಡು ಜಮೀನಿನಲ್ಲಿ ಬೇಸಾಯ ಮಾಡುತ್ತಿದ್ದರು. ಕಿಕ್ಕೇರಿ ಹಾಗೂ ಗೋವಿಂದನಹಳ್ಳಿ ಗ್ರಾಮದ ತೋಟಕ್ಕೆ ನಿತ್ಯ ಓಡಾಡಿಕೊಂಡಿದ್ದರು. ಭಾನುವಾರ ಸಂಜೆ ಆಕಸ್ಮಿಕವಾಗಿ ತೋಟಕ್ಕೆ ಬೆಂಕಿ ಬಿದ್ದಿದೆ. ಜಮೀನಿನಲ್ಲಿ ತೆಂಗು, ಅಡಿಕೆ, ಕಬ್ಬು, ಬಾಳೆ ಬೆಳೆದಿದ್ದರು.

ಬೆಂಕಿಯ ಜ್ವಾಲೆಗೆ ಸುಮಾರು ಫಲಬಿಡುವ 60 ತೆಂಗಿನಮರ, ಗೊನೆ ಬಿಡುತ್ತಿದ್ದ 400 ಬಾಳೆಗಿಡ, 150 ಅಡಿಕೆ ಮರಗಳು ನಾಶವಾಗಿವೆ. ಅಲ್ಪಸ್ವಲ್ಪ ಪ್ರಮಾಣದ ಕಬ್ಬಿನ ಗದ್ದೆಗೆ ಬೆಂಕಿ ಬಿದ್ದಿದೆ. ಬೆಂಕಿ ನಂದಿಸಲು ಅಕ್ಕಪಕ್ಕದ ಜಮೀನಿನವರು ಜೊತೆಗೂಡಿ ಹರಸಾಹಸ ಮಾಡಿದ್ದಾರೆ.

ಸುಮಾರು 2 ಲಕ್ಷ ರೂ.ಗಳಷ್ಟು ನಷ್ಟವಾಗಿದೆ ಎನ್ನಲಾಗಿದೆ. ಪ್ರಾಕೃತಿಕ ವಿಕೋಪದಡಿಯಲ್ಲಿ ಬೆಂಕಿಯಿಂದ ನಷ್ಟವಾಗಿರುವ ಜಮೀನಿನ ರೈತರಿಗೆ ತುರ್ತು ಪರಿಹಾರ ನೀಡಲು ರೈತಾಪಿ ಜನತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆಗ್ರಹಿಸಿದ್ದಾರೆ.

ಕಾರು ಡಿಕ್ಕಿ: ವೃದ್ಧ ಸಾವು, ಮಗು ಪಾರು

ಮೈಸೂರು, ಜ.28(ಎಸ್‌ಬಿಡಿ)– ಕಾರು ಡಿಕ್ಕಿ ಹೊಡೆದ ಪರಿಣಾಮ ವೃದ್ಧರೊಬ್ಬರು ಮೃತಪಟ್ಟು, ನಾಲ್ಕು ವರ್ಷದ ಮಗು ಸೇರಿ ಇಬ್ಬರು ಗಾಯಗೊಂಡಿರುವ ಘಟನೆ ಮೈಸೂರು–ಹೆಚ್.ಡಿ.ಕೋಟೆ ಮುಖ್ಯರಸ್ತೆಯಲ್ಲಿ ಭಾನುವಾರ ಸಂಜೆ ನಡೆದಿದೆ.

ಮೈಸೂರು ತಾಲೂಕು, ಜಯಪುರ ಹೋಬಳಿ ಮಂಡನಹಳ್ಳಿ ಗ್ರಾಮದ ರಾಚಯ್ಯ(68) ಅಪಘಾತದಲ್ಲಿ ಮೃತಪಟ್ಟಿದ್ದು, ಅವರ ಜೊತೆಯಲ್ಲಿದ್ದ ನಾಲ್ಕು ವರ್ಷದ ಮೊಮ್ಮಗಳು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದು, ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರಿನಲ್ಲಿ ಚಾಲಕನ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿಯೂ ಗಾಯಗೊಂಡಿದ್ದಾರೆ.

ಭಾನುವಾರ ಸಂಜೆ 7 ಗಂಟೆ ಸಮಯದಲ್ಲಿ ಹೆಚ್.ಡಿ.ಕೋಟೆ ಕಡೆಯಿಂದ ಬಂದ ಸ್ವಿಫ್ಟ್ ಕಾರು ಫುಟ್‌ಪಾತ್‌ನಲ್ಲಿದ್ದ ಜಲ್ಲಿಗುಡ್ಡೆ ಮೇಲೆ ಹತ್ತಿ, ನಂತರ ಮನೆ ಮುಂಭಾಗ ನಿಂತಿದ್ದ ರಾಚಯ್ಯ ಹಾಗೂ ಮಗುವಿಗೆ ಡಿಕ್ಕಿ ಹೊಡೆದು, ಬಳಿಕ ವಿದ್ಯುತ್ ಕಂಬಕ್ಕೂ ಡಿಕ್ಕಿಯಾಗಿ ನಿಂತಿದೆ. ಸ್ಥಳೀಯರು ತಕ್ಷಣ ಮಗುವನ್ನು ಎತ್ತಿಕೊಂಡು ಸಂತೈಸಿದ್ದಾರೆ. ಆದರೆ ತೀವ್ರವಾಗಿ ಗಾಯಗೊಂಡಿದ್ದ ರಾಚಯ್ಯ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆ ಬಳಿಕ ಕಾರು ಚಾಲಕ ಪರಾರಿಯಾಗಿದ್ದು, ಆತನ ಪಕ್ಕದ ಸೀಟ್‌ನಲ್ಲಿದ್ದವರು ಗಾಯಗೊಂಡಿದ್ದಾರೆ. ಹಿಂಭಾಗದಲ್ಲಿದ್ದ ಮತ್ತಿಬ್ಬರು ಪಾರಾಗಿದ್ದಾರೆ. ಈ ಸಂಬಂಧ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಂಜನಗೂಡು ರಸ್ತೆಯಲ್ಲಿ ಸರಣಿ ಅಪಘಾತ; ವಾಹನಗಳಿಗೆ ಹಾನಿ

ಮೈಸೂರು, ಜ.28(ಎಸ್‌ಬಿಡಿ)–ಮೈಸೂರು–ನಂಜನಗೂಡು ರಸ್ತೆಯಲ್ಲಿ ಸೋಮವಾರ ಸಂಜೆ ಸರಣಿ ಅಪಘಾತ ಸಂಭವಿಸಿ ಸಾರಿಗೆ ಬಸ್ ಸೇರಿದಂತೆ ಮೂರು ವಾಹನಗಳಿಗೆ ಹಾನಿಯಾಗಿದ್ದು, ಅದೃಷ್ಟವಶಾತ್ ಹೆಚ್ಚಿನ ಅಪಾಯ ಸಂಭವಿಸಿಲ್ಲ. ಮೈಸೂರಿನಿಂದ ನಂಜನಗೂಡಿಗೆ ತೆರಳುತ್ತಿದ್ದ ಸಾರಿಗೆ ಸಂಸ್ಥೆ ಬಸ್, ಟೋಲ್ ಸಮೀಪದ ಪೆಟ್ರೋಲ್ ಬಂಕ್ ಬಳಿ ಗೂಡ್ಸ್ ವಾಹನಕ್ಕೆ ಡಿಕ್ಕಿಯಾಗಿದೆ. ಡಿಕ್ಕಿಯಾದ ರಭಸಕ್ಕೆ ಗೂಡ್ಸ್ ವಾಹನ ಮುಂದೆ ಸಾಗುತ್ತಿದ್ದ ಕಾರಿಗೆ ಗುದ್ದಿದೆ. ಘಟನೆಯಲ್ಲಿ ಮೂರು ವಾಹನಗಳಿಗೂ ಹಾನಿಯಾಗಿದೆ. ಅದೃಷ್ಟವಶಾತ್ ಹೆಚ್ಚಿನ ಅಪಾಯ ಸಂಭವಿಸಿಲ್ಲ. ಈ ಸಂಬಂಧ ಗೂಡ್ಸ್ ವಾಹನ ಚಾಲಕ ನೀಡಿದ ದೂರಿನನ್ವಯ ಸಾರಿಗೆ ಸಂಸ್ಥೆ ಬಸ್ ಚಾಲಕನ ವಿರುದ್ಧ ಮೈಸೂರು ದಕ್ಷಿಣ ಪೊಲೀಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಒಂದನೇ ಪುಟದಿಂದ

ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ರಥೋತ್ಸವ

ಭಕ್ತರು ಹಣ್ಣು– ಜವನ ಎಸೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು.

ಶ್ರೀಮಠದ ಸಕಲ ಬಿರುದಾವಳಿಗಳ ಸಮೇತ ನಂದಿ ಧ್ವಜ, ಛತ್ರಿ ಚಾಮರ, ಬಿರುದಾವಳಿಗಳು, ಸೂರಿಪಾನಿ, ಲಿಂಗಾಧೀರರು, ನಾದಸ್ವರ, ಸ್ಯಾಕ್ಸೋಫೋನ್, ವೀರಗಾಸೆ, ಪೂಜಾ ಕುಣಿತ, ಗಾರುಡಿ ಗೊಂಬೆ, ತಮಟೆ ಮತ್ತು ನಗಾರಿ, ಜಾಂಜ್ ಮೇಳ, ಮರಗಾಲು ಕುಣಿತ, ಡೊಳ್ಳು ಕುಣಿತ, ಕಂಸಾಳೆ, ಹುಲಿ ವೇಷಧಾರಿಗಳು, ದಾನಪಟ್ಟಿ, ದೊಡ್ಡವರಸೆ, ವೀರಮಕ್ಕಳ ಕುಣಿತ, ಮಹಿಳಾ ಮತ್ತು ಪುರುಷರ ಚಂಡೆ ವಾದ್ಯ, ಕರಡಿ ಮಜಲು, ನಾಸಿಕ್ ಡ್ರಮ್ಸ್, ಸುಗ್ಗಿ ಕುಣಿತ, ಗೊರವರ ಕುಣಿತ, ಕೋಲಾಟ ಸೇರಿದಂತೆ 40ಕ್ಕೂ ಹೆಚ್ಚು ಕಲಾ ತಂಡಗಳು ರಥೋತ್ಸವಕ್ಕೆ ಮೆರಗು ತಂದವು. ಇದೇ ವೇಳೆ ಭಕ್ತರ ಉತ್ಸಾಹ ಮತ್ತು ಭಾವವೇಶ ಉತ್ತುಂಗಕ್ಕೇರಿ ಜೈ ಶಿವರಾತ್ರೀಶ್ವರ ಎಂಬ ಘೋಷಣೆ ಮುಗಿಲು ಮುಟ್ಟಿದವು. ರಾಜ್ಯದ ವಿವಿಧ ಮೂಲೆಗಳಿಂದ ಆಗಮಿಸಿದ್ದ ಲಕ್ಷಾಂತರ ಭಕ್ತರು ರಥೋತ್ಸವದಲ್ಲಿ ಭಾಗಿಯಾಗಿ ಜಾತ್ರೆ ಸೊಬಗನ್ನು ಕಣ್ತುಂಬಿಕೊಂಡರು. ರಥೋತ್ಸವ ವೀಕ್ಷಿಸಲು ಸಾಗರೋಪಾದಿಯಲ್ಲಿ ಭಕ್ತರು ಆಗಮಿಸಿದ್ದ ಹಿನ್ನೆಲೆಯಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.


ತಾಯಿ, ಮಗ, ಸೊಸೆ ಸಾವು

ರಾತ್ರಿ ಸುಮಾರು 7.30ರಲ್ಲಿ ಬೈಕ್‌ನಲ್ಲಿ ಊರಿಗೆ ಮರಳುತ್ತಿದ್ದರು. ಈ ವೇಳೆ ಗುಂಡ್ಲುಪೇಟೆ ತಾಲೂಕಿನ ಬೆಂಡಗಹಳ್ಳಿ ಲೋಕೇಶ್ ಮೈಸೂರಿನ ಆಸ್ಪತ್ರೆಯಲ್ಲಿ ತಮ್ಮ ತಂದೆಯ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಕಾರಿನಲ್ಲಿ ಗ್ರಾಮಕ್ಕೆ ತೆರಳುತ್ತಿದ್ದರು. ಈ ವೇಳೆ ಹಿರೀಕಾಟಿ ಪೆಟ್ರೋಲ್ ಬಂಕ್ ಬಳಿ ಕಾರು ಭಾಗ್ಯ, ಶಶಿಧರ್, ಸುಚಿತ್ರಾ ಹೋಗುತ್ತಿದ್ದ ಬೈಕ್ ಸೇರಿ ಮತ್ತೊಂದು ಬೈಕ್‌ಗೂ ಡಿಕ್ಕಿ ಹೊಡೆದಿದೆ. ಪರಿಣಾಮ ತಾಯಿ ಭಾಗ್ಯ, ಪುತ್ರ ಶಶಿಧರ್ ಹಾಗೂ ಸೊಸೆ ಸುಚಿತ್ರಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತೀವ್ರವಾಗಿ ಗಾಯಗೊಂಡ ಮತ್ತೊಂದು ಬೈಕ್ ಸವಾರ ರಾಜಣ್ಣನನ್ನು ಬೇಗೂರಿನ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕವಿತಾ, ಎಎಸ್‌ಪಿ ಶಶಿಧರ್, ಡಿವೈಎಸ್‌ಪಿ ಲಕ್ಷ್ಮಯ್ಯ, ಸರ್ಕಲ್ ಇನ್‌ಸ್ಪೆಕ್ಟರ್ ವನರಾಜು, ಬೇಗೂರು ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ಚಂದನ್‌ಗೌಡ ಹಾಗೂ ಸಿಬ್ಬಂದಿ, ಸ್ಥಳಕ್ಕೆ ಭೇಟಿ ನೀಡಿ, ಶವಗಳನ್ನು ಮರಣೋತ್ತರ ಪರೀಕ್ಷೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದರು. ಕಾರು ಚಾಲಕ ಲೋಕೇಶ್‌ನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುತ್ತೂರು ಜಾತ್ರೆ ಪ್ರಮುಖ ಆಕರ್ಷಣೆ ಕೃಷಿಮೇಳ

● ರೈತರಿಗೆ ಸುಸ್ಥಿರ ಕೃಷಿ ಬಗ್ಗೆ ಮಾಹಿತಿ ● ಜಾನುವಾರುಗಳ ರಕ್ಷಣೆ, ಇನ್ನಿತರ ವಿಷಯಗಳ ಸಂಬಂಧ ಅರಿವು







ಹೆಚ್.ಡಿ.ರಂಗಸ್ವಾಮಿ

ನಂಜನಗೂಡು, ಜ.28– ರೈತರಿಗೆ ಅತ್ಯಾಧುನಿಕ ಕೃಷಿ ಪದ್ಧತಿ, ಕೃಷಿ ಆವಿಷ್ಕಾರಗಳ ಕುರಿತು ಅರಿವು ಮೂಡಿಸುವಲ್ಲಿ ಸದಾ ಮುಂದಿರುವ ಸುತ್ತೂರು ಜಾತ್ರೆ ಈ ಬಾರಿ ಕೃಷಿ ಮೇಳ ದಲ್ಲಿ ಆಧುನಿಕ ತಂತ್ರಜ್ಞಾನ ಆಧಾರಿತ ಕೃಷಿ ಮೇಳ ಆಯೋಜಿಸುವ ಮೂಲಕ ಗಮನ ಸೆಳೆದಿದೆ. ಕೃಷಿ ಮೇಳದಲ್ಲಿ ಸುಸ್ಥಿರ ಕೃಷಿಗಾಗಿ ನಿಖರ ಕೃಷಿ ಬೇಸಾಯ ತಾಂತ್ರಿಕತೆ ಮತ್ತು ಜೈವಿಕ ಇದ್ದಲು, ಬಯೋಚಾರ್ ಪ್ರಾತ್ಯಕ್ಷಿಕೆ ಪ್ರಮುಖ ಆಕರ್ಷಣೆಯಾಗಿದೆ.

ಸುಸ್ಥಿರ ಕೃಷಿಗಾಗಿ ನಿಖರ ಕೃಷಿ ಬೇಸಾಯ ತಾಂತ್ರಿಕತೆ: ಕೃಷಿ ಕಾರ್ಮಿಕರ ಕೊರತೆ ನಿವಾರಿಸುವ ಸಲುವಾಗಿ ಹಾಗೂ ಸಮಯ ಮತ್ತು ಹಣ ಎರಡನ್ನು ಉಳಿಸಲು, ರೈತರು ತರ್ಕಬದ್ಧವಾಗಿ ಕೃಷಿ ಕಾಯಕವನ್ನು ಇಂಟರ್ನೆಟ್ ಬಳಸಿಕೊಂಡು ಹೇಗೆ ನಿರ್ವಹಣೆ ಮಾಡಬಹುದು ಎಂಬ ಬಗ್ಗೆ ಕೃಷಿ ಮೇಳದಲ್ಲಿ ನೈಜ ಪ್ರಾತ್ಯಕ್ಷಿಕೆ ಏರ್ಪಡಿಸಿ ಈ ಭಾಗದ ರೈತರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಇಂಟರ್ನೆಟ್ ಬಳಸಿಕೊಂಡು ಮೊಬೈಲ್ ಮೂಲಕ ಕುಳಿತ ಜಾಗದಿಂದ ಬೆಳೆಗಳಿಗೆ ವಾತಾವರಣಕ್ಕೆ ತಕ್ಕಂತೆ ನೀರು ಕೊಡುವುದು, ಬೆಳೆಗಳ ಮೇಲ್ವಿಚಾರಣೆ ಮಾಡುವುದು, ರೋಗಗಳ ಬಗ್ಗೆ ಸಮೀಕ್ಷೆ ಮಾಡುವುದು ಮತ್ತು ತಾಕುಗಳನ್ನು ಮ್ಯಾಪಿಂಗ್ ಮಾಡುವಂತಹ ತಂತ್ರಜ್ಞಾನ ರೈತರಿಗೆ ವರದಾನವಾಗಿದೆ. ಈ ತಂತ್ರಜ್ಞಾನವನ್ನು ಹಲವಾರು ರೈತರಿಗೆ ಪರಿಚಯಿಸುವ ಕಾರ್ಯವನ್ನು ಜಾತ್ರಾ ಮಹೋತ್ಸವದಲ್ಲಿ ಮಾಡಲಾಗುತ್ತಿದೆ.

ಜೈವಿಕ ಇದ್ದಲು ಪ್ರಾತ್ಯಕ್ಷಿಕೆ: ಭೂಮಿಯಲ್ಲಿ ಇಂಗಾಲದ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಇಳುವರಿ ಕುಂಠಿತವಾಗಿ ಕೃಷಿ ನಷ್ಟ





ಎಂಬ ಮನಸ್ಥಿತಿಗೆ ಬಂದಿರುವ ರೈತರಿಗೆ ಮಣ್ಣಿನ ಫಲವತ್ತತೆ ಹೆಚ್ಚಿಸುವ ಸಲುವಾಗಿ ಬಯೋಚಾರ್ ಎಂಬ ಇದ್ದಿಲು ತಯಾರಿಸುವ ಮೂಲಕ ನೈಸರ್ಗಿಕವಾಗಿ ಮಣ್ಣಿನ ಫಲವತ್ತತೆಯನ್ನು ಹೇಗೆ ಹೆಚ್ಚಿಸಬಹುದು ಎಂಬ ಬಗ್ಗೆ ಅರಿವು ಮೂಡಿಸುವ ಕೆಲಸ ಈ ಬಯೋಚಾರ್ ಕಿರು ಘಟಕದ ಮೂಲಕ ನಡೆದಿದೆ.

ಬಯೋಚಾರ್ ಕಾರ್ಯ ನಿರ್ವಹಣೆ: ಏಳೂವರೆ ಸಾವಿರ ಮೌಲ್ಯದ ಈ ಬಯೋಚಾರ್ ಜೈವಿಕ ಇದ್ದಿಲನ್ನು ತಯಾರಿಸಬಹುದಾದ ಡ್ರಮ್‌ನ ತಳದಲ್ಲಿ ರಂಧ್ರಗಳನ್ನು ಮಾಡಲಾಗಿದೆ. ಇದಕ್ಕೆ ರೈತರ ಜಮೀನುಗಳಲ್ಲಿ ದೊರೆಯುವ, ತೆಂಗಿನ ಗರಿ, ಮಟ್ಟೆ ಮತ್ತು ಕಟ್ಟಿಗೆ ಸೇರಿದಂತೆ ಎಲ್ಲಾ ಕಸದ ತ್ಯಾಜ್ಯ ವಸ್ತುವನ್ನು ತುಂಬಿದ ಬಳಿಕ ಅದಕ್ಕೆ ಮುಚ್ಚಳ ಹಾಕಿ ನಿಯಮಿತ ಉಷ್ಣಾಂಶದಲ್ಲಿ ಎರಡೂವರೆ ಗಂಟೆವರೆಗೆ ಬೇಯಿಸಿದರೇ, ಬಯೋಚಾರ್ ಜೈವಿಕ ಇದ್ದಿಲು ತಯಾರಾಗಿರುತ್ತದೆ. ಇದನ್ನು ಒಂದು ಟನ್ ಎರೆಗೊಬ್ಬರ ಅಥವಾ ದನದ ಗೊಬ್ಬರದೊಂದಿಗೆ 30 ಕೆಜಿ ಜೈವಿಕ ಇದ್ದಲನ್ನು ಸೇರಿಸಿ ಮಣ್ಣಿಗೆ ಸೇರಿಸುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗಲಿದೆ. ಈ ಜೈವಿಕ ಇಂಧನ ಎಲ್ಲಾ ಬಗೆಯ ಬೆಳೆಗಳಿಗೆ ಸಿಂಪಡಿಸಬಹುದಾಗಿದೆ. ಇದರಿಂದ ಇಳುವರಿ ಹೆಚ್ಚಾಗುತ್ತದೆ. ಈಗಾಗಲೇ ಕೋಲಾರ, ಮುಳಬಾಗಿಲು, ನಂಜನಗೂಡು, ಹೆಚ್.ಡಿ.ಕೋಟೆ ತಾಲೂಕಿನ ರೈತರು ಈ ಬಯೋಚಾರ್ ಜೈವಿಕ ಇದ್ದಲು ಬಳಸಿದ್ದಾರೆ. ಅವರಿಗೆ ಉತ್ತಮ ಫಲಿತಾಂಶವೂ ದೊರೆತಿದೆ ಎಂದು ವಿಜ್ಞಾನಿ ಬಿ.ಎನ್.ಜ್ಞಾನೇಶ್ ತಿಳಿಸಿದ್ದಾರೆ.

ಕಬ್ಬು ಕಟಾವು ಯಂತ್ರ ಪ್ರದರ್ಶನ: ಕಬ್ಬಿನಲ್ಲಿ ಯಾಂತ್ರಿಕತೆಯನ್ನು ಈ ಭಾಗದ ರೈತರಿಗೆ ಪರಿಚಯಿಸುವ ಉದ್ದೇಶದಿಂದ ಕಬ್ಬು ಕಟಾವು ಯಂತ್ರವನ್ನು ಜಾತ್ರಾ ಮಹೋತ್ಸವದ ಕೃಷಿ ಮೇಳದಲ್ಲಿ ಆಯೋಜಿಸಲಾಗಿದೆ. ಕಬ್ಬು ಕಟಾವು ಯಂತ್ರ ಹೇಗೆ ಕಬ್ಬು ಕಟಾವು ಮಾಡಿ ರೈತರಿಗೆ ಸಮಯ ಮತ್ತು ಕೃಷಿ ಕಾರ್ಮಿಕರ ಸಮಸ್ಯೆ ನಿವಾರಿಸಬಹುದು ಎಂಬುದರ ಬಗ್ಗೆ ಅರಿವು ಮೂಡಿಸಲಾಗಿದೆ.

ಆರೋಗ್ಯದ ಹಿತಕ್ಕಾಗಿ ಸೊಪ್ಪು ಬೆಳೆ: ಮನುಷ್ಯನ ಒತ್ತಡದ ಬದುಕಿನಿಂದಾಗಿ ಹಲವು ರೋಗಗಳಿಗೆ ತುತ್ತಾಗುತ್ತಿದ್ದಾರೆ. ಆದ್ದರಿಂದ ಆರೋಗ್ಯದ ಬಗ್ಗೆ ಅರಿವು ಮೂಡಿಸಿ ಆಹಾರ ಕ್ರಮಗಳ ಬಗ್ಗೆ ತಿಳಿಸಿಕೊಡುವ ಸಲುವಾಗಿ ಈ ಬಾರಿಯ ಜಾತ್ರಾ ಮಹೋತ್ಸವದ ಕೃಷಿ ಮೇಳದಲ್ಲಿ 12 ಬಗೆಯ ಸೊಪ್ಪು ಬೆಳೆಗಳು, 250ಕ್ಕೂ ಹೆಚ್ಚು ತರಕಾರಿ ಬೆಳೆಗಳು, ವಿದೇಶಿ ಸಲಾಡ್ ಬೆಳೆಗಳು, ಅದನ್ನು ಉಪಯೋಗಿಸುವುದರಿಂದ ಯಾವ ರೋಗಗಳಿಗೆ ಔಷಧವಾಗಲಿದೆ. ಯಾವ ರೋಗಗಳನ್ನು ತಡೆಗಟ್ಟಬಹುದು ಎಂಬುದರ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಿ ಜನವರಿಗೆ ಅರಿವು ಮೂಡಿಸಲಾಗುತ್ತಿದೆ.

ದೇಸಿ ಹಸುಗಳ ಸಂರಕ್ಷಣೆಗೆ ಕ್ರಮ: ಕೃಷಿ ಮೇಳದಲ್ಲಿ ದೇಸಿ ತಳಿಗಳ ಜಾನುವಾರುಗಳ ಸಂರಕ್ಷಣೆಗೆ ಕ್ರಮವಹಿಸಲಾಗಿದೆ. ನಮ್ಮ ದೇಶದಲ್ಲಿ 40 ಬಗೆಯ ದೇಸಿ ತಳಿ ಜಾನುವಾರುಗಳಿದ್ದು, ಅವುಗಳಲ್ಲಿ 10 ಬಗೆಯ ಹಾಲು ಕೊಡುವ ಹಸುಗಳು, 20 ಬಗೆಯ ಕೆಲಸಗಾರ ತಳಿಗಳು, 10 ಬಗೆಯ ಉಭಯ ತಳಿಗಳ ಜಾನುವಾರುಗಳನ್ನು ಪರಿಚಯಿಸಲಾಗಿದೆ. ದೇಸಿ ಕಾಂಕ್ರೆಜ್, ಗಿರ್, ಸಾಹಿವಾಲ್, ಪುಂಗನೂರು, ಹಳ್ಳಿಕಾರ್, ಓಂಗೋಲ್, ತಳಿಗಳು, ತಮಿಳುನಾಡಿನ ಜಲ್ಲಿಕಟ್ಟಿಗೆ ಬಳಸುವ ಕಾಂಗ್ಯೆಯಟ್ ತಳಿ ಜಾತ್ರೆಯ ಪ್ರಮುಖ ಆಕರ್ಷಣ ಕೇಂದ್ರವಾಗಿ ರೈತರನ್ನು ಬೆರಗುಗೊಳಿಸುತ್ತಿವೆ. ಅಲ್ಲದೆ ಬಂಡೂರು ಕುರಿ, ಸಿರೋಹಿ ತಳಿಯ ಮೇಕೆಗಳನ್ನು ಪ್ರದರ್ಶನ ಮಾಡಲಾಗಿರುವುದರಿಂದ ಕೃಷಿ ಮೇಳ ಜಾತ್ರೆಯ ಪ್ರಮುಖ ಆಕರ್ಷಣಗಳು ಕೇಂದ್ರವಾಗಿ ಮಾರ್ಪಟ್ಟಿದೆ.

ಒಂದು ಎಕರೆ ಕೃಷಿ ಬ್ರಹ್ಮಾಂಡ

ಕಡಿಮೆ ಭೂಮಿ ಹೊಂದಿರುವ ಕುಟುಂಬ ತಮ್ಮ ಜೀವನಕ್ಕೆ ಬೇಕಾಗುವ ವಸ್ತುಗಳನ್ನು ಸಾವಯವ ಕೃಷಿ ವಿಧಾನ ಅನುಸರಿಸಿ ಹೇಗೆ ಬೆಳೆದು ಸುಖ ಜೀವನ ನಡೆಸುವುದು ಎಂಬುದರ ಬಗ್ಗೆ ಒಂದು ಎಕರೆ ಕೃಷಿ ಬ್ರಹ್ಮಾಂಡದಲ್ಲಿ 99 ಬೆಳೆಗಳನ್ನು ಪರಿಚಯಿಸಿದ್ದಾರೆ. ಮುಸುಕಿನಜೋಳ, ಬಿಳಿಜೋಳ, ಗೋಧಿಯಂತಹ ಏಕದಳ ಬೆಳೆಗಳು, ಸಿರಿಧಾನ್ಯಗಳಾದ ರಾಗಿ, ಸಜ್ಜೆ, ನವಣೆ, ಸಾಮೆ, ಬರಗು, ಊದಲು ಕೂರಲೆ, ದ್ವಿದಳ ಬೆಳೆಗಳಾದ ಕಡಲೆ, ಹೆಸರು, ಉದ್ದು, ಅಲಸಂದೆ, ಬಟಾಣಿ, ಉರಳಿ, ಎಣ್ಣೆಕಾಳು ಬೆಳೆಗಳು, ತರಕಾರಿ ಮತ್ತು ಸೊಪ್ಪಿನ ಬೆಳೆಗಳು, ಹೂವಿನ ಗಿಡಗಳು, ಹಣ್ಣಿನ ಬೆಳೆಗಳು, ತೆಂಗು ತಾಳೆ ನೇರಳೆ ಅಂತಹ ತೋಟಗಾರಿಕೆ ಬೆಳೆಗಳು, ಔಷಧಿ ಹಾಗೂ ಸುಗಂಧ ಸಸ್ಯಗಳು, ಜಾನುವಾರುಗಳಿಗಾಗಿ ಮೇವಿನ ಬೆಳೆಗಳು, ರೇಷ್ಮೆ ಕೃಷಿ, ಬಹು ಉಪಯೋಗಿ ಮರಗಳಾದ ಬೇವು, ಅಗಸೆ, ಬಿದಿರು, ಸಿಲ್ವರ್ ಮರ, ಶ್ರೀಗಂಧ ಮರಗಳನ್ನು ಬೆಳೆಸಲಾಗಿದೆ, ಅಲ್ಲದೆ ಬೇಲಿ ಬೆಳೆಗಳಾದ ಕತ್ತಾಳೆ ಗ್ಲಿರಿಸಿಡಿಯಾ, ಶುಭ ಬುಲ್, ಕೃಷಿಗೆ ಪೂರಕವಾಗಿ ಕಸುಬುಗಳಾದ ಎರೆ ಗೊಬ್ಬರ ಉತ್ಪಾದನೆ ಘಟಕ, ಅಜೂಲ್ಲಾ ಉತ್ಪಾದನಾ ಘಟಕ, ಹೈನುಗಾರಿಕೆ, ಕುರಿ ಸಾಕಾಣಿಕೆ, ಕೃಷಿ ಹೊಂಡ, ಮೀನು ಕೃಷಿ ಜೇನು ಕೃಷಿ, ಪೌಷ್ಟಿಕ ಕೈತೋಟ, ಜೀವಾಮೃತ ವೇಸ್ಟ್ ಡಿಕಾಂಪೋಸ್ಟ್, ಕೋಳಿ ಸಾಕಾಣಿಕೆಯನ್ನು ಪರಿಚಯಿಸಲಾಗಿದೆ.

ಮೈಸೂರು ಮಿತ್ರ

ಬುಧವಾರ 29 ಜನವರಿ 2025

ಮುಡಾ ಹಗರಣದಲ್ಲಿ ನನ್ನ ಪಾತ್ರ ಇಲ್ಲ; ಸಿಎಂ ಪತ್ನಿ ಪಾರ್ವತಿ ಕೂಡ ಭಾಗಿಯಾಗಿಲ್ಲ

ಸಚಿವ ಬೈರತಿ ಸುರೇಶ್



ಬೆಂಗಳೂರು: ಮುಡಾ ಹಗರಣದಲ್ಲಿ ತಾನು ಭಾಗಿಯಾಗಿಲ್ಲ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ ಪಾತ್ರವೂ ಇಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮಂಗಳವಾರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಗ್ಗೆ ನಾನು ತುಂಬಾ ಸ್ಪಷ್ಟವಾಗಿದ್ದೇನೆ. ಪ್ರಕರಣದಲ್ಲಿ ನಮ್ಮ ಪಾತ್ರವಿಲ್ಲ ಎಂಬುದನ್ನು ಪರಿಗಣಿಸಿದ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ಪ್ರಕರಣವನ್ನು ಫೆಬ್ರವರಿ 10 ಕ್ಕೆ ಮುಂದೂಡಲಾಗಿದ್ದು, ನಂತರ ಏನಾಗುತ್ತದೆ ಎಂಬುದನ್ನು ಕಾದು ನೋಡೋಣ ಎಂದರು.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಪ್ರಕರಣದಲ್ಲಿ ವಿಚಾರಣೆಗಾಗಿ ತನಿಖಾ ಸಂಸ್ಥೆಯ ಮುಂದೆ ಹಾಜರಾಗುವಂತೆ ಬೈರತಿ ಸುರೇಶ್ ಮತ್ತು ಸಿಎಂ ಪತ್ನಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೀಡಿದ್ದ ನೋಟಿಸ್‌ಗೆ ಹೈಕೋರ್ಟ್ ಸೋಮವಾರ ತಡೆ ನೀಡಿದೆ.

ನನಗೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ನ್ಯಾಯಾಂಗ ಮತ್ತು ಸಂವಿಧಾನದ ಮೇಲೆ ಸಂಪೂರ್ಣ ನಂಬಿಕೆ ಇದೆ. ನ್ಯಾಯಾಲಯದ ಆದೇಶವನ್ನು ಪಾಲಿಸುತ್ತೇನೆ. ಇ.ಡಿ ಅಧಿಕಾರಿಗಳು ನಮಗೆ ಏಕೆ ನೋಟಿಸ್ ನೀಡಿದ್ದಾರೆ ಎಂಬುದನ್ನು ವಿವರಿಸಬೇಕು ಎಂದು ಹೇಳಿದರು.

ನೋಟಿಸ್ ಬಂದಾಗ ನನಗೆ ಆಶ್ಚರ್ಯವಾಯಿತು. ಹಗರಣ ನಡೆದಾಗ ನಾನು ನಗರಾಭಿವೃದ್ಧಿ ಇಲಾಖೆಯ ಉಸ್ತುವಾರಿ ಸಚಿವನಾಗಿರಲಿಲ್ಲ. ನಾನು ಯಾವುದೇ ಸೈಟ್‌ಗಳನ್ನು ಮಂಜೂರು ಮಾಡಿಲ್ಲ ಅಥವಾ ಸ್ವಾಧೀನ ಪಡಿಸಿಕೊಂಡಿಲ್ಲ. ಪ್ರಶ್ನೆಗಳು ಎದ್ದ ನಂತರ, ಸಿಎಂ ಪತ್ನಿಗೆ ಮಂಜೂರು ಮಾಡಿದ್ದ ನಿವೇಶನಗಳನ್ನು ಹಿಂತಿರುಗಿಸಲಾಯಿತು. ಹೈಕೋರ್ಟ್ ನ್ಯಾಯಾಧೀಶರು ಈ ಸಂಗತಿಗಳನ್ನು ಮನಗಂಡು ಮತ್ತು ತಡೆಯಾಜ್ಞೆ ನೀಡಿದರು. ಇ.ಡಿಯಿಂದ ನನಗೆ ಬಂದ ಮೊದಲ ನೋಟಿಸ್ ಇದಾಗಿದೆ ಎಂದು ಬೈರತಿ ಸುರೇಶ್ ತಿಳಿಸಿದರು.

ಸಚಿವ ಬೈರತಿ ಸುರೇಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರಾಗಿದ್ದಾರೆ. ಮುಡಾ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಹೆಲಿಕಾಪ್ಟರ್‌ನಲ್ಲಿ ಬೆಂಗಳೂರಿಗೆ ತೆಗೆದುಕೊಂಡು ಹೋಗಿ ನಾಶಪಡಿಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಬೇನಾಮಿ ಹೆಸರಲ್ಲಿ ಶಾಸಕ ಜಿ.ಟಿ.ದೇವೇಗೌಡರಿಗೆ 19 ನಿವೇಶನ!

ಲೋಕಾಯುಕ್ತ, ಇಡಿಗೆ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ದೂರು



ಮೈಸೂರು, ಜ.28(ಬಿಎಲ್‌ಯು)– ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಶೇಕಡ 50:50 ಅನುಪಾತದಲ್ಲಿ ಮುಡಾದಿಂದ ಬೇನಾಮಿ ಹೆಸರಿನಲ್ಲಿ 19 ನಿವೇಶನ ಪಡೆದಿದ್ದಾರೆ ಎಂದು ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಲೋಕಾಯುಕ್ತರು ಹಾಗೂ ಇಡಿಗೆ ದೂರು ನೀಡಿದ್ದಾರೆ.

ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಯಲ್ಲಿ ಇಂದು ಸ್ನೇಹಮಯಿ ಕೃಷ್ಣ, ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರಿಗೆ ದೂರು ನೀಡಿದರು. ಇದೇ ವೇಳೆ ಜಾರಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಮುರುಳಿಕಣ್ಣನ್ ಅವರಿಗೆ ರಿಜಿಸ್ಟರ್ ಪೋಸ್ಟ್ ಹಾಗೂ ಇ-ಮೇಲ್ ಮೂಲಕ ದೂರು ಸಲ್ಲಿಸಿದ್ದಾರೆ.

ಜಿ.ಟಿ.ದೇವೇಗೌಡರ ಸಹೋದರಿಯ ಮಗ ಮಹೇಂದ್ರ ಮೈಸೂರಿನ ದೇವನೂರು ಗ್ರಾಮದ ರೈತರಿಂದ ಸರ್ವೇ ನಂಬರ್ 81/2 ರಲ್ಲಿ 2.22 ಎಕರೆ ಜಮೀನು ಖರೀದಿ ಮಾಡಿದ್ದರು. ಆದರೆ ಈ ಜಮೀನನ್ನು ಮುಡಾ ಸ್ವಾಧೀನಪಡಿಸಿಕೊಂಡರೂ ಪರಿಹಾರ ನೀಡಿಲ್ಲವೆಂದು, ನಂತರ ಶೇಕಡ 50:50 ಅನುಪಾತದಲ್ಲಿ 19 ನಿವೇಶನ ಪಡೆದಿದ್ದಾರೆ ಎಂದು ಆರೋಪಿಸಿದರು.

ದೇವನೂರು ಗ್ರಾಮದ ಈ ಜಮೀನಿನಲ್ಲಿ ಕಳೆದ 20 ವರ್ಷಗಳಿಂದ ಅನುಭವದಲ್ಲಿರುವ ಮನೆ ಇದ್ದರೂ ಕೃಷಿ ಭೂಮಿಯೆಂದು ಉಲ್ಲೇಖಿಸಿ ಪರಿಹಾರವಾಗಿ ನಿವೇಶನ ಪಡೆದಿದ್ದಾರೆ ಎಂದು ದೂರಿದ್ದಾರೆ.

ಮುಡಾದಲ್ಲಿ ಮಹೇಂದ್ರ ಶೇಕಡ 50:50 ಅನುಪಾತದಲ್ಲಿ ನಿವೇಶನ ಪಡೆಯುವಲ್ಲಿ ಜಿ.ಟಿ.ದೇವೇಗೌಡರ ಪ್ರಭಾವ ಬೀರಿದ್ದಾರೆ. ತರುವಾಯ ಜಿ.ಟಿ.ದೇವೇಗೌಡ ಹಾಗೂ ಅವರ ಪುತ್ರ ಶಾಸಕ ಜಿ.ಡಿ.ಹರೀಶ್‌ಗೌಡ, ಮಹೇಂದ್ರ ಮನೆಗೆ ಹೋಗಿ ಮಾತುಕತೆ ನಡೆಸಿ ಚೆಕ್ ನೀಡಿದ್ದಾರೆ ಎಂದು ಆಪಾದಿಸಿರುವ ಸ್ನೇಹಮಯಿ ಕೃಷ್ಣ ಈ ಸಂಬಂಧ ಕೆಲವು ಫೋಟೋಗಳನ್ನು ಬಿಡುಗಡೆ ಮಾಡಿದ್ದಾರೆ.

ಈ ಹಿನ್ನೆಲೆ ಕ್ರಯಪತ್ರದಲ್ಲಿ ಉಲ್ಲೇಖಿಸಿರುವ ಚೆಕ್‌ಗಳು ಯಾರದು, ಸದರಿ ಹಣ ಯಾರ ಖಾತೆಯಿಂದ ಜಮೆಯಾಗಿದೆ ಎಂಬ ಬಗ್ಗೆ ತನಿಖೆ ನಡೆಸಿ ಸತ್ಯಾಂಶ ತಿಳಿಸಬೇಕೆಂದು ಸ್ನೇಹಮಯಿ ಕೃಷ್ಣ ಕೋರಿದ್ದಾರೆ.

ಸೂಕ್ತ ತನಿಖೆಯಾಗಲಿ, ಎಲ್ಲವೂ ಹೊರಬರಲಿ

ಜಿ.ಟಿ.ದೇವೇಗೌಡರ ಪ್ರತಿಕ್ರಿಯೆ



ಮೈಸೂರು, ಜ.28(ಬಿಎಲ್‌ಯು)– ನನ್ನ ಸಹೋದರಿ ಮಗ ಮಹೇಂದ್ರ ಕಾನೂನುಬಾಹಿರವಾಗಿ ನಿವೇಶನ ಪಡೆದಿದ್ದರೆ ಸೂಕ್ತ ತನಿಖೆ ಮಾಡಿ ಸತ್ಯಾಂಶ ಬಯಲಿಗೆಳೆಯಲಿ ಎಂದು ಶಾಸಕ ಜಿ.ಟಿ.ದೇವೇಗೌಡರು ಸವಾಲು ಹಾಕಿದ್ದಾರೆ.

ಸ್ನೇಹಮಯಿ ಕೃಷ್ಣ ಆರೋಪ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಜಿ.ಟಿ.ದೇವೇಗೌಡರು, ದೇವನೂರು ಬಡಾವಣೆಯ ಆ ಭೂಮಿಯನ್ನು ಮುಡಾ 4, ಇಲ್ಲವೇ 6 ಮಾಡಿತ್ತೇ? ಈ ಭೂಮಿ ಸ್ವಾಧೀನಪಡಿಸಿಕೊಂಡಿದ್ದಕ್ಕೆ ಸಂಬಂಧಿಸಿದಂತೆ ಈ ಭೂಮಿಗೆ ಪರಿಹಾರ ಪಡೆದುಕೊಳ್ಳಲಾಗಿತ್ತೇ ಎಂಬುದು ತನಿಖೆಯಿಂದ ಬಯಲಾಗಲಿ. ಒಂದು ವೇಳೆ ಮುಡಾ ಸ್ವಾಧೀನಪಡಿಸಿಕೊಂಡ ಈ ಭೂಮಿಗೆ ಪರಿಹಾರವನ್ನು ಪಡೆದುಕೊಂಡು, ನಂತರವೂ ಶೇ. 50:50 ಅನುಪಾತದಡಿ ನಿವೇಶನವನ್ನು ಪರಿಹಾರವಾಗಿ ಪಡೆದುಕೊಳ್ಳುವುದು ಅಕ್ರಮವಾಗುತ್ತದೆ. ಈ ವಿಷಯವನ್ನು ತನಿಖೆಯ ಮೂಲಕ ಮೊದಲು ಸ್ಪಷ್ಟಪಡಿಸಲಿ ಎಂದು ಅವರು ಆಗ್ರಹಿಸಿದ್ದಾರೆ.

ಹಿಂದೆ-ಮುಂದೆ ನೋಡದೇ ಬೇನಾಮಿ, ಅಕ್ರಮ ಎಂದೆಲ್ಲಾ ಹೇಳುವುದು ಸರಿಯಲ್ಲ. ರೈತರಿಂದಲೇ ಖರೀದಿಸಿದ ಭೂಮಿ ಬೇನಾಮಿ ಹೇಗಾಯಿತು? ಎಂದು ಪ್ರಶ್ನಿಸಿದ ಜಿಟಿಡಿ, ಸೂಕ್ತ ತನಿಖೆ ಮಾಡಿ ಸತ್ಯಾಂಶ ಬಯಲಿಗೆಳೆಯುವ ಕೆಲಸವಾಗಬೇಕು. ಒಂದು ವೇಳೆ ನನ್ನ ಸಹೋದರಿ ಮಗ ಮಹೇಂದ್ರ ಕಾನೂನುಬದ್ಧವಾಗಿ ಶೇಕಡ 50:50 ಅನುಪಾತದಲ್ಲಿ ಮುಡಾದಿಂದ ನಿವೇಶನ ಪಡೆದಿದ್ದರೆ ಅದರಲ್ಲಿ ಯಾವುದೇ ತಪ್ಪಿಲ್ಲ ಎಂದು ಸ್ಪಷ್ಟಪಡಿಸಿದರು. ಒಟ್ಟಾರೆ ಕಾನೂನುಬದ್ಧವಾಗಿ ಎಲ್ಲಾ ಪ್ರಕ್ರಿಯೆ ನಡೆದಿದೆಯೇ ಎಂದು ತನಿಖಾಧಿಕಾರಿಗಳು ತನಿಖೆ ಮಾಡಿ ಶೀಘ್ರವೇ ಸತ್ಯಾಂಶ ತಿಳಿಸಲಿ ಎಂಬುದು ನನ್ನ ಮನವಿ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು.

4.66 ಲಕ್ಷಕ್ಕೆ 7.20 ಲಕ್ಷ ಬಡ್ಡಿ: ಹೃದಯಾಘಾತದಿಂದ ವ್ಯಕ್ತಿ ಸಾವು

ತುಮಕೂರು: ಮೈಕ್ರೋ ಫೈನಾನ್ಸ್‌ನಿಂದ ಸಾಲ ಪಡೆದಕ್ಕಿಂತ ಹೆಚ್ಚು ಬಡ್ಡಿಯನ್ನೇ ಕಟ್ಟಿ ಹೃದಯಾಘಾತದಿಂದ ವ್ಯಕ್ತಿಯೊಬ್ಬರು ಸಾವಿಗೀಡಾದ ಘಟನೆ ತುಮಕೂರಿನಲ್ಲಿ ನಡೆದಿದೆ. ತುಮಕೂರು ನಗರದ ಲೇಬರ್ ಕಾಲೋನಿಯ ಸೈಯದ್ ಸಮಿವುಲ್ಲಾ ಸಾವಿಗಿಡಾದ ವ್ಯಕ್ತಿ. ಇವರು ಫೈಸ್ ಸ್ಟಾರ್ ಫೈನಾನ್ಸ್‌ನಿಂದ 2019ರಲ್ಲಿ 4.66 ಲಕ್ಷ ಮನೆ ಸಾಲ ಪಡೆದಿದ್ದರು. 2024 ಮೇವರೆಗೆ ಬರೋಬ್ಬರಿ 7.20 ಲಕ್ಷ ಬಡ್ಡಿ ಕಟ್ಟಿದ್ದರು. ಆದರೆ ಅಸಲು ಹಾಗೆಯೇ ಉಳಿದಿತ್ತು. ಮತ್ತೆ ಅಸಲು ಕಟ್ಟುವಂತೆ ಫೈನಾನ್ಸ್‌ನವರು ಕಿರುಕುಳ ಕೊಡುತ್ತಿದ್ದರು. ಈ ಕಿರುಕುಳ ತಾಳಲಾರದೆ ಹೃದಯಾಘಾತದಿಂದ ಸಮೀವುಲ್ಲಾ ಮೇ ತಿಂಗಳಲ್ಲಿ ಸಾವಿಗೀಡಾಗಿದ್ದಾರೆ. ಇವರಿಗೆ ಸುಮಾರು 24.55 % ಬಡ್ಡಿ ಹಾಕಲಾಗಿತ್ತು.



ಈಗ ಫೈನಾನ್ಸ್‌ನವರು ಸಮೀವುಲ್ಲಾ ಮನೆಗೆ ಬಂದು ಅವರ ಪತ್ನಿ ಬಳಿ ಸಾಲ ಮರುಪಾವತಿ ಮಾಡುವಂತೆ ಕಿರುಕುಳ ನೀಡುತ್ತಿದ್ದಾರೆ. ಪತಿಯಂತೆ ನಾನೂ ಮಕ್ಕಳೊಂದಿಗೆ ಸಾಯಬೇಕಾಗುತ್ತದೆ ಎಂದು ಪತ್ನಿ ತಬಸಮ್ ಬಾನು ಕಣ್ಣೀರು ಹಾಕುತ್ತಿದ್ದಾರೆ.

ಮಹಾ ಕುಂಭಮೇಳ: ಬೆಂಗಳೂರು– ಪ್ರಯಾಗ್‌ರಾಜ್

ವಿಮಾನ ಟಿಕೆಟ್ ದರ ಭಾರಿ ದುಬಾರಿ

- ತ್ರಿವೇಣಿ ಸಂಗಮದಲ್ಲಿ ಮೌನಿ ಅಮಾವಾಸ್ಯೆ ಸ್ನಾನ
- 10 ರಿಂದ 15 ಕೋಟಿಗೂ ಹೆಚ್ಚು ಜನ ಸೇರುವ ನಿರೀಕ್ಷೆ



ವಿಮಾನ ಟಿಕೆಟ್ ದರ: ಬೆಂಗಳೂರು–ಪ್ರಯಾಗ್ ರಾಜ್

- ಸಾಮಾನ್ಯ ದಿನಗಳ ದರ 4 ರಿಂದ 8 ಸಾವಿರ
- ಇಂದಿನ ದರ– 30 ರಿಂದ 45 ಸಾವಿರ
- ಫೆಬ್ರವರಿ 26ರವರೆಗೆ ಕನಿಷ್ಠ ದರ 24 ಸಾವಿರ

ದೆಹಲಿಯಿಂದ ಪ್ರಯಾಗ್‌ರಾಜ್‌ಗೆ:

- ಸಾಮಾನ್ಯ ದಿನಗಳ ದರ – 3 ರಿಂದ 6 ಸಾವಿರ
- ಇಂದಿನ ದರ–20 ರಿಂದ 30 ಸಾವಿರ
- ಫೆಬ್ರವರಿ 26ರವರೆಗೆ 18 ರಿಂದ 24 ಸಾವಿರದವರೆಗೆ

ಬೆಂಗಳೂರು: 144 ವರ್ಷಗಳಿಗೊಮ್ಮೆ ನಡೆಯುವ ಮಹಾ ಕುಂಭಮೇಳ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಅದ್ಧೂರಿಯಾಗಿ ನಡೆಯುತ್ತಿದೆ. ಕುಂಭಮೇಳವನ್ನು ಕಣ್ತುಂಬಿಕೊಳ್ಳಲು ಕೋಟ್ಯಂತರ ಸಂಖ್ಯೆಯಲ್ಲಿ ಭಕ್ತರು ಪ್ರಯಾಗ್‌ರಾಜ್‌ಗೆ ಭೇಟಿ ಕೊಡುತ್ತಿದ್ದಾರೆ.

ಬುಧವಾರ (ನಾಳೆ) ವಿಶೇಷವಾದ ಮೌನಿ ಅಮಾವಾಸ್ಯೆ ದಿನವಾಗಿರುವುದರಿಂದ ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿದರೆ ಎಲ್ಲವೂ ಒಳ್ಳೆಯದಾಗುತ್ತೆ, ಆರೋಗ್ಯ ವೃದ್ಧಿಸುತ್ತೆ, ಕಷ್ಟಕಾರ್ಪಣ್ಯಗಳು ನಶಿಸುತ್ತದೆ ಅನ್ನೋ ನಂಬಿಕೆ ಇದೆ. ಹೀಗಾಗಿ ಬುಧವಾರ ಕುಂಭಮೇಳದಲ್ಲಿ 10 ರಿಂದ 15 ಕೋಟಿ ಜನ ಸೇರುವ ನಿರೀಕ್ಷೆ ಇದೆ.

ಬುಧವಾರ ಪ್ರಯಾಗ್‌ರಾಜ್‌ಗೆ ಹೋಗಲು ವಿಮಾನದ ಟಿಕೆಟ್ ಬುಕ್ ಮಾಡಲು ಹೊರಟವರಿಗೆ ಡಬಲ್ ಶಾಕ್ ಆಗಿದೆ. ಬೆಂಗಳೂರಿನಿಂದ ಪ್ರಯಾಗ್‌ರಾಜ್ ಗಿರುವ ಫ್ಲೈಟ್ ಟಿಕೆಟ್ ದರ 30 ರಿಂದ 39,000 ವರೆಗೆ ಏರಿಕೆಯಾಗಿದ್ದು, ಬೆಂಗಳೂರಿನಿಂದ ಪ್ರಯಾಗ್‌ರಾಜ್‌ಗೆ ಹೋಗುವ ಅಷ್ಟು ವಿಮಾನಗಳ ಟಿಕೆಟ್ ಸೋಲ್ಡ್ ಔಟ್ ಆಗಿದೆ. ಇದರಿಂದ ಟಿಕೆಟ್ ದರ ಹೆಚ್ಚಾಗಿದ್ದರೂ ಪರವಾಗಿಲ್ಲ, ಇಂತಹ ಮಹಾಪುಣ್ಯದ ದಿನ ಹೇಗಾದರೂ ಮಾಡಿ ಕುಂಭಮೇಳದ ಮಹಾ ಸ್ನಾನ ಮಾಡಬೇಕು ಅಂತಿದ್ದವರಿಗೆ ಫ್ಲೈಟ್‌ಗಳು ಹೌಸ್‌ಫುಲ್ ಆಗಿರುವುದು ಬೇಸರ ತಂದಿದೆ.

ಇಂದು ಮೌನಿ ಅಮಾವಾಸ್ಯೆ ಪಿತೃ ಪೂಜೆ

ಮೈಸೂರು, ಜ.28– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀಅಮೃತೇಶ್ವರ ದೇವಸ್ಥಾನದಲ್ಲಿ ಜ.29 ರಂದು ಮೌನಿ ಅಮಾವಾಸ್ಯೆ ಪ್ರಯುಕ್ತ ಸಾಮೂಹಿಕ ಮೋಕ್ಷ ನಾರಾಯಣ ಹೋಮ ಮತ್ತು ತಿಲಹೋಮ ಏರ್ಪಡಿಸಲಾಗಿದೆ.

ಪಿತೃಶಾಪದಿಂದ ಮನೆಯಲ್ಲಿ ಅಶಾಂತಿ, ಮಕ್ಕಳ ವಿದ್ಯಾಭ್ಯಾಸದಲ್ಲಿ ಅಡಚಣೆ, ಮಕ್ಕಳ ವಿವಾಹ ನಿಧಾನ ಮತ್ತು ಆರೋಗ್ಯದಲ್ಲಿ ವ್ಯತ್ಯಾಸ ಇತ್ಯಾದಿ ದೋಷ ನಿವಾರಣೆ ಮಾಡಲಾಗುವುದು. ಬೆಳಗ್ಗೆ 7.30ಕ್ಕೆ ಹೋಮ ಪ್ರಾರಂಭವಾಗಲಿದೆ. 9.45ಕ್ಕೆ ಮಹಾಮಂಗಳಾರತಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ವಿವರಗಳಿಗೆ ಮೈಕುಮಾರ್ ಜಾತಕ ವಿಮರ್ಶಕರು 9845183392, 9945161304 ಸಂಪರ್ಕಿಸಿ.

ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್

ಬೆಂಗಳೂರು, ಜ.28– ಮಾಧ್ಯಮ ಮಾನ್ಯತಾ ಪತ್ರ ಹೊಂದಿರುವ ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್‌ಪಾಸ್ ಸೌಲಭ್ಯವನ್ನು ರಾಜ್ಯ ಸರ್ಕಾರ ಕಲ್ಪಿಸಿದೆ. ಈ ಮೂಲಕ ಬಜೆಟ್‌ನಲ್ಲಿ ಘೋಷಣೆ ಮಾಡಿ ಅದನ್ನು ಯಥಾವತ್ತಾಗಿ ಜಾರಿಗೆ ಕೊಟ್ಟು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರ ನುಡಿದಂತೆ ನಡೆದಿದೆ.

ಉಚಿತ ಬಸ್‌ಪಾಸ್ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ವಿದ್ಯುನ್ಮಾನ ಅಥವಾ ಮುದ್ರಣ ಮಾಧ್ಯಮಗಳಲ್ಲಿ ಪೂರ್ಣಾವಧಿಗೆ ನೇಮಕಗೊಂಡು 4 ವರ್ಷಗಳ ಸೇವಾನುಭವ ಹೊಂದಿರುವ ಪತ್ರಕರ್ತರು ಅರ್ಜಿ ಸಲ್ಲಿಸಬಹುದು. ನೇಮಕಾತಿ ಆದೇಶ, ವೇತನ ಪತ್ರ, ಬ್ಯಾಂಕ್ ಸ್ಟೇಟ್‌ಮೆಂಟ್ ಇವುಗಳಲ್ಲಿ ಯಾವುದಾದರೂ ಒಂದು ದಾಖಲೆಯನ್ನು ಸೇವಾನುಭವಕ್ಕಾಗಿ ಒದಗಿಸಬೇಕು.

ಅರ್ಹ ಪತ್ರಕರ್ತರು ಉಚಿತ ಬಸ್ ಪಾಸ್ ಅಡಿ ಜಿಲ್ಲಾ ವ್ಯಾಪ್ತಿಯಲ್ಲಿ ಸಂಚರಿಸುವ ಕರ್ನಾಟಕ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಉಚಿತವಾಗಿ ಸಂಚರಿಸಬಹುದು. ತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ ಒದಗಿಸಬೇಕು.

ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುವ ವರದಿಗಾರರಿಗೆ ಪ್ರತಿ ತಾಲೂಕಿಗೆ ಸಂಪಾದಕರು ಸೂಚಿಸುವ ಒಬ್ಬರಿಗೆ, ಜಿಲ್ಲಾ ಮಟ್ಟದ ಪತ್ರಿಕೆಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಒಬ್ಬರಿಗೆ, ಆರು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಓರ್ವ ವರದಿಗಾರರು ಹಾಗೂ ಓರ್ವ ಫೋಟೋಗ್ರಾಫರ್‌ಗೆ, ಎಂಟು ಅಥವಾ ಹೆಚ್ಚು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಇಬ್ಬರು ವರದಿಗಾರರು ಹಾಗೂ ಓರ್ವ ಫೋಟೋಗ್ರಾಫರ್‌ಗೆ ಬಸ್ ಪಾಸ್ ಪಡೆಯಲು ಅವಕಾಶವಿದೆ.

ಉಪಗ್ರಹ ಆಧಾರಿತ ವಿದ್ಯುನ್ಮಾನ ವಾಹಿನಿಗಳ ವರದಿಗಾರರು ತಾಲೂಕು ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಪ್ರತಿ ತಾಲೂಕಿಗೆ ಓರ್ವ ಕ್ಯಾಮರಾಮ್ಯಾನ್ ಹಾಗೂ ಓರ್ವ ವರದಿಗಾರರು ಬಸ್ ಪಾಸ್ ಪಡೆಯಬಹುದು. ದಿನಪತ್ರಿಕೆಗಳು ಹಾಗೂ ಉಪಗ್ರಹ ಸುದ್ದಿ ವಾಹಿನಿಗಳ ಸಂಪಾದಕರು ನೀಡುವ ನೇಮಕಾತಿ ಪತ್ರ ಹಾಗೂ ಶಿಫಾರಸ್ಸು ಆಧರಿಸಿ ಬಸ್ ಪಾಸ್‌ಗಳನ್ನು ನೀಡಲಾಗುವುದು.

ಅರ್ಹ ಪತ್ರಕರ್ತರು ತಮ್ಮ ಸಮೀಪದ ಗ್ರಾಮ ಒನ್, ಕರ್ನಾಟಕ ಒನ್ ಅಥವಾ ಬೆಂಗಳೂರು ಒನ್ ಕೇಂದ್ರಗಳಿಗೆ ತೆರಳಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಅರ್ಜಿ ಸಲ್ಲಿಸಬಹುದು. ಅಪ್‌ಲೋಡ್ ಮಾಡಿದ ದಾಖಲೆಗಳು ಹಾಗೂ ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿಯನ್ನು ತಮ್ಮ ಜಿಲ್ಲೆಯ ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿಗೆ ಸ್ವಯಂ ದೃಢೀಕರಿಸಿ ಸಲ್ಲಿಸಬೇಕು.

ಸಂಗೊಳ್ಳಿ ರಾಯಣ್ಣ ಹುತಾತ್ಮ ದಿನ



ಸಂಗೊಳ್ಳಿ ರಾಯಣ್ಣ ಹುತಾತ್ಮ ದಿನದ ಅಂಗವಾಗಿ ಕುರುಬಾರಳ್ಳಿ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಸಂಸದ ಯದುವೀರ್ ಒಡೆಯರ್, ಶಾಸಕ ಟಿ. ಎಸ್.ಶ್ರೀವತ್ಸ, ಬಿಜೆಪಿ ಮೈಸೂರು ನಗರ ಅಧ್ಯಕ್ಷ ಎಲ್.ನಾಗೇಂದ್ರ ಅವರು ಭಾರತೀಯ ಸೈನ್ಯದಲ್ಲಿ ಹುತಾತ್ಮರಾದ ಸೈನಿಕರ ಕುಟುಂಬದವರಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ನೀಡಿ ಗೌರವಿಸಿದರು, ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯ ಕೆ.ಜೆ.ರಮೇಶ್, ಬಿ.ಎಂ.ರಘು, ಎಂ. ಶಿವಕುಮಾರ್, ಪೈ. ಟಿ.ರವಿ, ಪಿ.ಟಿ.ಕೃಷ್ಣ, ರಾಕೇಶ್ ಭಟ್, ರಾಕೇಶ್ ಗೌಡ, ಪುನೀತ್ ಮುಂತಾದವರು ಉಪಸ್ಥಿತರಿದ್ದರು

ವಿಜಯಪುರದಲ್ಲಿ ಹಾಡಹಗಲೇ ಕಾರಿನ ಮೇಲೆ ಗುಂಡಿನ ದಾಳಿ, ಯುವಕ ಸಾವು

ವಿಜಯಪುರ, ಜ.28– ದುಷ್ಕರ್ಮಿಗಳು ಹಾಡಹಗಲೇ ಕಾರಿನ ಮೇಲೆ ಗುಂಡಿನ ದಾಳಿ ನಡೆಸಿ, ಓರ್ವ ವ್ಯಕ್ತಿಯನ್ನು ಹತ್ಯೆ ಮಾಡಿದ ಘಟನೆ ವಿಜಯಪುರ ಜಿಲ್ಲೆಯ ತಿಕೋಟಾ ತಾಲೂಕಿನ ಅರಕೇರಿ ಗ್ರಾಮದ ಮನಾವರ ದೊಡ್ಡಿ ಬಳಿ ಮಂಗಳವಾರ ನಡೆದಿದೆ.

ಹತ್ಯೆಯಾದ ವ್ಯಕ್ತಿಯನ್ನು ಸತೀಶ್ ರಾಠೋಡ್ ಎಂದು ಗುರುತಿಸಲಾಗಿದ್ದು, ರಮೇಶ್ ಚವ್ಹಾಣ್ ಹಾಗೂ ಇತರರು ಸತೀಶ್ ಕಾರಿನ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಭೇಟಿ ನೀಡಿ ಪರಿಶೀಲನೆ ಮಾಡಿದ್ದು, ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಯುವತಿಯ ಮದುವೆ ವಿಷಯಕ್ಕೆ ಸಂಬಂಧಿಸಿದಂತೆ ಈ ಕೃತ್ಯ ನಡೆದಿದೆ ಎಂದು ಕೊಲೆಗೀಡಾದ ಸತೀಶ್ ಅವರ ತಂದೆ ಪ್ರೇಮಸಿಂಗ್ ಆರೋಪ ಮಾಡಿದ್ದಾರೆ.

ಸತೀಶ್ ರಾಠೋಡ್ ಅವರು ರಮೇಶ್ ಚವ್ಹಾಣ್ ಅವರ ಪುತ್ರಿಯನ್ನು ಮದುವೆಯಾಗಲು ಗುರುಹಿರಿಯರ ಸಮ್ಮುಖದಲ್ಲಿ ಕೇಳಿದ್ದರು. ಕಳೆದ ಒಂದೂವರೆ ವರ್ಷದ ಹಿಂದೆ ರಮೇಶ್ ಮಗಳ ಜೊತೆ ಸತೀಶ್ ವಿವಾಹ ಪ್ರಸ್ತಾಪ ನಡೆದಿತ್ತು. ಆದರೆ ಸತೀಶ್‌ಗೆ ನನ್ನ ಮಗಳನ್ನು ಕೊಡಲ್ಲ ಎಂದು ಖಡಾಖಂಡಿತವಾಗಿ ರಮೇಶ್ ಹೇಳಿದ್ದರು. ಇದಾದ ಬಳಿಕ ಒಂದು ವರ್ಷದ ಹಿಂದೆ ರಮೇಶ್ ಮಗಳು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಳಂತೆ.

ತನ್ನ ಮಗಳ ಸಾವಿಗೆ ಸತೀಶ್‌ನೇ ಕಾರಣ ಎಂಬ ಸಿಟ್ಟು ರಮೇಶ್ ಹಾಗೂ ಸಹಚರರಿಗೆ ಇತ್ತಂತೆ. ಇದೇ ಸಿಟ್ಟಿನಲ್ಲಿ ಸತೀಶನನ್ನು ಗುಂಡು ಹಾರಿಸಿ ಕೊಲೆ ಮಾಡಿದ್ದಾರೆಂದು ಸತೀಶ ತಂದೆ ಪ್ರೇಮ್ ಸಿಂಗ್ ಆರೋಪಿಸಿದ್ದಾರೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದು, ತನಿಖೆ ಬಳಿಕ ಸತೀಶ್ ಹತ್ಯೆಯ ಸತ್ಯಾಂಶ ಬಯಲಿಗೆ ಬರುವ ಸಾಧ್ಯತೆ ಇದೆ.

ರಾಜ್ಯದಲ್ಲಿ ಫೆ. 1 ರಿಂದ ಮಳೆ ಸಾಧ್ಯತೆ

ಬೆಂಗಳೂರು: ಪೂರ್ವೋತ್ತರ ಮಾರುತಗಳು ಹಾದು ಹೋಗಲಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಫೆ1ರಿಂದ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಎಲ್ಲೆಲ್ಲಿ ಮಳೆ: ಬೆಂಗಳೂರು ನಗರ, ಬೆಂ.ಗ್ರಾಮಾಂತರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡದಲ್ಲಿ ಫೆ.1 ರಿಂದ 2ರವರೆಗೆ, ಉಡುಪಿ, ಚಿಕ್ಕಮಗಳೂರು, ಕೊಡಗು, ಹಾಸನದಲ್ಲಿ ಫೆ.2ರಂದು ಸಾಧಾರಣ ಮಳೆಯಾಗಲಿದೆ.

ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ ಎಂದು ಇಲಾಖೆ ಮಾಹಿತಿ ನೀಡಿದೆ. ರಾಜ್ಯದ 13 ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನದಲ್ಲಿ ಉಷ್ಣಾಂಶ ಕುಸಿತವಾಗಿದ್ದು, ಥಂಡಿ ವಾತಾವರಣ ಮುಂದುವರಿದಿದೆ. ಎಲ್ಲ ಜಿಲ್ಲೆಗಳಲ್ಲಿ ವಾಡಿಕೆಗಿಂತ 3 ರಿಂದ 5 ಡಿ. ಸೆ. ಉಷ್ಣಾಂಶ ಕುಸಿತವಾಗಿದೆ.

'ಸಂವಿಧಾನ ವರ್ಸಸ್ ಸಂಘಿಗಳ ಸುಳ್ಳು ಅಭಿಯಾನ' ಕೃತಿ ಬಿಡುಗಡೆ



ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ ಪ್ರಕಟಣೆಯ ಲೇಖಕ ಶಿವಸುಂದರ್ ರಚಿತ 'ಸಂವಿಧಾನ' ವರ್ಸಸ್ 'ಸಂಘಿಗಳ ಸುಳ್ಳು ಅಭಿಯಾನ' ಪುಸ್ತಕವನ್ನು ಮಂಗಳವಾರ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜ.28(ಎಸ್‌ಪಿಎನ್)– ಮೈಸೂರಿನ ಡಾ.ಬಿ.ಆರ್.ಅಂಬೇಡ್ಕರ್ ರಸ್ತೆಯ ವಿಶ್ವಮೈತ್ರಿ ಬುದ್ಧ ವಿಹಾರ ಆವರಣದಲ್ಲಿ ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ ಪ್ರಕಟಣೆಯ ಲೇಖಕ ಶಿವಸುಂದರ್ ರಚಿತ 'ಸಂವಿಧಾನ' ವರ್ಸಸ್ 'ಸಂಘಿಗಳ ಸುಳ್ಳು ಅಭಿಯಾನ' ಪುಸ್ತಕವನ್ನು ಮಂಗಳವಾರ ಬಿಡುಗಡೆಗೊಳಿಸಲಾಯಿತು.

ಈ ವೇಳೆ ಹುಣಸೂರು ಡಿ.ದೇವರಾಜ ಅರಸು ಪ್ರಥಮ ದರ್ಜೆ ಕಾಲೇಜು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಚಿದಾನಂದ ಮಾತನಾಡಿ, ಪ್ರಸ್ತುತ ಜಗತ್ತಿನಲ್ಲಿ ಒಂದಿಲ್ಲೊಂದು ಕಾರಣಕ್ಕೆ ಯುದ್ಧಗಳು ಜರುಗುತ್ತಿವೆ. ಅದು ಧರ್ಮದ ಕಾರಣಕ್ಕಾಗಿಯೇ ಯುದ್ಧಗಳು ನಡೆಯುತ್ತಿರುವುದು ವಿಶೇಷ. ಇಸ್ರೇಲ್ ಮತ್ತು ಹಮಾಸ್ ಯುದ್ಧ ಸೇರಿದಂತೆ ಇತರೆ ದೇಶಗಳ ನಡುವೆ ನಡೆಯುತ್ತಿರುವ ಯುದ್ಧಗಳು ಧರ್ಮದ ಕಾರಣಕ್ಕಾಗಿಯೇ ನಡೆಯುತ್ತಿವೆ ಎಂದರು.

ಅಂಬೇಡ್ಕರ್ ಜೀವಿತಾವಧಿಯಲ್ಲಿ ತಮಗಾದ ಅನ್ಯಾಯ, ಎದುರಾದ ಸಮಸ್ಯೆಗಳ ವಿರುದ್ಧ ಸಂದರ್ಭಕ್ಕೆ ಅನುಸಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಅಲ್ಲದೆ, ಭಾರತ–ಪಾಕಿಸ್ತಾನ ನಡುವೆ ನಡೆದ ಮೂರು ಯುದ್ಧಗಳು, ದಲೈಲಾಮ ಕಾರಣಕ್ಕೆ ಚೀನಾ ಮತ್ತು ಭಾರತ ನಡುವೆ ನಡೆದ ಯುದ್ಧ ಎಲ್ಲವೂ ಧರ್ಮದ ಕಾರಣಕ್ಕೆ. ಹಾಗಾಗಿ ಭಾರತದಲ್ಲಿ ಸಾಂಸ್ಕೃತಿಕ ಯಜಮಾನಿಕೆಯನ್ನು ಕೊನೆಗೊಳಿಸಲು ಹೋರಾಡಬೇಕಿದೆ ಎಂದು ಕೆಲವು ಘಟನಾವಳಿಗಳನ್ನು ಉಲ್ಲೇಖಿಸಿ ತಿಳಿಸಿದರು.

ಭಾರತದಲ್ಲಿ ಕಳೆದ ಹಲವು ವರ್ಷಗಳಿಂದ ಧರ್ಮಾಧಾರಿತ ರಾಜಕಾರಣ ಬಹುದೊಡ್ಡ ಚರ್ಚೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಅಂಬೇಡ್ಕರ್ ಚಿಂತನೆಗಳು ಪ್ರಸ್ತುತ ಎನಿಸುತ್ತದೆ. ಅಂಬೇಡ್ಕರ್ ಪ್ರಸ್ತುತ ಬದುಕಿದ್ದರೆ, ಅಸ್ಪೃಶ್ಯತೆ ಎಂಬುದನ್ನು ಮರು ವರ್ಗೀಕರಿಸುತ್ತಿದ್ದರೇನೋ ಅನಿಸುತ್ತಿದೆ. ಒಂದು ಮನೆಯಲ್ಲಿ ಅಕ್ಷರಸ್ಥ ಅಣ್ಣ, ಕೃಷಿಕ ತಮ್ಮ ನಡುವೆ ವೃತ್ತಿ ಕಾರಣಕ್ಕೆ ಇರುವ ವ್ಯತ್ಯಾಸಗಳು, ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣದ ವಿದ್ಯಾರ್ಥಿಗಳು, ಕಲಾ ವಿಭಾಗದ ವಿದ್ಯಾರ್ಥಿಗಳ ನಡುವಿನ ತಾರತಮ್ಯ, ಎಂಎನ್‌ಸಿ ಕಂಪನಿ ಹಾಗೂ ಖಾಸಗಿ ಕಂಪನಿಗಳಲ್ಲಿ ದೊಡ್ಡ ಹುದ್ದೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳು, ತಮ್ಮ ಕೆಳಹಂತದ ನೌಕರರ ನಡುವಿನ ವ್ಯತ್ಯಾಸವನ್ನು ಪಟ್ಟಿ ಮಾಡಿ ದೊಡ್ಡ ಪುಸ್ತಕವನ್ನೇ ಬರೆಯುತ್ತಿದ್ದರೇನೊ ಎಂದು ಅಭಿಪ್ರಾಯಪಟ್ಟರು.

ಇತ್ತೀಚೆಗೆ ಅಂಬೇಡ್ಕರ್ ಅವರನ್ನು ಒಂದು ಚೌಕಟ್ಟಿಗೆ ಸೀಮಿತಗೊಳಿಸುತ್ತಿದ್ದೇವೆ ಎಂಬ ಭಾವನೆ ಬರುತ್ತಿದೆ. ಆದರೆ, ಅವರ ಚಿಂತನೆಗಳು ಒಂದು ತರ್ಕಕ್ಕೆ, ಒಂದು ಸಿದ್ಧಾಂತಕ್ಕೆ ಸೀಮಿತಗೊಳಿಸಲು ಸಾಧ್ಯವೇ ಇಲ್ಲ. ಅವರು ತತ್ವಜ್ಞಾನಿಯಾಗಿ, ಆರ್ಥಿಕ ತಜ್ಞರಾಗಿ, ಸಾಮಾಜಿಕ ಹೋರಾಟಗಾರರಾಗಿ, ಶೋಷಿತರ ದನಿಯಾಗಿ, ಮಹಿಳಾ ಚಿಂತಕರಾಗಿ, ಸಂವಿಧಾನ ತಜ್ಞ ಸೇರಿದಂತೆ ಎಲ್ಲಾ ಆಯಾಮಗಳಲ್ಲೂ ಗುರುತಿಸಿಕೊಂಡಿದ್ದಾರೆ. ಅವರು ನೋಡದ ಕ್ಷೇತ್ರವೇ ಇಲ್ಲವೆಂಬ ವಾತಾವರಣವಿದೆ. ಅವರು ರಚಿಸಿರುವ ಒಂದೊಂದು ಪುಸ್ತಕವೂ ಈ ದೇಶದ ಚಿತ್ರಣ ತೆರೆದುಕೊಳ್ಳುತ್ತದೆ ಎಂದು ಕೆಲವು ಘಟನೆಗಳನ್ನು ವಿವರಿಸಿದರು.

ಲೇಖಕ ಶಿವಸುಂದರ್ ಮಾತನಾಡಿ, ಸಿಟಿಜನ್ಸ್ ಫಾರ್ ಸೋಷಿಯಲ್ ಜಸ್ಟಿಸ್ ಹೆಸರಿನಲ್ಲಿ ಕರ್ನಾಟಕದ ವತಿಯಿಂದ ಸಂಘಪರಿಹಾರವು ನವೆಂಬರ್ 26ರಿಂದ ಜನವರಿ 26ರವರೆಗೆ ಎರಡು ತಿಂಗಳ ಕಾಲ ನಡೆಸಿರುವ 'ಸಂವಿಧಾನ ಸಮ್ಮಾನ' ಅಭಿಯಾನ ನಡೆಸಿದೆ. ಸಂಘಿಗಳ ಅಜೆಂಡಾದಂತೆ ಹಿಂದೂ ರಾಷ್ಟ್ರದ ಪರಿಕಲ್ಪನೆ ವಾಸ್ತವವಾಗಿ ಬಿಟ್ಟರೆ ಅದು ದೇಶಕ್ಕೆ ಅತೀ ದೊಡ್ಡ ವಿಪತ್ತಾಗಿರುತ್ತದೆ. ಹಿಂದೂ ರಾಷ್ಟ್ರವೆಂದರೆ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವಗಳಿಗೆ ಎದುರಾಗುವ ಅಪಾಯವೇ ಹೆಚ್ಚು. ಹೀಗಾಗಿ ಅವರ ಎಲ್ಲಾ ಪ್ರಯತ್ನಗಳನ್ನು ತಡೆದು ಹಿಂದೂ ರಾಷ್ಟ್ರದ ವಾಸ್ತವಕ್ಕೆ ಬರದಂತೆ ತಡೆಗಟ್ಟಬೇಕೆಂದು 1940ರಲ್ಲೇ ಅಂಬೇಡ್ಕರ್ ಹೇಳಿದ್ದರು. ಈ ಅಭಿಯಾನ ತಡೆಗಟ್ಟಲು 'ಅಂಬೇಡ್ಕರ್ ವಾದ' ಈ ಕಾಲಕ್ಕೆ ಹೆಚ್ಚು ಅವಶ್ಯಕ ಎಂದರು.

ವೇದಿಕೆಯಲ್ಲಿ ಆದಿಕರ್ನಾಟಕ ಮಹಾಸಂಸ್ಥಾನ ಗುರುಪೀಠದ ಶ್ರೀ ಜ್ಞಾನ ಸ್ವರೂಪಾನಂದ ಸ್ವಾಮೀಜಿ, ಬುದ್ಧ ಉಪಾಸಕರಾದ ಪವಿತ್ರ ಬೇಗಂ ಪಲ್ಲವಿ, ಸಂವಿಧಾನ ಪೀಠಕೆ ಬೋಧಿಸಿದ ಮಹಾತ್ಮಸ್ವಾಮೀಜಿ, ಮಾಜಿ ಮೇಯರ್ ಪುರುಷೋತ್ತಮ್ ಸೇರಿದಂತೆ ಇತರರು ಉಪಸ್ಥಿತರಿದ್ದರು

> ಸಂವಿಧಾನದಲ್ಲಿ ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎಂದು ಎಷ್ಟೇ ಹೇಳಿದರೂ ನನಗೆ ಇಷ್ಟ ಬಂದಂತೆ ಸಾರ್ವಜನಿಕವಾಗಿ ಮಾತನಾಡಲು ಸಾಧ್ಯವಿಲ್ಲ. ಏಕೆಂದರೆ ಸಿ ಅಂಡ್ ಆರ್ ರೂಲ್ ಬುಕ್ ಇದೆ. ಅದರ ಹಿಂದೆ ಯಜಮಾನಿಕೆ ಮನಸ್ಥಿತಿಯ ನೀತಿಗಳು ರೂಪಿತವಾಗಿವೆ. ಹಾಗಾಗಿ ನನ್ನ ಇತಿಮಿತಿಯಲ್ಲಿ ಎಷ್ಟು ಹೇಳಬೇಕು ಅಷ್ಟು ಹೇಳ ಬಯಸುತ್ತೇನೆ. ಏಕೆಂದರೆ ನಾನು ಸರ್ಕಾರಿ ಕಾಲೇಜಿನ ಅಧ್ಯಾಪಕ.
> – ಡಾ.ಚಿದಾನಂದ, ಸಹಾಯಕ ಪ್ರಾಧ್ಯಾಪಕರು,

ದೇಶ - ವಿದೇಶ

ಬಿಜೆಪಿ ನಾಯಕ ದಾಖಲಿಸಿದ್ದ ಮಾನಹಾನಿ ಪ್ರಕರಣ

ಸಿಎಂ ಅತಿಶಿಗೆ ನೀಡಿದ್ದ ಸಮನ್ಸ್ ರದ್ದುಗೊಳಿಸಿದ ದೆಹಲಿ ಕೋರ್ಟ್



ನವದೆಹಲಿ, ಜ.28– ಬಿಜೆಪಿ ನಾಯಕರೊಬ್ಬರು ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅತಿಶಿ ಅವರಿಗೆ ನೀಡಲಾಗಿದ್ದ ಸಮನ್ಸ್ ಅನ್ನು ದೆಹಲಿ ನ್ಯಾಯಾಲಯ ಮಂಗಳವಾರ ರದ್ದುಗೊಳಿಸಿದೆ.

ಪ್ರವೀಣ್ ಶಂಕರ್ ಕಪೂರ್ ಅವರ ದೂರಿನ ಮೇರೆಗೆ ಸಮನ್ಸ್ ಜಾರಿಗೊಳಿಸಿದ ಮ್ಯಾಜಿಸ್ಟ್ರಿಯಲ್ ನ್ಯಾಯಾಲಯದ ಆದೇಶದ ವಿರುದ್ಧ ಎಎಪಿ ನಾಯಕಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ ಅವರು ಈ ಆದೇಶ ನೀಡಿದ್ದಾರೆ. ಆಪಾದಿತ ಮಾನಹಾನಿಕರ ಹೇಳಿಕೆಯು ಬಿಜೆಪಿಯ ವಿರುದ್ಧವೇ ಹೊರತು ಯಾವುದೇ ವ್ಯಕ್ತಿಯನ್ನು ಗುರಿಯಾಗಿಸಿಲ್ಲ. ಹೀಗಾಗಿ ಕಪೂರ್ ಅವರಿಗೆ ಮಾನಹಾನಿಯಾಗಿಲ್ಲ ಎಂಬ ಅತಿಶಿ ಪರ ವಕೀಲರ ವಾದವನ್ನು ನ್ಯಾಯಾಧೀಶರು ಗಮನಿಸಿದರು.

5 ವರ್ಷಗಳ ನಂತರ ಭಾರತ–ಚೀನಾ ನೇರ ವಿಮಾನ ಸೇವೆ ಪುನರಾರಂಭ!

ನವದೆಹಲಿ, ಜ.28– ಕೋವಿಡ್ ಮಹಾಮಾರಿ ಸ್ಫೋಟದ ಬಳಿಕ ಭಾರತ ಮತ್ತು ಚೀನಾ ನಡುವೆ ಸ್ಥಗಿತವಾಗಿದ್ದ ನೇರ ವಿಮಾನ ಸೇವೆಗಳನ್ನು ಪುನಾರಂಭಿಸಲು ಇದೀಗ ಭಾರತ ಮತ್ತು ಚೀನಾ ಸರ್ಕಾರಗಳು ಒಪ್ಪಿಗೆ ನೀಡಿವೆ.

ಕೊರೊನಾ ವೈರಸ್ ಮತ್ತು ನಂತರದ ರಾಜಕೀಯ ಉದ್ವಿಗ್ನತೆಗಳಿಂದಾಗಿ ಸ್ಥಗಿತವಾಗಿದ್ದ ನೇರವಿಮಾನ ಸೇವೆಗಳನ್ನು, ಐದು ವರ್ಷಗಳ ನಂತರ ಪುನರಾರಂಭಗೊಳಿಸಲು ಭಾರತ ಮತ್ತು ಚೀನಾ ಎರಡೂ ದೇಶಗಳು ಒಪ್ಪಿಗೆ ನೀಡಿವೆ. ಪ್ರಸಕ್ತ ವರ್ಷದ ಬೇಸಿಗೆಯಿಂದ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಪುನರಾರಂಭಿಸಲು ಭಾರತ ಹಾಗೂ ಚೀನಾ ಪರಸ್ಪರ ಒಪ್ಪಿಕೊಂಡಿವೆ ಎನ್ನಲಾಗಿದೆ.

ಚೀನಾದ ವಿದೇಶಾಂಗ ಕಾರ್ಯದರ್ಶಿ– ಉಪ ವಿದೇಶಾಂಗ ಸಚಿವರನ್ನು ಬೀಜಿಂಗ್‌ನಲ್ಲಿ ಭೇಟಿ ಮಾಡಿದ ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ವಿಸ್ತೃತ ಚರ್ಚೆ ನಡೆಸಿದರು. ಈ ಕುರಿತು ಉಭಯ ದೇಶಗಳ ವಿದೇಶಾಂಗ ಕಾರ್ಯದರ್ಶಿಗಳ ಮಟ್ಟದ ಮಾತುಕತೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದ್ದು, ಹಾಲಿ ಇರುವ ಒಪ್ಪಂದಗಳ ಅನ್ವಯ ಇದಕ್ಕೆ ಅಗತ್ಯವಾಗಿರುವ ಸೂಕ್ತ ವ್ಯವಸ್ಥೆಯನ್ನು ಚರ್ಚಿಸಲಾಗುವುದು ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. ಜತೆಗೆ ಉಭಯ ದೇಶಗಳ ನಡುವೆ ನೇರ ವಿಮಾನಗಳನ್ನು ಪುನರಾರಂಭಿಸುವ ಬಗ್ಗೆಯೂ ತಾತ್ವಿಕ ಒಪ್ಪಿಗೆ ನೀಡಲಾಗಿದೆ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

ಮಹಾಕುಂಭಮೇಳದಲ್ಲಿ ಇಲ್ಲಿಯವರೆಗೆ 147.6 ಮಿಲಿಯನ್ ಜನರಿಂದ ಪವಿತ್ರ ಸ್ನಾನ

ಪ್ರಯಾಗ್ ರಾಜ್, ಜ.28– ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಜಗತ್ತಿನ ಅತಿ ದೊಡ್ಡ ಧಾರ್ಮಿಕ ಕಾರ್ಯಕ್ರಮ ಮಹಾ ಕುಂಭಮೇಳ ಗಮನಾರ್ಹ ರೀತಿಯಲ್ಲಿ ಭಕ್ತರನ್ನು ಆಕರ್ಷಿಸುತ್ತಿದ್ದು, ಸಂಗಮದಲ್ಲಿ ಪ್ರತಿನಿತ್ಯ ಸಾವಿರಾರು ಜನರು ಪವಿತ್ರ ಸ್ನಾನ ಮಾಡುತ್ತಿದ್ದಾರೆ.

ಮಂಗಳವಾರ ಬೆಳಗ್ಗೆ 8 ಗಂಟೆಯ ಹೊತ್ತಿಗೆ 1 ಮಿಲಿಯನ್ ಸಾಧು ಸಂತರು ಸೇರಿದಂತೆ 4.55 ಮಿಲಿಯನ್ ಜನರು ಗಂಗಾ ಮತ್ತು ಯಮುನಾ, ಸರಸ್ವತಿ ನದಿಗಳ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ ಎಂದು ಉತ್ತರ ಪ್ರದೇಶ ಮಾಹಿತಿ ಇಲಾಖೆ ತಿಳಿಸಿದೆ

ಈ ಮಧ್ಯೆ ಉತ್ತರ ಪ್ರದೇಶ ಮಾಹಿತಿ ಇಲಾಖೆ ಪ್ರಕಾರ, ಜನವರಿ 13 ರಂದು ಈವೆಂಟ್ ಪ್ರಾರಂಭವಾದಾಗಿನಿಂದ 147.6 ಮಿಲಿಯನ್ ಜನರು ಗಂಗಾ ಮತ್ತು ಯಮುನಾ ನದಿಗಳ ಸಂಗಮದಲ್ಲಿ ಸ್ನಾನ ಮಾಡಿದ್ದಾರೆ. ಇಲ್ಲಿಯವರೆಗೆ ರಾಜನಾಥ್ ಸಿಂಗ್ ಮತ್ತು ಕಿರಣ್ ರಿಜಿಜು ಸೇರಿದಂತೆ ಹಲವಾರು ಕೇಂದ್ರ ಸಚಿವರು ಮಹಾಕುಂಭಕ್ಕೆ ಭೇಟಿ ನೀಡಿದ್ದು, ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು. ಶಾ ಅವರೊಂದಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಬಾಬಾ ರಾಮ್‌ದೇವ್ ಮತ್ತಿತರ ಸಾಧು ಸಂತರು ಸ್ನಾನ ಮಾಡುವುದರೊಂದಿಗೆ ಮಹಾ ಕುಂಭಮೇಳ ಪ್ರಪಂಚದಾದ್ಯಂತ ಅಸಾಧಾರಣ ಭಕ್ತರ ಆಗಮನಕ್ಕೆ ಸಾಕ್ಷಿಯಾಗಿದೆ.

ಉತ್ತರ ಪ್ರದೇಶದಲ್ಲಿ ಜೈನ ನಿರ್ವಾಣ ಉತ್ಸವದ ವೇದಿಕೆ ಕುಸಿತ; 7 ಮಂದಿ ಸಾವು, 40 ಮಂದಿಗೆ ಗಾಯ


ಲಖನೌ, ಜ.28– ಜೈನ ನಿರ್ವಾಣ ಲಡ್ಡು ಉತ್ಸವದಲ್ಲಿ ವೇದಿಕೆ ಕುಸಿದು ಬಿದ್ದು 7 ಮಂದಿ ಸಾವನ್ನಪ್ಪಿ, 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ಉತ್ತರ ಪ್ರದೇಶದ ಬಾಗ್‌ಪತ್‌ನಲ್ಲಿ ಮಂಗಳವಾರ ನಡೆದಿದೆ.

ಜೈನ ಧರ್ಮದ ಮೊದಲ ತೀರ್ಥಂಕರ ಭಗವಾನ್ ಆದಿನಾಥರ ಸ್ಮರಣಾರ್ಥ 'ನಿರ್ವಾಣ ಲಡ್ಡು ಪರ್ವ್' ಕಾರ್ಯಕ್ರಮದಲ್ಲಿ ಜೈನ ಸನ್ಯಾಸಿಗಳ ಸಮ್ಮುಖದಲ್ಲಿ ಭಗವಾನ್ ಆದಿನಾಥನಿಗೆ ಲಡ್ಡುಗಳನ್ನು ಅರ್ಪಿಸುವ ಸಮಾರಂಭದಲ್ಲಿ ಈ ಘಟನೆ ನಡೆದಿದೆ

ಕಳೆದ 30 ವರ್ಷಗಳಿಂದ ಜೈನ ಸಮುದಾಯವು ಲಡ್ಡೂ ಮಹೋತ್ಸವವನ್ನು ಆಚರಿಸುತ್ತಾ ಬರುತ್ತಿದೆ. ದೇವರಿಗೆ ಲಡ್ಡು ಪ್ರಸಾದ ನೈವೇದ್ಯ ಮಾಡುವ ಹಿನ್ನೆಲೆಯಲ್ಲಿ ಬಿದಿರಿನಿಂದ ತಾತ್ಕಾಲಿಕ ವೇದಿಕೆ ನಿರ್ಮಾಣ ಮಾಡಲಾಗಿದೆ. ಮಾನ್‌ಸ್ತಂಭ ಕಾಂಪ್ಲೆಕ್ಸ್‌ನಲ್ಲಿ 65 ಅಡಿಯ ತಾತ್ಕಾಲಿಕ ವೇದಿಕೆ ನಿರ್ಮಾಣ ಮಾಡಲಾಗಿದ್ದು, ನೂರಾರು ಭಕ್ತರು ಮರದ ಮೆಟ್ಟಿಲುಗಳ ಮೇಲೆ ಇರುವಾಗಲೇ ವೇದಿಕೆ ಕುಸಿದು ಬಿದ್ದಿದೆ. ಜನ ದಟ್ಟಣೆ ಹೆಚ್ಚಿದ್ದರಿಂದ ವೇದಿಕೆ ಕುಸಿದು ಬಿದ್ದಿದೆ ಎನ್ನಲಾಗಿದೆ.

ಏತನ್ಮಧ್ಯೆ ಘಟನೆಯ ನಂತರ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದ್ದು, ಕಾಲ್ತುಳಿತದಂತಹ ಪರಿಸ್ಥಿತಿ ಎದುರಾಗಿದೆ. ಸ್ಥಳಕ್ಕೆ ಧಾವಿಸಿದ ಪೊಲೀಸ್ ಸಿಬ್ಬಂದಿ ಪರಿಸ್ಥಿತಿಯನ್ನು ನಿಯಂತ್ರಣಕ್ಕ ತಂದಿದ್ದಾರೆಂದು ತಿಳಿದುಬಂದಿದೆ.

ನೌಕಾಪಡೆಯ ಗುಂಡಿನ ದಾಳಿಯಲ್ಲಿ 5 ಮೀನುಗಾರರಿಗೆ ಗಾಯ; ಶ್ರೀಲಂಕಾದ ರಾಯಭಾರಿಗೆ ಭಾರತ ಸಮನ್ಸ್ ಜಾರಿ



ನವದೆಹಲಿ: ಶ್ರೀಲಂಕಾ ನೌಕಾಪಡೆಯು ಭಾರತೀಯ ಮೀನುಗಾರರ ಮೀನುಗಾರಿಕಾ ದೋಣಿಯ ಮೇಲೆ ಗುಂಡು ಹಾರಿಸಿ 5 ಮಂದಿ ಗಾಯಗೊಂಡಿದ್ದಾರೆ. ಇದಾದ ನಂತರ ಭಾರತ ಇಂದು ನವದೆಹಲಿಯಲ್ಲಿರುವ ಶ್ರೀಲಂಕಾದ ಹಂಗಾಮಿ ಹೈಕಮಿಷನರ್‌ಗೆ ಸಮನ್ಸ್ ಜಾರಿ ಮಾಡಿದೆ. ಅವರನ್ನು ಬಂಧಿಸಲು ಪ್ರಯತ್ನಿಸುತ್ತಿದ್ದಾಗ ಶ್ರೀಲಂಕಾ ನೌಕಾಪಡೆ ಗುಂಡು ಹಾರಿಸಿತ್ತು. ಡೆಲ್ಫ್ಟ್ ದ್ವೀಪದ ಬಳಿ ಶ್ರೀಲಂಕಾ ನೌಕಾಪಡೆಯ ಗುಂಡಿನ ದಾಳಿಯಲ್ಲಿ ಐವರು ಭಾರತೀಯ ಮೀನುಗಾರರು ಗಾಯಗೊಂಡಿದ್ದಾರೆ. ಈ ಘಟನೆಗೆ ಭಾರತವು ಶ್ರೀಲಂಕಾ ನೌಕಾಪಡೆಯನ್ನು ಖಂಡಿಸಿದೆ. ಭಾರತ ಶ್ರೀಲಂಕಾ ರಾಯಭಾರಿಗೆ ಸಮನ್ಸ್ ಜಾರಿ ಮಾಡಿ, ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದೆ.

ಡೆಲ್ಫ್ಟ್ ದ್ವೀಪದ ಸಮೀಪದಲ್ಲಿ 13 ಭಾರತೀಯ ಮೀನುಗಾರರನ್ನು ಬಂಧಿಸಿದಾಗ ಶ್ರೀಲಂಕಾ ನೌಕಾಪಡೆಯಿಂದ ಗುಂಡು ಹಾರಿಸಿದ ಘಟನೆ ಇಂದು ಬೆಳಗಿನ ಜಾವ ನಡೆದಿದೆ. ಮೀನುಗಾರಿಕಾ ದೋಣಿಯಲ್ಲಿದ್ದ 13 ಮೀನುಗಾರರಲ್ಲಿ ಇಬ್ಬರು ಗಂಭೀರ ಗಾಯಗೊಂಡಿದ್ದು, ಪ್ರಸ್ತುತ ಜಾಫ್ನಾ ಬೋಧನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಬುಧವಾರ 29 ಜನವರಿ 2025

ಕಟ್ಟೆಮಾಡು ಮಹಾಮೃತ್ಯುಂಜಯ ದೇವಾಲಯ ಪ್ರಧಾನ ಅರ್ಚಕರ ಮೇಲೆ ಹಲ್ಲೆ ಪ್ರಕರಣ

2 ದಿನದೊಳಗೆ ಆರೋಪಿಗಳ ಬಂಧಿಸದಿದ್ದರೆ ಪ್ರತಿಭಟನೆ

• ಕೊಡಗು ಬ್ರಾಹ್ಮಣ ಸಮಾಜ ಎಚ್ಚರಿಕೆ • ಎಸ್‌ಪಿ ಕಚೇರಿ ಎದುರು ಭಜನೆ

ಮಡಿಕೇರಿ, ಜ.28– ಕಟ್ಟೆಮಾಡು ಗ್ರಾಮದ ಶ್ರೀ ಮಹಾಮೃತ್ಯುಂಜಯ ದೇವಾಲಯ ಪ್ರಧಾನ ಅರ್ಚಕರ ಮೇಲೆ ಹಲ್ಲೆ ನಡೆಸಿರುವುದು ಖಂಡನೀಯ. ಹಲ್ಲೆ ಆರೋಪಿಗಳ ಬಂಧನಕ್ಕೆ 2 ದಿನ ಗಡುವು ನೀಡಲಾಗಿದ್ದು, ತಪ್ಪಿದ್ದಲ್ಲಿ ಜ.31ರಂದು ಜಿಲ್ಲೆಯಾದ್ಯಂತ ಎಲ್ಲಾ ದೇವಾಲಯಗಳನ್ನು ಬಂದ್ ಮಾಡಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸುವುದಾಗಿ ಕೊಡಗು ಬ್ರಾಹ್ಮಣ ಸಮಾಜ ಎಚ್ಚರಿಕೆ ನೀಡಿದೆ.

ನಗರದ ಎಸ್‌ಪಿ ಕಚೇರಿ ಎದುರು ಮಂಗಳವಾರ ಜಮಾಯಿಸಿದ ಬ್ರಾಹ್ಮಣ ಸಮಾಜದ ನೂರಾರು ಮಂದಿ ಕೆಲಕಾಲ ಭಜನೆ, ದೇವರ ಕೀರ್ತನೆಗಳನ್ನು ಪಠಿಸುವ ಮೂಲಕ ಹಲ್ಲೆ ಘಟನೆ ಖಂಡಿಸಿದರು. ಬಳಿಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರನ್ನು ಭೇಟಿಯಾದ ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ ನಿಯೋಗ ಕಟ್ಟೆಮಾಡು ದೇವಾಲಯ ಪ್ರಧಾನ ಅರ್ಚಕ ವಿಘ್ನೇಶ್ ಭಟ್ ಅವರ ಮೇಲೆ ಹಲ್ಲೆ ಮಾಡಿ, ಸ್ಥಳದಲ್ಲಿದ್ದ ಅವರ ತಾಯಿ ಮೇಲೂ ಹಲ್ಲೆ ಮಾಡಲಾಗಿದೆ. ಪ್ರಕರಣದ ಪ್ರಮುಖ ಆರೋಪಿ ಮಂಡೇಟಿರ ಅನಿಲ್ ಮತ್ತು ಜೊತೆಗಿದ್ದವರನ್ನು ಪೊಲೀಸರು 2 ದಿನದೊಳಗೆ ಬಂಧಿಸಬೇಕು. ಇಲ್ಲದಿದ್ದಲ್ಲಿ ಜ.31ರಂದು ಬೆಳಗ್ಗೆ ಬ್ರಾಹ್ಮಣ ಸಮಾಜದಿಂದ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಅಂದು ಜಿಲ್ಲೆಯಾದ್ಯಂತ ದೇವಾಲಯಗಳಲ್ಲಿ ಬೆಳಗ್ಗಿನ ಪೂಜೆ ಮಾಡಿದ ಬಳಿಕ ದೇವಾಲಯವನ್ನು ಬಂದ್ ಮಾಡಲಾಗುವುದು. ನಂತರ ಎಸ್‌ಪಿ ಕಚೇರಿ ಎದುರು


ಕಟ್ಟೆಮಾಡು ಮೃತ್ಯುಂಜಯ ದೇವಾಲಯ ಪ್ರಧಾನ ಅರ್ಚಕರ ಮೇಲೆ ಹಲ್ಲೆ ನಡೆಸಿದ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಕೊಡಗು ಬ್ರಾಹ್ಮಣ ಸಮಾಜದ ಮುಖಂಡರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆ ನಡೆಸಲಾಗುವುದು. ಪ್ರತಿಭಟನೆಗೆ ಆಸ್ಪದ ನೀಡದೆ ಆರೋಪಿಗಳನ್ನು ಶೀಘ್ರ ಬಂಧಿಸಬೇಕೆಂದು ಒತ್ತಾಯಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಬ್ರಾಹ್ಮಣರ ಅಪನಿಂದನೆ, ಅವಹೇಳನ ಮಾಡುತ್ತಿರುವವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು. ಹಲ್ಲೆ ಘಟನೆ ಹಿಂದೆ ಇರುವ ಪ್ರಭಾವಿಗಳು ಯಾರು ಎಂಬುದನ್ನು ಪೊಲೀಸರು ಬಹಿರಂಗಗೊಳಿಸಬೇಕು. ಯಾರ ಪ್ರಭಾವಕ್ಕೂ ಮಣಿಯದೆ ಆರೋಪಿಗಳ ಹೆಡೆಮುರಿ ಕಟ್ಟಬೇಕು ಎಂದು ಆರೋಪಿಗಳನ್ನು ಹೆಡೆಮುರಿ ಕಟ್ಟುವ ಆಗ್ರಹಿಸಿದರು.

ಅರ್ಚಕರಿಗೆ ಭದ್ರತೆ ಒದಗಿಸಿ: ಜಿಲ್ಲೆಯಾದ್ಯಂತ ಇರುವ ದೇವಾಲಯಗಳಲ್ಲಿ ನೂರಾರು ಬ್ರಾಹ್ಮಣರು ಅರ್ಚಕರಾಗಿ ದೇವರ ಸೇವೆ ಸಲ್ಲಿಸುತ್ತಿದ್ದಾರೆ. ಬಹುತೇಕರು ಗ್ರಾಮದ ಒಂಟಿ ಮನೆಗಳಲ್ಲಿ ವಾಸ ಮಾಡುತ್ತಾ ಪೂಜಾ ಕೈಂಕರ್ಯ ನಡೆಸುತ್ತಿದ್ದಾರೆ. ಕಟ್ಟೆಮಾಡು ದೇವಾಲಯದ ಅರ್ಚಕ ವಿಘ್ನೇಶ್ ಭಟ್ ಮೇಲಿನ ಹಲ್ಲೆಯಿಂದ ಜಿಲ್ಲೆಯ ಅರ್ಚಕ ಸಮುದಾಯಕ್ಕೆ ನೋವು ಉಂಟಾಗಿದೆ. ಹೀಗಾಗಿ ಜಿಲ್ಲೆಯಾದ್ಯಂತ ದೇವಾಲಯಗಳ ಅರ್ಚಕರಿಗೆ ಸೂಕ್ತ ಭದ್ರತೆ ಕಲ್ಪಿಸುವಲ್ಲಿ ಪೊಲೀಸ್ ವರಿಷ್ಠಾಧಿಕಾರಿಗಳು ಆಯಾ ದೇವಾಲಯಗಳ ವ್ಯಾಪ್ತಿಯ ಪೊಲೀಸ್ ಠಾಣಾಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಮನವಿ ಮಾಡಿದರು.

ಒತ್ತಡಕ್ಕೆ ಮಣಿಯಲ್ಲ: ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಆರೋಪಿಗಳ ಪತ್ತೆಗೆ ಈಗಾಗಲೇ ಪೊಲೀಸ್ ತಂಡ ಕಾರ್ಯ ಪ್ರವೃತ್ತವಾಗಿದೆ. ಯಾವುದೇ ಪ್ರಭಾವಕ್ಕೂ ಮಣಿಯದೆ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ಶೀಘ್ರ ಆರೋಪಿಗಳನ್ನು ಬಂಧಿಸಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭ ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿಯ ಕೊಡಗು ಅಧ್ಯಕ್ಷ ರಾಮಚಂದ್ರ ಮೂಗೂರು, ಪ್ರಮುಖರಾದ ಶ್ರೀಧರ್ ನೆಲ್ಲಿತ್ತಾಯ, ಜಿ.ಟಿ.ರಾಘವೇಂದ್ರ ಬಿ.ಜಿ. ಅನಂತಶಯನ, ಎಸ್.ಎಸ್.ಸಂಪತ್ ಕುಮಾರ್, ವಕೀಲ ಕೃಷ್ಣಮೂರ್ತಿ, ಪ್ರಭಾಕರ್ ನೆಲ್ಲಿತ್ತಾಯ, ಡಾ.ರಾಜಾರಾಂ, ರಾಜಶೇಖರ್, ನಿರ್ದೇಶಕ ಮಂಜುನಾಥ್, ಕೆ.ಕೆ.ವಿಶ್ವನಾಥ್, ಎ.ಗೋಪಾಲಕೃಷ್ಣ, ಅರ್ಚಕರ ಸಂಘದ ಪ್ರಮುಖ ಮಹಾಬಲೇಶ್ವರ ಭಟ್, ರಾಮಕೃಷ್ಣ, ಸುದರ್ಶನ್, ಪವನ್, ಕೊಡಗು ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಘವೇಂದ್ರ ವೈಲಾಯ, ನಿವೃತ್ತ ಮೇಜರ್ ವೆಂಕಟಗಿರಿ, ಹೆಚ್.ಎಸ್.ತಿಮ್ಮಪ್ಪಯ್ಯ, ಹಾ.ತಿ.ಜಯಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಆರೋಪಿಗಳ ಬಂಧನಕ್ಕೆ 3 ವಿಶೇಷ ತಂಡ ರಚನೆ


ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾತನಾಡಿದರು.

ಮಡಿಕೇರಿ, ಜ.28– ಕಟ್ಟೆಮಾಡು ಮಹಾಮೃತ್ಯುಂಜಯ ದೇವಸ್ಥಾನ ಪ್ರಧಾನ ಅರ್ಚಕನ ಮೇಲೆ ಹಲ್ಲೆ ನಡೆಸಿರುವ ಆರೋಪಿಗಳ ಬಂಧನಕ್ಕೆ ಕೊಡಗು ಜಿಲ್ಲಾ ಪೊಲೀಸ್ 3 ವಿಶೇಷ ತಂಡಗಳನ್ನು ರಚಿಸಿದ್ದು, ಶೀಘ್ರ ದುಷ್ಕೃತ್ಯ ಎಸಗಿದವರನ್ನು ಬಂಧಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಟ್ಟೆಮಾಡು ದೇವಸ್ಥಾನ ಸಂಬಂಧಿಸಿದಂತೆ ಎರಡು ಸಮುದಾಯಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ಸಂಧಾನ ಮೂಲಕ ಬಗೆಹರಿಸುವ ಪ್ರಯತ್ನ ನಡೆದಿದೆ. ಇದನ್ನೇ ಬಳಸಿಕೊಂಡು ಅಶಾಂತಿ ಮೂಡಿಸುವ ಪ್ರಯತ್ನವನ್ನು ಯಾರೂ ಮಾಡಬಾರದು. ಪ್ರಧಾನ ಅರ್ಚಕನ ಮನೆಗೆ ಸೋಮವಾರ ಸಂಜೆ ತೆರಳಿದ ಇಬ್ಬರು ಅವರ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಬಗ್ಗೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದು ಮಾಹಿತಿ ನೀಡಿದರು.

ಕಟ್ಟೆಮಾಡು ಪ್ರಕರಣವನ್ನು ಬಳಸಿಕೊಂಡು ದುಷ್ಕರ್ಮಿಗಳು ಸಮಾಜದಲ್ಲಿ ಅಶಾಂತಿ ಮೂಡಿಸುವ ಪ್ರಯತ್ನಗಳಿಗೆ ಮುಂದಾದಲ್ಲಿ ಅವರನ್ನು ಕ್ರಿಮಿನಲ್‌ಗಳು ಎಂದು ಪರಿಗಣಿಸಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಸ್‌ಪಿ ಎಚ್ಚರಿಸಿದರು.

ಪ್ರತಿಭಟನೆ ಎಲ್ಲರ ಹಕ್ಕು: ದೇವಸ್ಥಾನ ಸಂಬಂಧಿಸಿದಂತೆ ಒಂದು ಸಮುದಾಯದವರು ಈಗಾಗಲೇ ಪ್ರತಿಭಟನೆ ನಡೆಸಿದ್ದಾರೆ. ಮತ್ತೊಂದು ಸಮುದಾಯದವರು ಫೆ.2ರಿಂದ ಜಾಥಾ ನಡೆಸುತ್ತಿದ್ದಾರೆ. ಪ್ರತಿಭಟನೆ ಎನ್ನುವುದು ಪ್ರತಿಯೊಬ್ಬರ ಹಕ್ಕು. ಅವರವರ ಭಾವನೆಗಳನ್ನು ವ್ಯಕ್ತಪಡಿಸಲು ನಾಲ್ಕೈದು ಮಂದಿ ಇದ್ದರೂ ಅಂತಹವರಿಗೆ ಪ್ರತಿಭಟನೆ ಅವಕಾಶ ನೀಡಲಾಗುವುದು. ಅದೇ ರೀತಿ ಮತ್ತೊಂದು ಜನಾಂಗದವರು ಜಾಥಾವನ್ನು ಶಾಂತಿಯುತವಾಗಿ ನಡೆಸಬೇಕೆಂದು ತಿಳಿಸಿದರು.

ಪ್ರತಿಭಟನೆ, ಜಾಥಾ ಸಂದರ್ಭ ನೂರಾರು ಮಂದಿ ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಬೇಕಾಗುವುದು. ಇದರಿಂದ ವಿವಿಧ ಅಪರಾಧ ಪ್ರಕರಣಗಳ ಪತ್ತೆ ಮಾಡುವ ಕಾರ್ಯ ವಿಳಂಬವಾಗುತ್ತದೆ ಎಂದರು. ಈ ಸಂದರ್ಭ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ನಗರ ವೃತ್ತ ನಿರೀಕ್ಷಕ ಪಿ.ಕೆ.ರಾಜು ಉಪಸ್ಥಿತರಿದ್ದರು.

ಅರ್ಚಕರ ಆರೋಗ್ಯ ವಿಚಾರಿಸಿದ ಶಾಸಕ ಮಂತರ್‌ಗೌಡ

ಮಡಿಕೇರಿ, ಜ.28– ಹಲ್ಲೆಗೆ ಒಳಗಾಗಿ ನಗರದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಟ್ಟೆಮಾಡು ಶ್ರೀ ಮಹಾಮೃತ್ಯುಂಜಯ ದೇವಾಲಯ ಪ್ರಧಾನ ಅರ್ಚಕ ವಿಘ್ನೇಶ್ ಭಟ್ ಅವರನ್ನು ಶಾಸಕ ಡಾ.ಮಂತರ್‌ಗೌಡ ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಘಟನೆ ಬಗ್ಗೆ ಮಾಹಿತಿ ಪಡೆದ ಶಾಸಕರು, ಶೀಘ್ರ ಗುಣಮುಖರಾಗುವಂತೆ ಆಶಿಸಿದರು. ಸ್ಥಳದಲ್ಲಿದ್ದ ವೈದ್ಯರಿಂದ ಮಾಹಿತಿ ಪಡೆದು ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿದರು. ಪ್ರಕರಣದ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದು, ಆರೋಪಿಗಳನ್ನು ಬಂಧಿಸಿ ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದರು.


ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪ್ರಧಾನ ಅರ್ಚಕ ವಿಘ್ನೇಶ್ ಭಟ್ ಅವರ ಆರೋಗ್ಯ ವಿಚಾರಿಸಿದ ಶಾಸಕ ಡಾ.ಮಂತರ್‌ಗೌಡ.

ವೃದ್ಧೆ ಕೊಲೆಗೈದವನಿಗೆ ಜೀವಾವಧಿ ಶಿಕ್ಷೆ

ಮಡಿಕೇರಿ, ಜ.28–ಒಂಟಿ ಮನೆಯಲ್ಲಿ ವಾಸವಿದ್ದ ವೃದ್ಧೆಯನ್ನು ಕೊಲೆ ಮಾಡಿ ಚಿನ್ನಾಭರಣ ಮತ್ತು ನಗದು ದೋಚಿದ್ದವನಿಗೆ ಮಡಿಕೇರಿ 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ಮತ್ತು 45 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.



ನಗರದ ಹೊರವಲಯದ ಪ್ರತಿಷ್ಠಿತ ರೆಸಾರ್ಟ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಮೂಡಬಿದ್ರೆಯ ಅನಿಲ್ (35) ಶಿಕ್ಷೆಗೆ ಗುರಿಯಾದವನು. ಈತ ಕೆ.ನಿಡುಗಣೆ ಗ್ರಾಮದ ರೆಸಾರ್ಟ್‌ವೊಂದರ ಹಿಂಭಾಗದ ಒಂಟಿ ಮನೆಯಲ್ಲಿ ವಾಸವಿದ್ದ ಬಿ.ಪಿ.ಲಲಿತಾ (70) ವೃದ್ಧೆಯನ್ನು 2021ರ ಫೆ.22ರಂದು ತಲೆಗೆ ರಾಡ್‌ನಿಂದ ಒಡೆದು ಕೊಲೆ ಮಾಡಿದ್ದ. ಈ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಪೊಲೀಸರು 2021ರ ಮಾರ್ಚ್ 23ರಂದು ಆರೋಪಿಯನ್ನು ಮೂಡಬಿದ್ರೆಯಲ್ಲಿ ಬಂಧಿಸಿದ್ದರು. ತನಿಖೆ ಪೂರ್ಣಗೊಳಿಸಿದ ಬಳಿಕ 2021ರ ಮೇ 29ರಂದು ಮಡಿಕೇರಿಯ 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಜಿ.ಪ್ರಶಾಂತಿ ಕೊಲೆ ಮಾಡಿದ ಅನಿಲ್‌ಗೆ ಜೀವಾವಧಿ ಶಿಕ್ಷೆ ಮತ್ತು 45 ಸಾವಿರ ರೂ. ದಂಡ ವಿಧಿಸಿದ್ದಾರೆ. ಸರ್ಕಾರಿ ಅಭಿಯೋಜಕ ಎನ್.ಪಿ.ದೇವೇಂದ್ರವಾದ ಮಂಡಿಸಿದ್ದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಜನ್ಮದಿನಾಚರಣೆ

ಮಡಿಕೇರಿ, ಜ.28– ನಗರದ ರೋಶನಾರದಲ್ಲಿರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಸಮಾಧಿ ಸ್ಥಳದಲ್ಲಿ ಕಾರ್ಯಪ್ಪ ಅವರ 126ನೇ ವರ್ಷದ ಜನ್ಮದಿನ ಆಚರಿಸಲಾಯಿತು.


ಮಡಿಕೇರಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಸಮಾಧಿಗೆ ಕಾರ್ಯಪ್ಪ ಅವರ ಕುಟುಂಬದವರು ಪುಷ್ಪಾರ್ಚನೆ ಮಾಡಿದರು.

ಕಾರ್ಯಪ್ಪ ಅವರ ಪುತ್ರ ನಿವೃತ್ತ ಏರ್ ಮಾರ್ಷಲ್ ನಂದಾ ಕಾರ್ಯಪ್ಪ, ಸೊಸೆ ಮೀನಾ ಕಾರ್ಯಪ್ಪ, ಪುತ್ರಿ ನಳಿನಿ ಕಾರ್ಯಪ್ಪ, ನಿವೃತ್ತ ಕರ್ನಲ್ ಬಿ.ಜಿ.ವಿ.ಕುಮಾರ್, ಕೊಡಗು ವಿದ್ಯಾಲಯ ಆಡಳಿತ ಮಂಡಳಿ ನಿರ್ದೇಶಕ ಸಿ.ಎಸ್.ಗುರುದತ್, ಪ್ರಾಂಶುಪಾಲೆ ಸುಮಿತ್ರಾ, ಆಡಳಿತಾಧಿಕಾರಿ ರವಿ, ಶಾಲಾ ಶಿಕ್ಷಕಿಯರು, ವಿದ್ಯಾರ್ಥಿಗಳು, ಎನ್‌ಸಿಸಿ ಕೆಡೆಟ್‌ಗಳು, ಪೊಲೀಸರು ಸೇರಿದಂತೆ ಗಣ್ಯರು ಕಾರ್ಯಪ್ಪ ಅವರ ಸಮಾಧಿಗೆ ಪುಷ್ಪಾರ್ಚನೆ ಮಾಡಿದರು.

ಈ ಸಂದರ್ಭ ಮಾತನಾಡಿದ ನಿವೃತ್ತ ಏರ್ ಮಾರ್ಷಲ್ ನಂದಾ ಕಾರ್ಯಪ್ಪ, ತನ್ನ ತಂದೆಗೆ ದೇಶವೇ ಮೊದಲಾಗಿತ್ತು ಕುಟುಂಬ, ಗೆಳೆಯರು ನಂತರದ ಸ್ಥಾನದಲ್ಲಿದ್ದರು. ಅವರು ಸೇನಾ ಜೀವನದಲ್ಲಿ ತೋರಿದ ಪ್ರಾಮಾಣಿಕತೆ, ಶಿಸ್ತಿನ ಗುಣಗಳೇ ಪ್ರತಿಯೊಬ್ಬ ಭಾರತೀಯನಿಗೂ ಮಾರ್ಗದರ್ಶಿಯಾಗಿದೆ. ಉತ್ತಮ ಮನುಷ್ಯನಾಗಿ ಜೀವಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಗಮನ ಕೇಂದ್ರೀಕರಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಬೊಳ್ಳೂರಲ್ಲಿ ವಿವಾಹಿತ ಯುವಕ ಆತ್ಮಹತ್ಯೆ

ಕುಶಾಲನಗರ, ಜ.28–ಕಳೆದ 8 ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದ ಯುವಕ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೊಳ್ಳೂರು ಗ್ರಾಮದಲ್ಲಿ ಮಂಗಳವಾರ ನಡೆದಿದೆ.



ಗ್ರಾಮದ ಯತೀಶ್ (33) ಆತ್ಮಹತ್ಯೆ ಮಾಡಿಕೊಂಡಿದ್ದು, ಈತನ ಸಾವಿಗೆ ಕಾರಣ ತಿಳಿದು ಬಂದಿಲ್ಲ. ಬೆಳಗ್ಗೆ ಸುಮಾರು 8 ಗಂಟೆಯಲ್ಲಿ ಮನೆಯಲ್ಲಿ ಯಾರು ಇಲ್ಲದ ಸಂದರ್ಭ ತಾನು ಮಲಗುವ ಕೋಣೆಯ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ತೆಪ್ಪದಕಂಡಿ ಸಮೀಪದ ರೆಸಾರ್ಟ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಈತ ತನ್ನ ಅಕ್ಕನ ಮಗಳನ್ನೇ ಕಳೆದ 8 ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದ. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಳಂದೂರಲ್ಲಿ ನೂತನ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಚಾಲನೆ


ಯಳಂದೂರಿನಲ್ಲಿ ನೂತನ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು.

ಯಳಂದೂರು, ಜ.28–ಪಟ್ಟಣದಲ್ಲಿ ನೂತನ 100 ಹಾಸಿಗೆಗಳ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ಯಳಂದೂರು ತಾಲೂಕು ಹಿಂದೆ ವಿಧಾನ ಸಭಾ ಕ್ಷೇತ್ರವಾಗಿತ್ತು. ಇಲ್ಲಿ ನಮ್ಮ ತಂದೆ ಬಿ.ರಾಚಯ್ಯ ಗೆದ್ದಿದ್ದರು. ಅಲ್ಲಿಂದ ಈ ತಾಲೂಕಿನ ಬಗ್ಗೆ ನನಗೆ ವಿಶೇಷ ಅಭಿಮಾನವಿದೆ. ಹಾಗಾಗಿ ಇಲ್ಲಿಗೆ 100 ಹಾಸಿಗೆಗಳ ಆಸ್ಪತ್ರೆ ಬೇಡಿಕೆ ಇತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಮನವಿ ಮಾಡಿದ್ದೆ. ಇದಕ್ಕೆ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಅನುದಾನ ಘೋಷಿಸಿ ಅನುಮೋದನೆ ನೀಡಿದ್ದರು ಎಂದರು.

ತಾಲೂಕಿನಲ್ಲಿ ಮಣ್ಣು ಪರೀಕ್ಷೆ ಹಾಗೂ ಇತರೆ ತಾಂತ್ರಿಕ ಕೆಲಸಗಳು ಬಾಕಿ ಇತ್ತು. ಜಿಲ್ಲಾಧಿಕಾರಿ ನಾನು ಹಾಗೂ ಸಂಬಂಧಪಟ್ಟ ಇಂಜಿನಿಯರ್‌ಗಳು ಸಭೆ ನಡೆಸಿ, ಸ್ಥಳ ಪರಿಶೀಲನೆ ನಡೆಸಿ ಕಾಮಗಾರಿ ಆರಂಭಿಸಲು ಸಲಹೆ ನೀಡಿದ್ದೆ. ಕಾಮಗಾರಿ ಆರಂಭಗೊಂಡಿದೆ. ಯಳಂದೂರಿನಲ್ಲಿ 35 ಕೋಟಿ ರೂ. ವೆಚ್ಚದಲ್ಲಿ 100 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ ನಿರ್ಮಾಣವಾದರೆ ಚಾಮರಾಜನಗರ ಮತ್ತು ಮೈಸೂರಿಗೆ ತೆರಳುವವರ ಸಂಖ್ಯೆ ಕಡಿಮೆಯಾಗಲಿದೆ ಎಂದು ತಿಳಿಸಿದರು.

ಸಂಬಂಧಪಟ್ಟ ಗುತ್ತಿಗೆದಾರರಿಗೆ 18 ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸಲು ಅವಕಾಶ ನೀಡಲಾಗಿದೆ. ಇಲಾಖೆ ತಂತ್ರಜ್ಞರ ತಂಡ ಇದರ ಬಗ್ಗೆ ನಿಗಾ ವಹಿಸಿ ಗುಣಮಟ್ಟದ ಕಾಮಗಾರಿ ಮಾಡುವಂತೆ ನೋಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಜಿಲ್ಲಾಧಿಕಾರಿ ಶಿಲ್ಪನಾಗ್, ಉಪವಿಭಾಗಾಧಿಕಾರಿ ಮಹೇಶ್, ತಹಸೀಲ್ದಾರ್ ಜಯಪ್ರಕಾಶ್, ತಾಪಂ ಇಓ ಉಮೇಶ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್, ತಾಲೂಕು ವೈದ್ಯಾಧಿಕಾರಿ ಡಾ.ಶ್ರೀಧರ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಚಾ.ನಗರದಲ್ಲಿ ಕಳವಾಗಿದ್ದ ಬಸ್ ಅತ್ತಿಬೆಲೆಯಲ್ಲಿ ಪತ್ತೆ

ಚಾಮರಾಜನಗರ, ಜ.28– ನಗರದ ಎಲ್‌ಐಸಿ ವೃತ್ತದ ಬಳಿ ರಸ್ತೆಬದಿ ನಿಲ್ಲಿಸಿದ್ದ ಖಾಸಗಿ ಬಸ್ ಸೋಮವಾರ ಮಧ್ಯರಾತ್ರಿ ಕಳ್ಳತನವಾಗಿದ್ದು, ಮಂಗಳವಾರ ಮಧ್ಯಾಹ್ನ ಬೆಂಗಳೂರಿನ ಅತ್ತಿಬೆಲೆ ಟೋಲ್‌ನಲ್ಲಿ ಪತ್ತೆಯಾಗಿದೆ.



ನಗರದ ಸೋಮನಾಯಕ ಅವರಿಗೆ ಸೇರಿದ ವಜ್ರ ಹೆಸರಿನ ಬಸ್ ಹರವೆ, ಮಲೆಯೂರಿಗೆ ಪ್ರತಿದಿನ ಸಂಚರಿಸುತ್ತಿತ್ತು. ಎಂದಿನಂತೆ ಲೈನ್ ಮುಗಿಸಿಕೊಂಡು ಚಾಲಕ ಸೋಮವಾರ ರಾತ್ರಿ ಬಸ್ ಅನ್ನು ನಗರದ ಎಲ್‌ಐಸಿ ವೃತ್ತದ ಬಳಿ ನಿಲ್ಲಿಸಿ ತೆರಳಿದ್ದರು. ಆದರೆ, ಮಧ್ಯರಾತ್ರಿ ಅಪರಿಚಿತ ಬಂದು ಬಸ್‌ನ ಸುತ್ತಮುತ್ತ ನೋಡಿದ್ದಾನೆ. ನಂತರ ಬಸ್ ಅನ್ನು ಕೊಳ್ಳೇಗಾಲ, ಕನಕಪುರ ಮಾರ್ಗವಾಗಿ ಬೆಂಗಳೂರಿಗೆ ಸುಮಾರು 250 ಕಿ.ಮೀ. ದೂರ ಬಸ್ ಚಾಲನೆ ಮಾಡಿಕೊಂಡು ಹೋಗಿದ್ದಾನೆ. ಬಳಿಕ ಅಲ್ಲಿಂದ ಅತ್ತಿಬೆಲೆ ಟೋಲ್ ಮೂಲಕ ತಮಿಳುನಾಡಿಗೆ ಹೋಗುತ್ತಿದ್ದಾಗ ಟೋಲ್‌ನ ಟಿಕೆಟ್ ತೆಗೆದುಕೊಳ್ಳಲು ಹಣವಿಲ್ಲದೆ ಟೋಲ್ ದಾಟಲು ಸಾಧ್ಯವಾಗಿಲ್ಲ. ಈ ವೇಳೆ ಟೋಲ್‌ನಲ್ಲಿದ್ದ ಸಿಬ್ಬಂದಿ ಹೊರಬಂದು ಆತನನ್ನು ವಿಚಾರಿಸಿದಾಗ ಆತ ತಮಿಳುನಾಡು ಮೂಲದವನು ಎಂದು ತಿಳಿಸಿ, ಬಸ್ ಅನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾನೆ.

ಸೋಮವಾರ ಬೆಳಗ್ಗೆ ಬಸ್ ನಿಲ್ಲಿಸಿದ್ದ ಸ್ಥಳಕ್ಕೆ ಬಸ್ ಚಾಲಕ, ನಿರ್ವಾಹಕರು ಬಂದು ನೋಡಿದಾಗ ಬಸ್ ಇಲ್ಲದಿರುವುದನ್ನು ಗಮನಿಸಿ, ಹತ್ತಿರದ ಅಂಗಡಿಗಳ ಸಿಸಿ ಕ್ಯಾಮರಾಗಳನ್ನು ಪರಿಶೀಲಿಸಿದಾಗ ಬಸ್ ಕಳ್ಳತನವಾಗಿರುವುದು ಖಾತರಿಯಾಗಿದೆ. ಕೂಡಲೇ ಅವರು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಬಳಿಕ ಬಸ್ ಅತ್ತಿಬೆಲೆ ಟೋಲ್ ಬಳಿ ಪತ್ತೆಯಾಗಿರುವುದು ತಿಳಿದಿದೆ.

ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ರೈತರ ಪ್ರತಿಭಟನೆ

ಕಂಪನಿಗಳ ಹಾವಳಿ ತಡೆಗಟ್ಟಗೆ ರಾಜ್ಯ ಕಬ್ಬು ಬೆಳೆಗಾರ ಸಂಘ ಕಾರ್ಯಕರ್ತರ ಆಗ್ರಹ



ಮೈಕ್ರೋ ಫೈನಾನ್ಸ್ ಕಂಪನಿಗಳ ವಿರುದ್ಧ ರಾಜ್ಯ ಕಬ್ಬು ಬೆಳೆಗಾರ ಸಂಘದ ಕಾರ್ಯಕರ್ತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜ.28–ಜಿಲ್ಲೆಯಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳ ಹಾವಳಿ ತಡೆಗಟ್ಟಬೇಕು ಎಂದು ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರ ಸಂಘದ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು, ಸರ್ಕಾರ ಹಾಗೂ ಮೈಕ್ರೋ ಫೈನಾನ್ಸ್ ಕಂಪನಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಸಾಲ ವಸೂಲಾತಿ ಮಾಡುವಾಗ ಕಂಪನಿಯವರು ನಿಯಮ ಪಾಲಿಸುತ್ತಿಲ್ಲ. ಮಾನ ಹಾನಿ, ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿರುವುದರಿಂದ ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಹಾವಳಿ ಹೆಚ್ಚಿದ್ದು, ರೈತರು, ಮಹಿಳೆಯರು, ಯುವಕರು ಆತ್ಮಹತ್ಯೆ ಹಾದಿ ಹಿಡಿಯುತ್ತಿದ್ದಾರೆ ಎಂದು ದೂರಿದರು.

ವಸೂಲಾತಿಗೆ ಬರುವ ಕಂಪನಿ ಏಜೆಂಟರ್‌ಗಳು ಪೊಲೀಸ್ ಠಾಣೆಯಿಂದ ಯಾವುದೇ ರಹದಾರಿ ಪಡೆದಿರುವುದಿಲ್ಲ. ಇಂತಹ ವಸೂಲಾತಿದಾರರ ನೋಂದಣಿ ಮತ್ತು ಹಿನ್ನೆಲೆ ಯಾವುದೇ ಠಾಣೆಯಲ್ಲಿ ಗುರುತಿನ ಚೀಟಿ ಸಹ ಇರುವುದಿಲ್ಲ. ಇವರು ಮನಬಂದಂತೆ ವಸೂಲಾತಿಗೆ ಇಳಿಯುತ್ತಾರೆ. ಆರ್‌ಬಿಐ ನಿಯಮ ಪಾಲಿಸುವುದಿಲ್ಲ. ಸರ್ಕಾರ ಹೇಳಿಕೆ ನೀಡಿರುವುದು ಕೇವಲ ಪ್ರಕಟಣೆಯಾಗಿ ಮಾತ್ರ ಉಳಿದಿದೆ ಎಂದು ಆರೋಪಿಸಿದರು.

ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ಎರಡು ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಆದ್ದರಿಂದ ಕೇಂದ್ರ ಸಚಿವರು, ಸಂಸದರು ಈ ಬಗ್ಗೆ ಕೇಂದ್ರ ಸರ್ಕಾರದ ಹಣಕಾಸು ಸಚಿವರ ಜೊತೆ ಚರ್ಚಿಸಿ ಮೈಕ್ರೋ ಫೈನಾನ್ಸ್‌ಗಳ ಮಿತಿಮೀರಿದ ವರ್ತನೆಗೆ ಕಡಿವಾಣ ಹಾಕಬೇಕು. ವಸೂಲಾತಿಗೆ ಸ್ಪಷ್ಟವಾದ ನಿಯಮ ಮಾಡಬೇಕು. ಒಬ್ಬ ವ್ಯಕ್ತಿಗೆ ನಾಲ್ಕೈದು ಕಂಪನಿಗಳಿಂದ ಸಾಲ ನೀಡುವುದು ನಿಲ್ಲಬೇಕು. ತಕ್ಷಣ ರಾಜ್ಯ ಮತ್ತು ಕೇಂದ್ರ ಸರ್ಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸುಗ್ರೀವಾಜ್ಞೆ ಮೂಲಕ ಕಠಿಣ ನಿಯಮ ಪಾಲಿಸಬೇಕು ಎಂದು ಒತ್ತಾಯಿಸಿದರು.

ಇಲ್ಲವಾದರೆ ರೈತ ಸಂಘಟನೆಗಳು ಜಾಗೃತರಾಗಿ ಮೈಕ್ರೋ ಫೈನಾನ್ಸ್ ಕಂಪನಿಗಳನ್ನು ಧ್ವಂಸ ಹಾಗೂ ಬೀಗ ಜಡಿಯುವ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಮಲಿಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಚಿನ್ನ ಬಿಡಿಸಿ ಕೊಡುವಲ್ಲಿ ಜಿಲ್ಲಾಡಳಿತಕ್ಕೆ ಇರುವ ಕಾನೂನು ತೊಡಕುಗಳನ್ನು ಸರಿಪಡಿಸಿ ತಕ್ಷಣ ರೈತರಿಗೆ ಚಿನ್ನವನ್ನು ಮರಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮಲೆಯೂರು ಹರ್ಷ, ಮಹೇಂದ್ರ, ಮಂಜುನಾಥ್, ಮಹೇಶ್, ಗುರುಮಲ್ಲಪ್ಪ, ಜನ್ನೂರ್ ಶಾಂತರಾಜ್, ಬಸವರಾಜಪ್ಪ ರಾಮಣ್ಣ, ಗುರು, ಸೋಮಪ್ಪ ಸದಾನಂದ, ಮಹೇಶ್, ದೇವಪ್ಪ, ಚಂದ್ರಮೋಹನ್, ಪುಟ್ಟಮಲ್ಲೇಗೌಡ, ಜಗದಾಂಬಿಕಾ, ಗಿರಿಜಾ, ಲಕ್ಷ್ಮಮ್ಮ, ಮಂಜು, ಬಾಬು ಹಾಜರಿದ್ದರು.

ಚಾಮುಲ್ ಅಧ್ಯಕ್ಷನಾಗಿ ಉತ್ತಮ ಸೇವೆ ಸಲ್ಲಿಸಿದ ತೃಪ್ತಿ

ಚಾಮರಾಜನಗರ, ಜ.28–ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷನಾಗಿ ಎರಡು ವರ್ಷದ ಅವಧಿಯಲ್ಲಿ ಉತ್ತಮ ಕೆಲಸ ಮಾಡಿದ್ದೇನೆ. ನನಗೆ ಸಹಕರಿಸಿದ ಬಿಜೆಪಿ ಮುಖಂಡರು, ಚಾಮುಲ್ ಅಧಿಕಾರಿ ವರ್ಗದವರನ್ನು ಅಭಿನಂದಿಸುವುದಾಗಿ ಚಾಮುಲ್ ಮಾಜಿ ಅಧ್ಯಕ್ಷ ವೈ.ಸಿ.ನಾಗೇಂದ್ರ ಹೇಳಿದರು.


ವೈ.ಸಿ.ನಾಗೇಂದ್ರ

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ವರ್ಷದ ಹಿಂದೆ ಚಾಮುಲ್ ಅಧ್ಯಕ್ಷರ ಆಯ್ಕೆ ಚುನಾವಣೆ ನಡೆಯಿತು. ಅಂದು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ.ಸೋಮಣ್ಣ ಅವರು ನನಗೆ ಹಾಗೂ ನಿರ್ದೇಶಕ ಹೆಚ್.ಎಸ್. ಬಸವರಾಜು ಅವರಿಗೆ ತಲಾ ಎರಡೂವರೆ ವರ್ಷ ಅಧಿಕಾರ ಹಂಚಿಕೆ ಮಾಡಿದ್ದರು. ನಾನು ಆ ಸಂದರ್ಭದಲ್ಲಿ ಅಧ್ಯಕ್ಷನಾಗಿ ಆಯ್ಕೆಯಾದೆ. ಅಂದಿನಿಂದ ಇಂದಿನವರೆಗೂ ಪಕ್ಷದ ವರಿಷ್ಠರು, ಅಧಿಕಾರಿಗಳು ಸಹಕಾರ ನೀಡಿದರು ಎಂದರು.

ರಾಜ್ಯದ ಇತರೇ ಹಾಲು ಒಕ್ಕೂಟಗಳಿಗೆ ಹೋಲಿಸಿದರೆ ಚಾಮುಲ್‌ನಲ್ಲಿ ಹಾಲು ಹಾಕುವ ರೈತರಿಗೆ ಅತಿ ಕಡಿಮೆ ದರ ನೀಡಲಾಗುತ್ತಿದೆ. ಹಾಲು ಮಾರಾಟ ಸಹ ಕಡಿಮೆ ಇದ್ದು, ನಮ್ಮ ಪ್ರಯತ್ನದ ಫಲವಾಗಿ ಇದೀಗ 45 ರಿಂದ 65 ಸಾವಿರ ಹಾಲು ಮಾರಾಟವಾಗುತ್ತಿದೆ. ಸರ್ಕಾರದಿಂದ ಚಾಮುಲ್ ಅಭಿವೃದ್ಧಿಗೆ 80 ಕೋಟಿ ರೂ. ಅನುದಾನ ಬಿಡುಗಡೆಯಾಗಬೇಕಿತ್ತು. ಆದರೆ, ಈವರೆಗೆ ಬಿಡುಗಡೆಯಾಗಿಲ್ಲ ಎಂದು ತಿಳಿಸಿದರು.

ಪಶು ಸಂಗೋಪನೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅವರು ಚಾಮರಾಜನಗರ ಹಾಲು ಒಕ್ಕೂಟದ ಕಚೇರಿ, ಡೇರಿಗೆ ಅದರ ಪ್ರಸ್ತುತ ವಹಿವಾಟಿಗೆ ಸಂಬಂಧಪಟ್ಟಂತೆ ಪರಾಮರ್ಶಿಸಲು ಈವರೆಗೂ ಸೌಜನ್ಯಕ್ಕಾದರೂ ಭೇಟಿ ನೀಡಿಲ್ಲ ಎಂದು ಆರೋಪಿಸಿದರು.

ಆಲಹಳ್ಳಿ ಡೇರಿ ಅಧ್ಯಕ್ಷರಾಗಿ ರೂಪಾ ಆಯ್ಕೆ



ಕೊಳ್ಳೇಗಾಲ, ಜ.28–ತಾಲೂಕಿನ ಆಲಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ರೂಪಾ ತೋಟೇಶ್ ಹಾಗೂ ಉಪಾಧ್ಯಕ್ಷರಾಗಿ ಮಲ್ಲಾಜಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಮದ ಬಿಎಂಸಿ ಕೇಂದ್ರದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರೂಪಾ ತೋಟೇಶ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮಲ್ಲಾಜಮ್ಮ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ನಾಗೇಶ್ ಅವಿರೋಧ ಆಯ್ಕೆ ಘೋಷಿಸಿದರು.

ಅಕ್ರಮವಾಗಿ ದಾಸ್ತಾನು ಮಾಡಿದ್ದ ಅಕ್ಕಿ ವಶ


ಹೊಂಡರಬಾಳು ಗ್ರಾಮದಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ ಪಡಿತರ ಅಕ್ಕಿಯನ್ನು ವಶಪಡಿಸಿಕೊಂಡಿರುವುದು.

ಕೊಳ್ಳೇಗಾಲ, ಜ.28–ತಾಲೂಕಿನ ಹೊಂಡರಬಾಳು ಗ್ರಾಮದಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ 406 ಕೆಜಿ ಪಡಿತರ ಅಕ್ಕಿಯನ್ನು ಆಹಾರ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ವಶಪಡಿಸಿಕೊಂಡಿದ್ದಾರೆ.


ಆರೋಪಿ ಎಜಾಜ್ ಪಾಷ ತಲೆಮರೆಸಿಕೊಂಡಿದ್ದಾನೆ. ಈತ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಡಿಮೆ ಬೆಲೆಗೆ ಖರೀದಿ ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಪಡಿತರ ಅಕ್ಕಿಯನ್ನು ದಾಸ್ತಾನು ಮಾಡಿದ್ದ. ದಾಳಿ ನಡೆಸಿದ ಅಧಿಕಾರಿಗಳು ಹಾಗೂ ಪೊಲೀಸರು 406 ಕೆಜಿ ಅಕ್ಕಿ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದಾಳಿಯಲ್ಲಿ ಎಸ್‌ಐ ಸುಪ್ರೀತ್, ಆಹಾರ ಇಲಾಖೆ ನಿರೀಕ್ಷಕ ಪ್ರಸಾದ್, ಸಿಬ್ಬಂದಿ ಭಾಗವಹಿಸಿದ್ದರು.

ಮೈಸೂರು ಮಿತ್ರ

ಬುಧವಾರ 29 ಜನವರಿ 2025

ಒಂದನೇ ಪುಟದಿಂದ

ನಿರಂತರ ರಕ್ಷಣಾ ಕಾರ್ಯಾಚರಣೆ



ಬದುಕಿ ಬಂದರೆ ಅಷ್ಟೇ ಸಾಕು. ಕಿಟಕಿ ತೆರವು ಮಾಡುತ್ತಿದ್ದೆವು. ಟೀ ಬಂದ ಕಾರಣಕ್ಕೆ ನಾವು ಇತ್ತ ಬಂದೆವು ಎಂದು ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಇನ್ನಿತರ ಕಾರ್ಮಿಕರು ನೊಂದು ನುಡಿದರು.

ರಾತ್ರಿಯಾಗುತ್ತಿದ್ದಂತೆ ಕತ್ತಲು ಆವರಿಸಿದ ಹಿನ್ನೆಲೆಯಲ್ಲಿ ಕಾರ್ಯಾಚರಣೆಗೆ ಅಡ್ಡಿ ಉಂಟಾಯಿತು. ಈ ಹಿನ್ನೆಲೆಯಲ್ಲಿ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಿಕೊಂಡು ಕಾರ್ಯಾಚರಣೆ ಮುಂದುವರೆಸಲಾಯಿತು. 6ಕ್ಕೂ ಹೆಚ್ಚು ಫೈಯರ್ ಇಂಜಿನ್ ವಾಹನಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದವು. ಅಲ್ಲದೆ, ಆಂಬುಲೆನ್ಸ್‌ಗಳ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು.

ಸದ್ದಾಂನ ಮೊಬೈಲ್ ರಿಂಗ್ ಆಗುತ್ತಿದ್ದು, ಕಟ್ಟಡದ ಅವ ಶೇಷಗಳಡಿ ಯಾವ ಭಾಗದಲ್ಲಿ ಸದ್ದಾಂ ಸಿಲುಕಿದ್ದಾನೆಂದು ನಿಖರವಾಗಿ ತಿಳಿಯಲು ಸಾಧ್ಯವಾಗಿಲ್ಲ. ಮೇಲ್ಛಾವಣಿ ಮಾತ್ರವಲ್ಲದೆ, ಗೋಡೆಗಳು ಬಿದ್ದಿರುವ ಕಾರಣ ಕಟ್ಟಡದ ಅವಶೇಷ ಭಾರೀ ಪ್ರಮಾಣದಲ್ಲಿ ಆವರಿಸಿಕೊಂಡಿದ್ದು, ಹೀಗಾಗಿ ಕಾರ್ಯಾಚರಣೆಯ ವೇಗಕ್ಕೆ ತಡೆಯೊಡ್ಡಿದೆ ಎಂದು ಸಿಬ್ಬಂದಿಯೊಬ್ಬರು ತಿಳಿಸಿದರು. ಸೂಕ್ಷ್ಮ ಕಟ್ಟಡವಾದ ಕಾರಣ ಜೆಸಿಬಿ, ಹಿಟಾಚಿಯಂತಹ ಯಂತ್ರೋಪಕರಣಗಳನ್ನು ಸಾರಾಗಿ ಬಳಕೆ ಮಾಡುವುದು ಕಷ್ಟಕರವಾಗಿದ್ದು, ಮುಂಜಾಗ್ರತಾ ಕ್ರಮ ವಾಗಿ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ತಾತ್ಕಾಲಿಕ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಿಕೊಂಡು ಕಾರ್ಯಾಚರಣೆ ಮುಂದುರೆಸಲಾಗಿದೆ. ಮೈಸೂರು ವಿಭಾಗದ ಮುಖ್ಯ ಅಗ್ನಿಶಾಮಕ ಅಧಿಕಾರಿ ಜಯ ರಾಮಯ್ಯ ನೇತೃತ್ವದಲ್ಲಿ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಗುರುರಾಜ್, ಪ್ರಾದೇಶಿಕ ಅಧಿಕಾರಿ ಚಂದನ್ ಸೇರಿದಂತೆ 70ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ. ಅಲ್ಲದೆ, ಚಾಮರಾಜನಗರ, ಕೊಡಗು, ಮಂಡ್ಯ, ಹಾಸನ ಜಿಲ್ಲೆಯ ಸುಮಾರು 10ಕ್ಕೂ ಹೆಚ್ಚು ಠಾಣೆಯ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಜಿಲ್ಲಾಡಳಿತ, ಮೈಸೂರು ಮಹಾ ನಗರ ಪಾಲಿಕೆ, ಪೊಲೀಸ್ ಇಲಾಖೆ ಸಹಕಾರದಲ್ಲಿ ಅಗ್ನಿಶಾಮಕ ಇಲಾಖೆ ಕಾರ್ಯಾಚರಣೆ ಮುಂದುವರೆಸಿದೆ. ಹ್ಯುಮೇನಿಟೇರಿಯನ್ ರಿಲೀಫ್ ಸೊಸೈಟಿ ತಂಡವೂ ಕಾರ್ಯಾಚರಣೆಯಲ್ಲಿ ಕೈಜೋಡಿಸಿದೆ. ರಾತ್ರಿ ವೇಳೆಗೆ ವಿಷಯ ತಿಳಿದು ಸ್ಥಳಕ್ಕೆ ಬಂದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟುತಿತ್ತು. ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಶಾಸಕರಾದ ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ಎಂಎಲ್‌ಸಿ ಕೆ.ವಿವೇಕಾನಂದ, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಸ್ಥಳಕ್ಕೆ ಭೇಟಿ ನೀಡಿದ್ದರು. ಲಕ್ಷ್ಮೀಪುರಂ ಠಾಣೆ ಇನ್ಸ್‌ಪೆಕ್ಟರ್ ರವಿಶಂಕರ್ ಸೇರಿದಂತೆ ಪೊಲೀಸ್ ಸಿಬ್ಬಂದಿ ಸ್ಥಳದಲ್ಲಿದ್ದರು.

ಕಟ್ಟಡ ಸದೃಢವಿಲ್ಲದ ಕಾರಣ ನೆಲಸಮಕ್ಕೆ ಚಾಲನೆ ನೀಡಲಾಗಿತ್ತು; ಶಾಸಕ ಕೆ.ಹರೀಶ್‌ಗೌಡ



ಮೈಸೂರು,ಜ.28(ಪಿಎಂ)– ನವೀಕರಣ ಮಾಡಬೇಕೆಂಬ ಚಿಂತನೆ ಇತ್ತು. ಕೆಹೆಚ್‌ಬಿ ಇಂಜಿನಿಯರ್‌ಗಳು ಸೇರಿದಂತೆ ನುರಿತ ಇಂಜಿನಿಯರ್‌ಗಳು ಪರೀಕ್ಷೆ ನಡೆಸಿ ಸದರಿ ಕಟ್ಟಡ ಅಷ್ಟು ಸದೃಢವಾಗಿಲ್ಲ. ನೆಲಸಮವೇ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಹಾಗಾಗಿ ನೆಲಸಮಕ್ಕೆ ಚಾಲನೆ ನೀಡಲಾಗಿತ್ತು ಎಂದು ಕೆ.ಹರೀಶ್‌ಗೌಡ ತಿಳಿಸಿದರು. ರಕ್ಷಣಾ ಕಾರ್ಯಾಚರಣೆ ವೇಳೆ ಸ್ಥಳದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಕಟ್ಟಡ ನೆಲಸಮಗೊಳಿಸಿ ಹೊಸದಾಗಿ ಕಟ್ಟಡ ನಿರ್ಮಾಣಕ್ಕೆ ಮುಖ್ಯಮಂತ್ರಿಗಳು ಗುದ್ದಲಿ ಪೂಜೆ ಮಾಡಿದ್ದರು. ಕಳೆದ ನಾಲ್ಕು ದಿನಗಳಿಂದ ನೆಲಸಮ ಸಂಬಂಧ ಕೆಲಸ ನಡೆಯುತ್ತಿತ್ತು. ಸೈನ್ಸ್ ಲ್ಯಾಬ್ ಉಪಕರಣ ಸೇರಿದಂತೆ ಇನ್ನಿತರ ಸಾಮಗ್ರಿಗಳನ್ನು ತೆರವು ಮಾಡಲಾಗುತ್ತಿತ್ತು ಎಂದರು. ನೆಲಸಮ ಸಂಬಂಧ ಕೆಲಸ ಮಾಡುತ್ತಿದ್ದಾಗ ತಾರಸಿ ಕುಸಿದು ಬಿದ್ದಿದೆ. ಮೂರು ವರ್ಷಗಳ ಹಿಂದೆ ಒಂದು ಭಾಗ ಸಹ ಕುಸಿದಿತ್ತು. ಹಾಗಾಗಿ ಅಲ್ಲಿ ಯಾವುದೇ ಚಟುವಟಿಕೆ ನಡೆಯುತ್ತಿರಲಿಲ್ಲ. ಅತ್ತ ಯಾರು ಸುಳಿಯುತ್ತಿರಲಿಲ್ಲ. ಈಗ ಹೊಸದಾಗಿ ಕಟ್ಟಡ ನಿರ್ಮಾಣ ಸಂಬಂಧ ಈಗಾಗಲೇ ಕಾರ್ಯಾದೇಶವಾಗಿತ್ತು. ಸ್ಟಾರ್ ಇನ್‌ಫ್ರಾಸ್ಟ್ರಕ್ಚರ್‌ನ ಚಂದ್ರು ಎಂಬ ಗುತ್ತಿಗೆದಾರರು ಕೆಲಸ ಶುರು ಮಾಡಿದ್ದರು. ನಾಲ್ಕು ದಿನಗಳಿಂದ ಕೆಲಸ ನಡೆಯುತ್ತಿತ್ತು ಎಂದು ತಿಳಿಸಿದರು. ಇಂದು 14 ಮಂದಿ ಕಾರ್ಮಿಕರು ಕೆಲಸ ಮಾಡುವಾಗ ತಾರಸಿ ಕುಸಿದಿದೆ. ಈ ವೇಳೆ 13 ಕಾರ್ಮಿಕರು ಪಾರಾಗಿದ್ದು, ಈ ಪೈಕಿ ಒಬ್ಬ ಮಾತ್ರ ಸಿಲುಕಿಗೊಂಡಿದ್ದಾನೆ. ರಕ್ಷಣಾ ಕಾರ್ಯಾಚರಣೆ ತ್ವರಿತವಾಗಿ ನಡೆಯುತ್ತಿದೆ. ಆ ವ್ಯಕ್ತಿ ಬದುಕಿ ಬರಲಿ ಎಂಬ ಆಶಯದಲ್ಲೇ ನಾವು ಇದ್ದೇವೆ ಎಂದರು.

ಲೋಪದೋಷ ಇದ್ದಲ್ಲಿ ಖಂಡಿತ ಕ್ರಮ; ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ



ಮೈಸೂರು,ಜ.28(ಪಿಎಂ)– ಯಾರದ್ದೇ ಲೋಪದೋಷ ಇದ್ದಲ್ಲಿ ಖಂಡಿತ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದರು. ರಕ್ಷಣಾ ಕಾರ್ಯಾಚರಣೆ ವೇಳೆ ಸ್ಥಳಕ್ಕೆ ಭೇಟಿ ನೀಡಿದ್ದ ಅವರು, ಮಾಧ್ಯಮದವರಿಗೆ ಪ್ರತಿಕ್ರಿಯಿಸಿ, ಈಗ ನಮ್ಮ ಮೊದಲ ಆದ್ಯತೆ ಕಾರ್ಮಿಕನ ರಕ್ಷಣೆಯಾಗಿದೆ. ಈ ದುರ್ಘಟನೆ ಯಾವ ರೀತಿ ನಡೆದಿದೆ. ಇದರಲ್ಲಿ ಯಾರ್‍ಯಾರ ವೈಫಲ್ಯವಿದೆ ಎನ್ನುವುದನ್ನು ಪರಿಶೀಲಿಸಲಾಗುವುದು. ಇಂಜಿನಿಯರ್‌ಗಳು ಅಥವಾ ಗುತ್ತಿಗೆದಾರರು ಸೇರಿದಂತೆ ಯಾರದೇ ಲೋಪದೋಷ ಇದ್ದರೂ ಖಂಡಿತ ಕ್ರಮ ಕೈಗೊಳ್ಳಲಾಗುವುದು ಎಂದರು. ಮಹಾರಾಣಿ ವಿಜ್ಞಾನ ಕಾಲೇಜಿಗೆ ಹೊಸ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಮಂಜೂರಾಗಿದ್ದು, ಶಿಥಿಲಗೊಂಡಿರುವ ಹಿನ್ನೆಲೆಯಲ್ಲಿ ಕಟ್ಟಡ ಸಂಪೂರ್ಣ ನೆಲಸಮ ಮಾಡಿ ಹೊಸ ಕಟ್ಟಡವನ್ನು ನಿರ್ಮಾಣ ಮಾಡುವ ಉದ್ದೇಶದಿಂದ ಕೆಲಸ ನಡೆಯುತ್ತಿತ್ತು. ಈ ವೇಳೆ ದುರ್ಘಟನೆ ನಡೆದಿದ್ದು, ಒಬ್ಬ ಕಾರ್ಮಿಕ ಕಟ್ಟಡಗಳ ಅವಶೇಷದಡಿ ಸಿಲುಕಿರುವ ಮಾಹಿತಿ ಇದೆ. ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಮತ್ತು ಪೊಲೀಸ್ ಇಲಾಖೆ, ಅಗ್ನಿಶಾಮಕ ಇಲಾಖೆ ಸೇರಿದಂತೆ ಎಲ್ಲರೂ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದೇವೆ ಎಂದು ತಿಳಿಸಿದರು.

ಗುತ್ತಿಗೆದಾರರ ವೈಫಲ್ಯವೇ ಕಾರಣ; ಎಂಎಲ್‌ಸಿ ಕೆ.ವಿವೇಕಾನಂದ ಆರೋಪ



ಮೈಸೂರು,ಜ.28(ಪಿಎಂ)– ಒಳಗೆ ಕಾರ್ಮಿಕರನ್ನು ಕಳುಹಿಸದೇ ಸುರಕ್ಷಿತ ಕ್ರಮವಾಗಿ ಜೆಸಿಬಿ ಮತ್ತು ಹಿಟಾಚಿ ಮೂಲಕ ನೆಲಸಮ ಕೆಲಸ ಮಾಡಿಸಬಹುದಿತ್ತು. ಇವರು ಕಿಟಕಿ–ಬಾಗಿಲು ಬೇರ್ಪಡಿಸಲು ಕಾರ್ಮಿಕರನ್ನು ಬಿಟ್ಟಿದ್ದಾರೆ. ಮೊದಲೇ ಶಿಥಿಲಗೊಂಡ ಕಟ್ಟಡ ಈ ಸಂದರ್ಭದಲ್ಲಿ ಕುಸಿಯದೇ ಇನ್ನೇನು ತಾನೆ ಆಗುತ್ತದೆ. ಇದರಲ್ಲಿ ಗುತ್ತಿಗೆದಾರರ ವೈಫಲ್ಯ ಇದ್ದು, ಇದರ ಸಂಪೂರ್ಣ ಹೊರೆ ಅವರೇ ಹೊರಬೇಕು ಎಂದು ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ದೂರಿದರು. ರಕ್ಷಣಾ ಕಾರ್ಯಾಚರಣೆ ವೇಳೆ ಸ್ಥಳಕ್ಕೆ ಭೇಟಿ ನೀಡಿದ್ದ ಅವರು, ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿ, ಜೆಸಿಬಿ ಇಲ್ಲವೇ ಹಿಟಾಚಿ ಮೂಲಕ ನೆಲಸಮ ಕೆಲಸ ಮಾಡಬೇಕು. ಇವರು ಕಿಟಕಿ ತೆಗೆಯಲು ಕಾರ್ಮಿಕರನ್ನು ಬಿಟ್ಟಿದ್ದಾರೆ. ಈ ವೇಳೆ ಮೇಲ್ಛಾವಣಿ ಕುಸಿದೆ. ಇಲ್ಲಿ ಗುತ್ತಿಗೆದಾರರರ ವೈಫಲ್ಯವಿದ್ದು, ಅವರು ಕೂಡಲೇ ಸ್ಥಳಕ್ಕೆ ಬರಬೇಕು ಎಂದು ಆಗ್ರಹಿಸಿದರು.

ನಾವು ಯಾವ ಕಾಲದಲ್ಲಿದ್ದೇವೆ

ಸುರಕ್ಷಿತ ವಿಧಾನದಲ್ಲಿ ಕಟ್ಟಡ ನೆಲಸಮ ಮಾಡುವ ತಾಂತ್ರಿಕ ಕೌಶಲ್ಯ, ಅದಕ್ಕೆ ಪೂರಕ ಉಪಕರಣಗಳನ್ನು ಬಳಸಿಕೊಳ್ಳಬಹುದಿತ್ತಲ್ಲವೇ? ಎಂದು ಸಾರ್ವಜನಿಕರು ಪ್ರಶ್ನಿಸಿ, ಇದರ ನಿರ್ವಹಣೆ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಆ ಬಡ ಜೀವ ಬದುಕಿ ಬರಲಿ ಎಂದೂ ದೇವರಲ್ಲಿ ಪ್ರಾರ್ಥಿಸಿದ್ದಾರೆ.

ಕಟ್ಟಡದಲ್ಲಿನ ಪೀಠೋಪಕರಣ ಸೇರಿದಂತೆ ಇನ್ನಿತರ ಸಾಮಗ್ರಿ ತೆರವುಗೊಳಿಸಿ, ಯಾರು ಇಲ್ಲದಂತೆ ನೋಡಿಕೊಂಡು ಜೆಸಿಬಿ, ಹಿಟಾಚಿ ಸೇರಿದಂತೆ ಇನ್ನಿತರೆ ಆಧುನಿಕ ಯಂತ್ರೋಪಕರಣಗಳ ಮೂಲಕ ಒಮ್ಮೆಗೆ ಕಟ್ಟಡ ನೆಲಸಮ ಮಾಡುವ ತಾಂತ್ರಿಕ ಕೌಶಲ್ಯ ಇಲ್ಲಿ ಬಳಕೆ ಮಾಡಬಹುದಿತ್ತಲ್ಲವೇ? ಎಂದು ಹೇಳಿ, ಗುತ್ತಿಗೆದಾರರ ಬೇಜವಾಬ್ದಾರಿ ಬಗ್ಗೆ ಕಿಡಿಕಾರಿದ್ದಾರೆ.

2036ರ ಒಲಿಂಪಿಕ್ಸ್ ಅನ್ನು ಆಯೋಜಿಸಲು ಭಾರತ ಶತಪ್ರಯತ್ನ

38ನೇ ರಾಷ್ಟ್ರೀಯ ಕ್ರೀಡಾಕೂಟ ಉದ್ಘಾಟಿಸಿ ಪ್ರಧಾನಿ ಮೋದಿ ಹೇಳಿಕೆ

ನವದೆಹಲಿ: ಉತ್ತರಾಖಂಡದಲ್ಲಿ 38ನೇ ರಾಷ್ಟ್ರೀಯ ಕ್ರೀಡಾಕೂಟವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಇದಕ್ಕೂ ಮೊದಲು, ಅಲ್ಮೋರಾ ನಿವಾಸಿ ಭಾರತೀಯ ಬ್ಯಾಡ್ಮಿಂಟನ್ ತಾರೆ ಲಕ್ಷ್ಯ ಸೇನ್ ಮತ್ತು ರಾಷ್ಟ್ರೀಯ ಕ್ರೀಡಾಕೂಟದ ತೇಜಸ್ವಿನಿ ಜ್ಯೋತಿಯನ್ನು ಪ್ರಧಾನಿಗೆ ಹಸ್ತಾಂತರಿಸಿದರು. ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಸುಮಾರು 10 ಸಾವಿರ ಆಟಗಾರರು 32 ಕ್ರೀಡೆಗಳಲ್ಲಿ ಪದಕ ಗೆಲ್ಲಲು ಸ್ಪರ್ಧಿಸಲಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನಿ ಮೋದಿ, ದೇಶದಲ್ಲಿ ಸುಂದರವಾದ ಕ್ರೀಡಾ ಪುಷ್ಪಗುಚ್ಛವನ್ನು ಸಿದ್ಧಪಡಿಸಲಾಗುತ್ತಿದೆ. ಇದರಲ್ಲಿ ಪ್ರತಿ ಋತುವಿನಲ್ಲಿ ಹೂವುಗಳು ಅರಳುತ್ತವೆ ಮತ್ತು ಪಂದ್ಯಾವಳಿಗಳು ನಿರಂತರವಾಗಿ ನಡೆಯುತ್ತವೆ ಎಂದು ಹೇಳಿದರು.



ಡೆಹ್ರಾಡೂನ್‌ನಲ್ಲಿ ನಡೆದ 38ನೇ ರಾಷ್ಟ್ರೀಯ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಹಾಕಿಯ ಹಳೆಯ ವೈಭವದ ದಿನಗಳು ಮರಳುತ್ತಿವೆ ಎಂದು ಹೇಳಿದರು. ನಮ್ಮ ಖೋ–ಖೋ ತಂಡ ವಿಶ್ವಕಪ್ ಗೆದ್ದಿದೆ. ಗುಕೇಶ್ ವಿಶ್ವ ಚೆಸ್ ಚಾಂಪಿಯನ್‌ಶಿಪ್ ಗೆದ್ದು, ಜಗತ್ತನ್ನೇ ಅಚ್ಚರಿಗೊಳಿಸಿದರು. ಒಂದು ದೇಶ ಕ್ರೀಡೆಯಲ್ಲಿ ಪ್ರಗತಿ ಸಾಧಿಸಿದಾಗ, ಆ ದೇಶದ ವಿಶ್ವಾಸಾರ್ಹತೆ ಮತ್ತು ವ್ಯಕ್ತಿತ್ವವೂ ಹೆಚ್ಚಾಗುತ್ತದೆ. ಆಟಗಾರರು ತಮ್ಮ ಸಾಮರ್ಥ್ಯಗಳನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ನಾವು ಹೆಚ್ಚು ಹೆಚ್ಚು ಅವಕಾಶಗಳನ್ನು ಸೃಷ್ಟಿಸುತ್ತಿದ್ದೇವೆ ಎಂದರು.

ಈ ಯಶಸ್ಸು ಭಾರತದಲ್ಲಿ ಕ್ರೀಡೆಗಳು ಇನ್ನು ಮುಂದೆ ಪಠ್ಯೇತರ ಚಟುವಟಿಕೆಯಾಗಿ ಉಳಿದಿಲ್ಲ ಬದಲಾಗಿ ಅದು ಪ್ರಮುಖ ವೃತ್ತಿ ಆಯ್ಕೆಯಾಗಿ ಹೊರಹೊಮ್ಮಿದೆ ಎಂಬುದನ್ನು ತೋರಿಸುತ್ತದೆ ಎಂದು ಪ್ರಧಾನಿ ಹೇಳಿದರು. ನಮ್ಮ ಆಟಗಾರರು ದೊಡ್ಡ ಗುರಿಗಳೊಂದಿಗೆ ಮುನ್ನಡೆಯುವಂತೆಯೇ, ನಮ್ಮ ದೇಶವೂ ದೊಡ್ಡ ಸಂಕಲ್ಪದೊಂದಿಗೆ ಮುನ್ನಡೆಯುತ್ತಿದೆ. 2036ರ ಒಲಿಂಪಿಕ್ಸ್ ಅನ್ನು ಆಯೋಜಿಸಲು ಭಾರತ ತನ್ನ ಅತ್ಯುತ್ತಮ ಪ್ರಯತ್ನವನ್ನು ಮಾಡುತ್ತಿದೆ ಮತ್ತು ಭಾರತದಲ್ಲಿ ಒಲಿಂಪಿಕ್ಸ್ ನಡೆದಾಗ, ಅದು ಭಾರತೀಯ ಕ್ರೀಡೆಗಳನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದರು.

ಇಲ್ಲಿ ಅನೇಕ ದಾಖಲೆಗಳು ಮುರಿಯಲ್ಪಡುತ್ತವೆ, ಹೊಸ ದಾಖಲೆಗಳು ನಿರ್ಮಾಣವಾಗುತ್ತವೆ. ಆದರೆ ಈ ರಾಷ್ಟ್ರೀಯ ಕ್ರೀಡಾಕೂಟವು ಕೇವಲ ಕ್ರೀಡಾ ಸ್ಪರ್ಧೆಯಲ್ಲ, ಬದಲಾಗಿ 'ಏಕ್ ಭಾರತ್, ಶ್ರೇಷ್ಠ ಭಾರತ್'ಗೆ ಬಲವಾದ ವೇದಿಕೆಯಾಗಿದೆ ಎಂದು ಅವರು ಹೇಳಿದರು. ನಿಮ್ಮ ಪದಕವು ಭಾರತದ ಏಕತೆ ಮತ್ತು ಶ್ರೇಷ್ಠತೆಯ ಹೊಳಪನ್ನು ಪ್ರತಿಬಿಂಬಿಸುತ್ತದೆ ಎಂದು ಖಚಿತಪಡಿಸಿಕೊಳ್ಳಲು ನೀವು ಪ್ರಯತ್ನಿಸಬೇಕು. ಆರೋಗ್ಯಕರ ದೇಹದಿಂದ ಮಾತ್ರ ಆರೋಗ್ಯಕರ ಮನಸ್ಸು ಮತ್ತು ಆರೋಗ್ಯಕರ ರಾಷ್ಟ್ರ ನಿರ್ಮಾಣ ಸಾಧ್ಯ ಎಂದು ಮೋದಿ ಹೇಳಿದರು.

ಯುಸಿಸಿ ಜಾರಿಗೆ ತಂದಿದ್ದಕ್ಕಾಗಿ ಉತ್ತರಾಖಂಡ ಸರ್ಕಾರವನ್ನು ಪ್ರಧಾನಿ ಮೋದಿ ಅಭಿನಂದಿಸಿದರು. ಈ ಐತಿಹಾಸಿಕ ಹೆಜ್ಜೆಗಾಗಿ ಉತ್ತರಾಖಂಡದ ಬಿಜೆಪಿ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ ಎಂದು ಅವರು ಹೇಳಿದರು. ಪ್ರಧಾನಮಂತ್ರಿಯವರು ಯುಸಿಸಿಯನ್ನು ಜಾತ್ಯತೀತ ನಾಗರಿಕ ಸಂಹಿತೆ ಎಂದು ಬಣ್ಣಿಸಿದರು. ಈ ಕಾನೂನು ನಮ್ಮ ಹೆಣ್ಣುಮಕ್ಕಳು, ತಾಯಂದಿರು ಮತ್ತು ಸಹೋದರಿಯರ ಗೌರವಾನ್ವಿತ ಜೀವನಕ್ಕೆ ಆಧಾರವಾಗಲಿದೆ ಮತ್ತು ಸಂವಿಧಾನದ ಚೈತನ್ಯವನ್ನು ಸಹ ಬಲಪಡಿಸಲಾಗುವುದು ಎಂದು ಹೇಳಿದರು.

ಟಿ20 3ನೇ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ಸೋಲು

ರಾಜ್‌ಕೋಟ್: ಇಂಗ್ಲೆಂಡ್ ವಿರುದ್ಧ ನಡೆದ ಮೂರನೇ ಟಿ20 ಪಂದ್ಯದಲ್ಲಿ ಭಾರತ ಸೋಲು ಅನುಭವಿಸಿದೆ.

ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 9 ವಿಕೆಟ್‌ಗಳ ನಷ್ಟಕ್ಕೆ 171 ರನ್ ಕಲೆ ಹಾಕಿತು. ಇದನ್ನು ಬೆನ್ನತ್ತಿದ ಭಾರತ ತಂಡ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 145 ರನ್ ಕಲೆ ಹಾಕುವ ಮೂಲಕ 26 ರನ್‌ಗಳ ಅಂತರದಲ್ಲಿ ಇಂಗ್ಲೆಂಡ್ ವಿರುದ್ಧ ಸೋಲು ಅನುಭವಿಸಿತು.

ಇಂಗ್ಲೆಂಡ್ ಪರ ನಾಯಕ ಜೋಸ್ ಬಟ್ಲರ್ ಅವರ ಅಮೋಘ 76, ಆರಂಭಿಕ ಆಟಗಾರ ಬೆನ್ ಡುಕೆಟ್ 28 ಎಸೆತ ಎದುರಿಸಿ 51 ಹಾಗೂ ಲಿಯಾಮ್ ಲಿವಿಂಗ್ ಸ್ಟೋನ್ ಅವರ (24 ಎಸೆತಗಳಲ್ಲಿ 43 ರನ್) ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಉತ್ತಮ ಮೊತ್ತವನ್ನು ತಂಡ ಪೇರಿಸಿತು.

16ನೇ ಓವರ್‌ವರೆಗೂ ಇಂಗ್ಲೆಂಡ್ ತಂಡವು 8 ವಿಕೆಟ್‌ಗಳನ್ನು ಕಳೆದುಕೊಂಡು 127 ರನ್‌ಗಳನ್ನಷ್ಟೇ ಗಳಿಸಿತ್ತು ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಲಿವಿಂಗ್‌ಸ್ಟೋನ್ ಅಬ್ಬರಿಸಿದರು. ಕೊನೆಯ ನಾಲ್ಕು ಓವರ್‌ಗಳಲ್ಲಿ 44 ರನ್ ಕಲೆಹಾಕುವ ಮೂಲಕ ತಂಡಕ್ಕೆ ಉತ್ತಮ ಸ್ಕೋರ್ ತಂದುಕೊಟ್ಟರು.



ಚಕ್ರವರ್ತಿ ಅವರು ಮಹತ್ವದ ಬಟ್ಲರ್ ವಿಕೆಟ್ ಪಡೆದರು. ಒಂದೇ ಓವರ್‌ನಲ್ಲಿ ಚಕ್ರವರ್ತಿ ಅವರು ಇಬ್ಬರು ಪ್ರಮುಖ ಬ್ಯಾಟರ್‌ಗಳ ವಿಕೆಟ್ ಕಬಳಿಸಿದರು. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 2ನೇ ಬಾರಿಗೆ ಐದು ವಿಕೆಟ್ ಪಡೆದು ಸಾಧನೆ ಮಾಡಿದರು. ಡುಕೆಟ್ ಅವರನ್ನು ಅಕ್ಷರ ಪಟೇಲ್ ಪೆವಿಲಿಯನ್‌ಗೆ ಕಳುಹಿಸಿದರು. ಸ್ಪಿನರ್ ರವಿ ಬಿಷ್ಣೋಯಿ ಕೂಡಾ ತಮ್ಮ ಕೈಚಳಕ ಪ್ರದರ್ಶಿಸಿದರು.

2023ರ ವಿಶ್ವಕಪ್ ನಂತರ ಗಾಯದ ಸಮಸ್ಯೆಯಿಂದ ಬಳಲುತ್ತಿದ್ದ ವೇಗಿ ಮೊಹಮ್ಮದ್ ಶಮಿ ಅವರು ಈ ಪಂದ್ಯದ ಮೂಲಕ ವಾಪಸ್ ಆದ್ದಾರೆ. ಮೂರು ಓವರ್ ಮಾಡಿದ ಅವರು ಯಾವುದೇ ವಿಕೆಟ್ ಪಡೆಯದೇ 25 ರನ್ ನೀಡಿದರು.

ಈ ಮೊತ್ತವನ್ನು ಬೆನ್ನಟ್ಟಿದ ಭಾರತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 145 ರನ್ ಗಳಿಸಿ ಸೋಲು ಅನುಭವಿಸಿತು. ಭಾರತ ಪರ ಪಾಂಡ್ಯ ಬಿಟ್ಟರೆ ಉಳಿದವರೆಲ್ಲರೂ ಸರಿಯಾಗಿ ಬ್ಯಾಟಿಂಗ್ ಮಾಡಲಿಲ್ಲ. ಪಾಂಡ್ಯ 40 ರನ್ ಮಾಡಿದರು. ಉಳಿದಂತೆ ಸ್ಯಾಮ್ಸನ್ 3, ಅಭಿಷೇಕ್ ಶರ್ಮಾ 24, ಸೂರ್ಯಕುಮಾರ್ ಯಾದವ್ 13, ತಿಲಕ್ ವರ್ಮಾ 18, ಅಕ್ಷರ್ ಪಟೇಲ್ 15 ರನ್ ಮಾಡಿದರು.

ಬಿಜೆಪಿ ಸ್ಥಿತಿ ಈಗ ಮನೆಯೊಂದು ಆರು ಬಾಗಿಲು: ಸವದಿ ಲೇವಡಿ

ಬೆಳಗಾವಿ: ಬಿಜೆಪಿ ಪರಿಸ್ಥಿತಿ ಈಗ, ಮನೆಯೊಂದು ಆರು ಬಾಗಿಲಿನಂತಾಗಿದೆ ಎಂದು ಶಾಸಕ ಲಕ್ಷ್ಮಣ ಸವದಿ ವ್ಯಂಗ್ಯವಾಡಿದರು.



ಬೆಳಗಾವಿಯಲ್ಲಿ ಮಾತನಾಡಿದ ಅವರು, ಬಿಜೆಪಿಯಲ್ಲಿ ಈಗ ಎಲ್ಲವೂ ಸರಿ ಇಲ್ಲ. ಅಲ್ಲಿ ಮನೆಯೊಂದು ಮೂರು ಬಾಗಿಲಲ್ಲ, ಆರು ಬಾಗಿಲು ಆಗಿವೆ. ಅಲ್ಲಿ ಶ್ರೀರಾಮುಲು ಮಾತ್ರವಲ್ಲ; ಹಲವರಿಗೆ ಸಮಸ್ಯೆಗಳಿವೆ. ಇತ್ತೀಚಿನ ದಿನಗಳಲ್ಲಿ ಮತ್ತಷ್ಟು ಹೊಸ ಸಮಸ್ಯೆಗಳು ಹುಟ್ಟುತ್ತಲೇ ಇವೆ ಎಂದು ದೂರಿದರು.

ಜನಾರ್ದನ ರೆಡ್ಡಿ ಹಾಗೂ ಶ್ರೀರಾಮುಲು ಮಧ್ಯೆ ಇರುವ ವೈಮನಸ್ಸು ಈಗ ಭುಗಿಲೆದ್ದಿದೆ. ಶ್ರೀರಾಮುಲು ನೊಂದಿದ್ದಾರೆ. ಬಿಜೆಪಿಯಲ್ಲಿ ಮೂರಲ್ಲ, ಆರು ಬಾಗಿಲು ದಾಟಿ ಬಂದಿದ್ದಾರೆ. ನಾನೇನು ಅವರನ್ನು ಸಂಪರ್ಕಿಸಿಲ್ಲ. ಅವರು ಕಾಂಗ್ರೆಸ್‌ಗೆ ಬರುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ಮುಂದಿನ ದಿನಗಳಲ್ಲಿ ಕಾದುನೋಡೋಣ ಎಂದರು. ಕಾಂಗ್ರೆಸ್ ಪಕ್ಷ ಸಮುದ್ರವಿದ್ದಂತೆ. ಕೆಲವರು ಬರುತ್ತಾರೆ, ಕೆಲವರು ಹೋಗುತ್ತಾರೆ. ಇದರಿಂದ ರಾಷ್ಟ್ರೀಯ ಪಕ್ಷಗಳಿಗೆ ಯಾವ ಪರಿಣಾಮ ಬೀರುವುದಿಲ್ಲ ಎಂದು ಹೇಳಿದರು.

ಈ ಹಿಂದೆ ಬಿಜೆಪಿಯಲ್ಲಿ ನಾಯಕರ ನಡುವೆ ಭಿನ್ನಾಭಿಪ್ರಾಯಗಳು ಉದ್ಭವಿಸಿದಾಗಲೆಲ್ಲಾ ಜನರು ಅದನ್ನು ಮೂರು ಬಾಗಿಲುಗಳಿರುವ ಒಂದು ಮನೆ ಎಂದು ಹೇಳುತ್ತಿದ್ದರು. ಆದಾಗ್ಯೂ, ಇತ್ತೀಚಿನ ದಿನಗಳಲ್ಲಿ ಆರು ಬಾಗಿಲುಗಳಿರುವ ಒಂದು ಮನೆಯಾಗಿ ಮಾರ್ಪಟ್ಟಿರುವ ರಾಜ್ಯ ಬಿಜೆಪಿ ಹೊಸ ದಾಖಲೆಯನ್ನು ಸೃಷ್ಟಿಸಿದೆ ಎಂದು ಅವರು ಹೇಳಿದರು.

ಬಿಜೆಪಿ ನಾಯಕ ಬಿ. ಶ್ರೀರಾಮುಲು ಕಾಂಗ್ರೆಸ್ ಸೇರಬಹುದು ಎಂಬ ವರದಿಗಳ ಕುರಿತು, ಕಳೆದ ಉಪ ಚುನಾವಣೆಯ ಸಮಯದಲ್ಲಿ ಮಾಜಿ ಅಧ್ಯಕ್ಷರು ಅವರನ್ನು ಭೇಟಿಯಾಗಿ ಸ್ನೇಹಪರ ಚರ್ಚೆಗಳನ್ನು ನಡೆಸಿದ್ದರು ಎಂದು ಸವದಿ ಹೇಳಿದರು. ಶ್ರೀರಾಮುಲು ಅವರ ಮುಂದಿನ ನಡೆ ಏನಾಗುತ್ತದೆ ಎಂದು ಕಾದು ನೋಡಬೇಕು ಎಂದು ಸವದಿ ಹೇಳಿದರು.

ಮಾಧ್ಯಮ ವರದಿಗಳ ಪ್ರಕಾರ, ಶ್ರೀರಾಮುಲು ತಮ್ಮ ದೀರ್ಘಕಾಲದ ಸ್ನೇಹಿತ ಗಾಲಿ ಜನಾರ್ದನ ರೆಡ್ಡಿ ಬಗ್ಗೆ ಅಸಮಾಧಾನ ಗೊಂಡಿದ್ದರು ಮತ್ತು ಆ ಬಗ್ಗೆ ಮಾಧ್ಯಮಗಳೊಂದಿಗೆ ಮಾತನಾಡಿದ್ದರು ಎಂದು ಸವದಿ ಹೇಳಿದರು. ಶ್ರೀರಾಮುಲು ಅವರ ಪ್ರವೇಶವು ಪಕ್ಷದ ಪ್ರಸಿದ್ಧ ಮುಖವಾಗಿ ಮತ್ತೊಬ್ಬ ಎಸ್‌ಟಿ ನಾಯಕ ಸತೀಶ್ ಜಾರಕಿಹೊಳಿಯ ಭವಿಷ್ಯವನ್ನು ಹಾಳುಮಾಡಬಹುದೇ ಎಂಬ ಬಗ್ಗೆ ತಾವು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಸವದಿ ಹೇಳಿದರು.

ಸತೀಶ್ ಶ್ರೀರಾಮುಲು ಕಾಂಗ್ರೆಸ್‌ಗೆ ಸೇರಿದರೆ ಅದು ಅವರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಪಿಡಬ್ಲ್ಯೂಡಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಶ್ರೀರಾಮುಲು ಅವರ ಅಧಿಕಾರ ವ್ಯಾಪ್ತಿ ಬೆಳಗಾವಿ ಪ್ರದೇಶವಾಗಿದ್ದರೆ, ಬಳ್ಳಾರಿ ಪ್ರದೇಶವು ಶ್ರೀರಾಮುಲು ಅವರ ಪ್ರವೇಶವು ಯಾವುದೇ ಘರ್ಷಣೆಗೆ ದಾರಿ ಮಾಡಿಕೊಡುವುದಿಲ್ಲ ಎಂದು ಸತೀಶ್ ಹೇಳಿದರು.

ಮುಡಾ ಕೇಸ್‌ನಲ್ಲಿ ಇಡಿ ತನಿಖೆಯೇ ಕಾನೂನುಬಾಹಿರ

ಸಿಎಂ ಕಾನೂನು ಸಲಹೆಗಾರ ಪೊನ್ನಣ್ಣ

ಬೆಂಗಳೂರು: ಮುಡಾ ಕೇಸ್‌ನಲ್ಲಿ ಇಡಿ ತನಿಖೆ ಮಾಡುತ್ತಿರುವುದು ಕಾನೂನುಬಾಹಿರ ಎಂದು ಸಿಎಂ ಕಾನೂನು ಸಲಹೆಗಾರ ಪೊನ್ನಣ್ಣ ಆರೋಪಿಸಿದ್ದಾರೆ.



ವಿಧಾನಸೌಧದಲ್ಲಿ ಮುಡಾ ಕೇಸ್‌ನಲ್ಲಿ ಸಿಎಂ ಪತ್ನಿ ಹಾಗೂ ಸಚಿವ ಬೈರತಿ ಸುರೇಶ್‌ಗೆ ಇಡಿ ನೋಟಿಸ್ ನೀಡಿರುವ ವಿಚಾರಕ್ಕೆ ಪ್ರತಿಕ್ರಿಯಿಸಿ, ಮುಡಾ ಕೇಸ್‌ನಲ್ಲಿ ಲೋಕಾಯುಕ್ತ ತನಿಖೆ ಮಾಡುವಾಗ ಇಡಿ ಕೇಸ್ ತೆಗೆದುಕೊಂಡಿದ್ದೆ ಕಾನೂನುಬಾಹಿರ. ಹೀಗಿದ್ದರೂ ಇಡಿ ತನಿಖೆ ಮಾಡಿ, ನೋಟಿಸ್ ಕೊಡುತ್ತಿದೆ, ಇದು ಸರಿಯಲ್ಲ. ಲೋಕಾಯುಕ್ತ ಈಗಾಗಲೇ ತನಿಖೆ ಮಾಡಿ, ಕೋರ್ಟ್‌ಗೆ ವರದಿ ಕೊಡುತ್ತಿದೆ. ಹೈಕೋರ್ಟ್ ಲೋಕಾಯುಕ್ತ ತನಿಖೆಯನ್ನು ನೋಡುತ್ತಿದೆ. ಈಗ ಇಡಿ ನೋಟಿಸ್ ಕೊಟ್ಟಿರುವುದು, ತನಿಖೆ ಮಾಡುತ್ತಿರುವುದು ಕಾನೂನು ವಿರುದ್ಧ ಎಂದು ಕಿಡಿಕಾರಿದರು

ಮುಡಾ ಮಾಜಿ ಆಯುಕ್ತ ನಟೇಶ್‌ಗೆ ಇಡಿ ನೋಟಿಸ್ ಕೊಟ್ಟಿತ್ತು. ಹೈಕೋರ್ಟ್ ನಟೇಶ್ ಕೊಟ್ಟಿದ್ದ ನೋಟಿಸ್‌ನ್ನು ರದ್ದು ಮಾಡಿದೆ. ಇದೇ ವೇಳೆ ಸಿಎಂ ಪತ್ನಿ, ಸಚಿವ ಬೈರತಿ ಸುರೇಶ್‌ಗೆ ನೋಟಿಸ್ ಕೊಟ್ಟು ವಿಚಾರಣೆಗೆ ಬರುವಂತೆ ಹೇಳಿದ್ದರು. ಈ ಹಿಂದೆ ಇಡಿ ಕೊಟ್ಟಿದ್ದ ಮೊದಲ ನೋಟಿಸ್‌ಗೆ ಪಾರ್ವತಿ ಅವರು ಕಾಲಾವಕಾಶ ಕೊಡಿ ಎಂದು ಇಡಿಗೆ ಕೇಳಿದ್ದರು. ಈ ನಡುವೆ ಎರಡನೇ ನೋಟಿಸ್ ಇಡಿಯವರು ಕೊಟ್ಟಿದ್ದಾರೆ.

ಇಡಿ ಪಾರ್ವತಿ ಅವರು ಕುಟುಂಬದ ಎಲ್ಲಾ ಮಾಹಿತಿ ಕೇಳ್ತಿದ್ದಾರೆ. ಹೀಗಾಗಿ ನಾವು ಹೈಕೋರ್ಟ್‌ಗೆ ಅರ್ಜಿ ಹಾಕಿದ್ದೀವಿ. ಕೋರ್ಟ್ ನೋಟಿಸ್‌ಗೆ ತಡೆ ನೀಡಿದೆ. ಇಡಿಯನ್ನು ರಾಜಕೀಯವಾಗಿ ಕೇಂದ್ರ ಸರ್ಕಾರ ಬಳಸುತ್ತಿದೆ ಎಂದು ಕೋರ್ಟ್ಗೆ ಮನವಿ ಮಾಡಿದ್ದೀವಿ. ಫೆ10ಕ್ಕೆ ವಿಚಾರಣೆ ಮುಂದೂಡಿಕೆ ಮಾಡಿದೆ ಎಂದು ತಿಳಿಸಿದರು.

ಮುಡಾ ಕೇಸ್ ಸಿಬಿಐಗೆ ಕೇಸ್ ಕೊಡುವ ಬಗ್ಗೆ ನಿನ್ನೆ ವಾದ–ಪ್ರತಿವಾದ ಮುಗಿದಿದೆ. ಲೋಕಾಯುಕ್ತ ಕೂಡಾ ಕೋರ್ಟ್ಗೆ ತನಿಖಾ ವರದಿ ಕೊಟ್ಟಿದೆ. ಹೈಕೋರ್ಟ್ ಏನು ತೀರ್ಪು ಕೊಡುತ್ತದೆ ನೋಡೋಣ. ಸಿಬಿಐಗೆ ಕೊಡಬೇಡಿ ಎಂದು ನಮ್ಮ ವಾದ ಇದೆ. ಲೋಕಾಯುಕ್ತ ಸಂಸ್ಥೆ ಸ್ವತಂತ್ರ ಸಂಸ್ಥೆ. ಹೀಗಾಗಿ ಸಿಬಿಐಗೆ ಬೇಡ ಅಂತ ನಾವು ಹೇಳಿದ್ದೇವೆ. ಎಫ್‌ಆರ್‌ಐ ದಾಖಲು ಮಾಡುವ ಮುಂಚೆಯೇ ಸಿಬಿಐಗೆ ಕೊಡಿ ಎಂದು ಅವರು ಬಂದಿದ್ದಾರೆ. ಲೋಕಾಯುಕ್ತ ತನಿಖೆ ಪಾರದರ್ಶಕವಾಗಿ ತನಿಖೆ ಮಾಡ್ತಿದೆ. ಹೀಗಾಗಿ ಸಿಬಿಐಗೆ ಕೇಸ್ ಕೊಡುವ ಅವಶ್ಯಕತೆ ಇದೆ ಎಂದು ನಮಗೆ ಅನ್ನಿಸಿಲ್ಲ. ಕೋರ್ಟ್ ಏನು ತೀರ್ಪು ಕೊಡುತ್ತದೆ ನೋಡೋಣ ಎಂದರು.

ಇಡಿ ತನಿಖೆಯೇ ರಾಜಕೀಯ ಪ್ರೇರಿತ. ವಾಲ್ಮೀಕಿ ಕೇಸ್‌ನಿಂದ ಈ ಕೇಸ್ ಕೂಡಾ ರಾಜಕೀಯ ಪ್ರೇರಿತವೇ. ಮುಡಾದಲ್ಲಿ 14 ಸೈಟ್ ಎಲ್ಲಿ ಹೋಗಿದೆ? ಅಲ್ಲೇ ಇದೆ. ಸೈಟ್ ಕೂಡಾ ವಾಪಸ್ ಕೊಟ್ಟಿದ್ದಾರೆ. ಬಿಜೆಪಿ ಅವಧಿಯಲ್ಲಿ ಮುಡಾ ಅಕ್ರಮ ಆಗಿದೆ. ಬೈರತಿ ಸುರೇಶ್‌ಗೆ ಯಾಕೆ ನೋಟಿಸ್ ಕೊಡುತ್ತಾರೆ. ವಾಲ್ಮೀಕಿ ಕೇಸ್‌ನಲ್ಲಿ ಎಸ್‌ಐಟಿ ತನಿಖೆ ಮಾಡಿದೆ. ಅದರಲ್ಲಿ ನಾಗೇಂದ್ರ ಪಾತ್ರ ಇಲ್ಲ ಎಂದು ಹೇಳಿದೆ. ವಿಶ್ವದಲ್ಲೇ ಇರುವ ಎಲ್ಲಾ ಕೇಸ್ ತನಿಖೆ ಮಾಡಬೇಕು ಎಂದು ಎಲ್ಲೂ ಇಲ್ಲ. ಇಡಿ ತನಿಖೆಯೇ ರಾಜಕೀಯ ಪ್ರೇರಿತ. ಇಡಿ ರಾಜಕೀಯ ಮಾಡ್ತಿದ್ದಾರೆ. ಮುಡಾ ಸೈಟ್ ವಾಪಸ್ ಕೊಟ್ಟ ಮೇಲೆ ಮನಿಲ್ಯಾಂಡ್‌ರಿಂಗ್ ಕೇಸ್ ಮುಗಿದಿದೆ. ಇಡಿ ಈ ರಾಜಕೀಯ ಪ್ರೇರಿತ ದಾಳಿ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಹಾಸನ ಜಿಲ್ಲೆಯಲ್ಲಿದ್ದಾರೆ 12 ಸಾವಿರ ಎಚ್‌ಐವಿ ಸೋಂಕಿತರು

ರಾಜ್ಯದಲ್ಲಿ 10ನೇ ಸ್ಥಾನ

ಅರಕಲಗೂಡು: ಹಾಸನ ಜಿಲ್ಲೆಯ ಅವಿವಾಹಿತರಲ್ಲಿ ಎಚ್‌ಐವಿ ಖಚಿತ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತಿರುವುದು ಆತಂಕದ ಸಂಗತಿ. ಜಿಲ್ಲೆ ಎಚ್‌ಐವಿ ಸೋಂಕಿತರಲ್ಲಿ ಜಿಲ್ಲೆ 10ನೇ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ 12,494, ತಾಲೂಕಿನಲ್ಲಿ 350 ಸೋಂಕಿತರಿದ್ದಾರೆ ಎಂದು ಸಾರ್ವಜನಿಕ ಆಸ್ಪತ್ರೆಯ ಐಸಿಟಿಸಿ ವಿಭಾಗದ ಆಪ್ತ ಸಮಾಲೋಚಕ ಪರಶುರಾಮ ಶಿರೂರ್ ಮಾಹಿತಿ ನೀಡಿದ್ದಾರೆ.



ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ, ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ಮತ್ತು ಸಾರ್ವಜನಿಕ ಆಸ್ಪತ್ರೆಯ ಐಸಿಟಿಸಿ ವಿಭಾಗ ಹಾಗೂ ಹೆಬ್ಬಾಲೆ ಗ್ರಾಮ ಪಂಚಾಯಿತಿ ಹಾಗೂ ಚೈತನ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಹಯೋಗದಲ್ಲಿ ತಾಲೂಕಿನ ಗಂಗನಾಳು ಗ್ರಾಮದಲ್ಲಿ ಶನಿವಾರ ಆರೋಗ್ಯ ಉಚಿತ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಹೈರಿಸ್ಕ್ ಇರುವಂತಹ 100 ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಎಚ್‌ಐವಿ ತಪಾಸಣೆ ಮಾಡುತ್ತಿದ್ದು, ಮುನ್ನೆಚ್ಚರಿಕೆ ಕ್ರಮಗಳ ಕುರಿತು ಜನರಿಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ಎನ್‌ಎಸ್‌ಡಿ ವಿಭಾಗದ ಆಪ್ತಸಮಾಲೋಚಕ ಉಮೇಶ್ ಅಸಾಂಕ್ರಾಮಿಕ ರೋಗಗಳ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

75 ಜನರಿಗೆ ಮಧುಮೇಹ, ಅಧಿಕ ರಕ್ತದ ಒತ್ತಡ, ಎಚ್‌ಐವಿ ಹಾಗೂ ಕ್ಷಯ ರೋಗ ಪರೀಕ್ಷೆ ನಡೆಸಲಾಯಿತು. ಹೆಬ್ಬಾಲೆ ಗ್ರಾಮ ಪಂಚಾಯಿತಿ ಸದಸ್ಯ ಪ್ರಶಾಂತ್, ಪಿಡಿಒ ಅರುಣಕುಮಾರ್, ಕಾರ್ಯದರ್ಶಿ ಗೋಪಾಲ್, ಆರೋಗ್ಯ ಸಂರಕ್ಷಣಾಧಿಕಾರಿ ಸರೋಜ, ಪ್ರಯೋಗಶಾಲಾ ತಂತ್ರಜ್ಞೆ ಗೌರಮ್ಮ ಶುಶ್ರೂಷಕರಾದ ಲಲಿತಾ ಚೈತನ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ತಾಲ್ಲೂಕು ಮೇಲ್ವಿಚಾರಕ ಶೇಖರೇಗೌಡ, ಕ್ಷೇತ್ರಕಾರ್ಯಕರ್ತ ಚಂದ್ರಶೇಖರ್, ಅಂಗನವಾಡಿ ಕಾರ್ಯಕರ್ತೆ ಆಶಾ, ಸಹಾಯಕಿ ಪ್ರೇಮಾ, ಆಶಾ ಕಾರ್ಯಕರ್ತರಾದ ರೇಣುಕಾ, ವನಜಾಕ್ಷಿ, ಗಂಗೆ ಶಿಬಿರದಲ್ಲಿ ಭಾಗವಹಿಸಿದ್ದರು.

ಪರಿಮಳ ಆಗ್ರೋ ಫುಡ್ ಕಂಪನಿಯಲ್ಲಿ ಆಯಿಲ್ ಟ್ಯಾಂಕ್ ಸ್ಫೋಟ; ಇಬ್ಬರ

ತುಮಕೂರು: ಪರಿಮಳ ಆಗ್ರೋ ಫುಡ್ ಕಂಪನಿಯಲ್ಲಿ ಆಯಿಲ್ ಟ್ಯಾಂಕ್ ಬ್ಲಾಸ್ಟ್ ಆಗಿ ಇಬ್ಬರು ಕಾರ್ಮಿಕರು ಸಾವಗೀಡಾದ ದಾರುಣ ಘಟನೆ ನಡೆದಿದೆ. ಅಂತಸರನಹಳ್ಳಿಯಲ್ಲಿರುವ ಇಂಡಸ್ಟ್ರಿಯಲ್ಲಿ ಈ ದುರ್ಘಟನೆ ನಡೆದಿದೆ. ಆಯಿಲ್ ಟ್ಯಾಂಕ್ ಬಳಿ ಐವರು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಈ ವೇಳೆ ಆಯಿಲ್ ಟ್ಯಾಂಕ್ ಸ್ಫೋಟಗೊಂಡಿದ್ದು ಬಿಹಾರ ಮೂಲದ ಸಂತೋಷ್, ಹಾಗೂ ಚಂದನ್ ಶರ್ಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಇನ್ನುಳಿದ ಮೂವರು ಕಾರ್ಮಿಕರಿಗೆ ಗಂಭೀರ ಗಾಯಗಳಾಗಿವೆ. ಸದ್ಯ ಗಾಯಾಳು ಕಾರ್ಮಿಕರನ್ನು ತುಮಕೂರು ಜಿಲ್ಲಾಸ್ಪತ್ರೆಗೆ ರವಾನೆ ಮಾಡಲಾಗಿದೆ. ತುಮಕೂರು ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸ್ಥಳಕ್ಕೆ ತುಮಕೂರು ಗ್ರಾಮಾಂತರ ಪೊಲೀಸರು ಭೇಟಿ, ಪರಿಶೀಲನೆ ನಡೆಸಿದ್ದಾರೆ.

ಮೂರು ವರ್ಷದಿಂದ ಶಿಷ್ಯವೇತನವಿಲ್ಲದೆ ವಿದ್ಯಾರ್ಥಿಗಳ ಪರದಾಟ

ಕಾಲೇಜು ಶುಲ್ಕ ಪಾವತಿಸಲಾಗದೇ ಗ್ರಾಮೀಣ ವಿದ್ಯಾರ್ಥಿಗಳಿಗೆ ಸಂಕಷ್ಟ

ಮೈಸೂರು, ಜ.28(ಎಸ್‌ಪಿಎನ್)– ಕಳೆದ ಮೂರು ವರ್ಷಗಳಿಂದ ರಾಜ್ಯದ 4,90,372 ವಿದ್ಯಾರ್ಥಿಗಳಿಗೆ, ಇದರಲ್ಲಿ ಮೈಸೂರು ಜಿಲ್ಲೆಯ 37,482 ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗದ ಇಲಾಖೆಯಿಂದ ಶಿಷ್ಯವೇತನ ನೀಡಿಲ್ಲ. ಹಾಗಾಗಿ ಕಾಲೇಜಿನ ದುಬಾರಿ ಶುಲ್ಕ ಪಾವತಿಸಲಾಗದೇ ಗ್ರಾಮೀಣ ವಿದ್ಯಾರ್ಥಿಗಳು ಅರ್ಧಕ್ಕೆ ಶಿಕ್ಷಣ ಕಡಿತಗೊಳಿಸುತ್ತಿದ್ದಾರೆ ಎಂಬ ಕೂಗು ವಿದ್ಯಾರ್ಥಿ ಮುಖಂಡರಿಂದ ಕೇಳಿ ಬರುತ್ತಿದೆ.

ಎಸ್ಸಿ–ಎಸ್ಟಿ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಇಲಾಖೆಯಡಿಯಲ್ಲಿ ಬರುವ ಪದವಿ, ಸ್ನಾತಕೋತ್ತರ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ದೊರಕದೇ ದುಬಾರಿ ಶುಲ್ಕ ಪಾವತಿಸಲು ಸಾಧ್ಯವಾಗದೇ



ಸಾಂದರ್ಭಿಕ ಚಿತ್ರ

ಕೆಲವರು ಓದು ನಿಲ್ಲಿಸುವ ನಿರ್ಧಾರ ಬರುತ್ತಿದ್ದಾರೆ. ಒಂದೆಡೆ ಸರ್ಕಾರಿ ಪದವಿ ಕಾಲೇಜಿನ ಅಧ್ಯಾಪಕರ ಹುದ್ದೆಗೆ ಸರ್ಕಾರದಿಂದ ನೇಮಕಾತಿ ಆಗದೇ ಶೈಕ್ಷಣಿಕ ಗುಣಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಇದರ ಬಗ್ಗೆ ರಾಜ್ಯ ಸರ್ಕಾರ ಸ್ವಲ್ಪವೂ ಗಮನ ಹರಿಸುತ್ತಿಲ್ಲ ಎನ್ನುತ್ತಾರೆ ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚಂದ್ರಕಲಾ ಹಾಗೂ ಕಾರ್ಯದರ್ಶಿ ನಿತಿನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಆರ್‌ಟಿಐ ಮಾಹಿತಿ ಪ್ರಕಾರ 2020–21ನೇ ಸಾಲಿನ 26,236 ವಿದ್ಯಾರ್ಥಿಗಳಿಗೆ, 2021–22ನೇ ಸಾಲಿಗೆ 1,07,735, 2022–23ನೇ ಸಾಲಿಗೆ 1,04,376 ಹಾಗೂ 2023–24ನೇ ಸಾಲಿಗೆ 2,52,025 ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ ಇಲಾಖೆಯಿಂದ ಶಿಷ್ಯವೇತನ ದೊರಕಿಲ್ಲ ಎಂದು ಮಾಹಿತಿ ನೀಡಿದರು.

ಮೈಸೂರಲ್ಲಿ 31,669 ವಿದ್ಯಾರ್ಥಿಗಳು: ಅಂತೆಯೇ ಮೈಸೂರು ಜಿಲ್ಲೆಯಲ್ಲಿ 2020–21ನೇ ಸಾಲಿಗೆ 2,545 ವಿದ್ಯಾರ್ಥಿಗಳು, 2021–22ನೇ ಸಾಲಿಗೆ 5,486, 2022–23ನೇ 6,028, 2023–24ನೇ ಸಾಲಿಗೆ 17,610 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 31,669 ವಿದ್ಯಾರ್ಥಿಗಳಿಗೆ ಹಿಂದುಳಿದ, ಅಲ್ಪಸಂಖ್ಯಾತ ಇಲಾಖೆಯಿಂದ ಶಿಷ್ಯವೇತನ ದೊರಕಿಲ್ಲ.

ಮೈಸೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಡಿ 2022–23ನೇ ಸಾಲಿಗೆ 900 ವಿದ್ಯಾರ್ಥಿಗಳು, 2023–24ನೇ ಸಾಲಿಗೆ 568, 2024–25ನೇ ಸಾಲಿಗೆ 4,345 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 5,813 ವಿದ್ಯಾರ್ಥಿಗಳಿಗೆ ಶಿಷ್ಯವೇತನ ದೊರಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗ್ಯಾರಂಟಿಗಳ ಮೋಹಕ್ಕೆ ಬಿದ್ದಿರುವ ರಾಜ್ಯದ ಮತದಾರರು, ಹಣಕಾಸಿನ ಕೊರತೆಯಿಂದಾಗಿ ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕದೇ ಶಿಕ್ಷಣದಿಂದ ವಂಚಿತರಾಗುತ್ತಿದ್ದರೂ ಇದರ ಬಗ್ಗೆ ಪೋಷಕರು ತಲೆಕೆಡಿಸಿಕೊಳ್ಳುತ್ತಿಲ್ಲ. ಇದು ನಮ್ಮ ಮಕ್ಕಳಿಗೆ ನಾವೇ ಮಾಡುತ್ತಿರುವ ಮಹಾಮೋಸ.

–ಕೆ.ವಸಂತಕುಮಾರ್, ಮಾಜಿ ಸಿಂಡಿಕೇಟ್ ಸದಸ್ಯರು, ಜಾನಪದ ವಿವಿ

ಗ್ರಾಮೀಣ ಬಸ್ ಸಂಚಾರದಲ್ಲಿ ಅಸ್ತವ್ಯಸ್ತ: ನಗರ ಪ್ರದೇಶದಲ್ಲಿ ಪಿಯುಸಿಯಿಂದ ಸ್ನಾತಕೋತ್ತರ ವಿಭಾಗದಲ್ಲಿ ಅಧ್ಯಯನ ಮಾಡುತ್ತಿರುವ ಗ್ರಾಮೀಣ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸಕ್ಕಾಗಿ ಕೆಎಸ್‌ಆರ್‌ಟಿಸಿ ಬಸ್‌ಗಳನ್ನೇ ಅವಲಂಭಿಸುತ್ತಿದ್ದಾರೆ. ಆದರೆ, ಸರ್ಕಾರ ಮಹಿಳೆಯರಿಗೆ ಶಕ್ತಿ ಯೋಜನೆ ಜಾರಿಯಿಂದಾಗಿ ಬಸ್‌ಗಳ ಸೇವೆಯಲ್ಲಿ ವಿದ್ಯಾರ್ಥಿಗಳಿಗೆ ಅಲಭ್ಯತೆ ಎದುರಾಗಿದೆ. ಇದರಿಂದ ಸರಿಯಾದ ಸಮಯಕ್ಕೆ ಕಾಲೇಜು ಹೋಗಲು ಸಾಧ್ಯವಾಗದೇ ವಿದ್ಯಾರ್ಥಿಗಳು ಓದು ನಿಲ್ಲಿಸುವ ಪರಿಸ್ಥಿತಿ ಎದುರಾಗಿದೆ. ಈ ಸಮಸ್ಯೆ ಬಗೆಹರಿಸುವಂತೆ ಸಂಬಂಧಪಟ್ಟ ಸಚಿವರಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಮಾಹಿತಿ ನೀಡಿದರು.

ಅಂಬೇಡ್ಕರ್ ಯುವಕ ಸಂಘದ ನಾಮಫಲಕ ವಿರೂಪ ಖಂಡಿಸಿ

ಜಯಪುರ-ಕಡಕೊಳ ರಸ್ತೆ ತಡೆದು ಪ್ರತಿಭಟನೆ



ಅಂಬೇಡ್ಕರ್ ಯುವಕ ಸಂಘದ ನಾಮಫಲಕ ವಿರೂಪ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಜಯಪುರ, ಜ.28– ಸಮೀಪದ ಸಿಂಧುವಳ್ಳಿಯಲ್ಲಿ ಸೋಮವಾರ ರಾತ್ರಿ ಕಿಡಿಗೇಡಿಗಳು ಅಂಬೇಡ್ಕರ್ ಯುವಕ ಸಂಘದ ನಾಮಫಲಕ ವಿರೂಪಗೊಳಿಸಿರುವುದನ್ನು ಖಂಡಿಸಿ ದಲಿತ ಸಂಘಟನೆಗಳ ಮುಖಂಡರು ಮಂಗಳವಾರ ಜಯಪುರ–ಕಡಕೊಳ ಮುಖ್ಯರಸ್ತೆ ತಡೆದು ಪ್ರತಿಭಟಿಸಿದರು.

ಗ್ರಾಮದ ಅಂಬೇಡ್ಕರ್ ಭವನದ ಪಕ್ಕದಲ್ಲಿ ಗ್ರಾನೈಟ್ ಶಿಲೆಯಲ್ಲಿ ಅಂಬೇಡ್ಕರ್ ಯುವಕ ಸಂಘದ ನಾಮಫಲಕವಿದ್ದು, ಅದರಲ್ಲಿ ಅಂಬೇಡ್ಕರ್ ಭಾವಚಿತ್ರವಿದೆ. ಕಿಡಿಗೇಡಿಗಳು ನಾಮಫಲಕಕ್ಕೆ ಕಲ್ಲಿನಿಂದ ಹೊಡೆದಿರುವ ಕಾರಣ ಭಾವಚಿತ್ರದಲ್ಲಿನ ಕಿವಿ, ಕನ್ನಡಕ ವಿರೂಪಗೊಂಡಿದ್ದು, ನಾಮಫಲಕವು ಬಿರುಕು ಬಿಟ್ಟಿದೆ. ಕಿಡಿಗೇಡಿಗಳನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಡಿವೈಎಸ್ಪಿ ಕರೀಂ ರಾವತ್ ಮತ್ತು ಮೈಸೂರು ದಕ್ಷಿಣ ಪೊಲೀಸ್ ಠಾಣೆ ಎಸ್‌ಐ ಶಾಂತಲಿಂಗಯ್ಯ ಪರಿಶೀಲನೆ ನಡೆಸಿದರು. ಬಳಿಕ ಅಂಬೇಡ್ಕರ್ ನಾಮಫಲಕ ವಿರೂಪಗೊಳಿಸಿದ ಕಿಡಿಗೇಡಿಗಳನ್ನು ಬಂಧಿಸುತ್ತೇವೆ. ರಸ್ತೆ ತಡೆದು ಸಾರ್ವಜನಿಕರಿಗೆ ತೊಂದರೆ ಮಾಡಬೇಡಿ ಎಂದು ಡಿವೈಎಸ್ಪಿ ಕರೀಂ ರಾವತ್ ಮನವಿ ಮಾಡಿದರು. ಇದಕ್ಕೆ ಒಪ್ಪದ ಪ್ರತಿಭಟನಾಕಾರರು ಸ್ಥಳಕ್ಕೆ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಭೇಟಿ ನೀಡಿ ಭರವಸೆ ನೀಡಬೇಕು ಎಂದು ಆಗ್ರಹಿಸಿ ಪ್ರತಿಭಟನೆ ಮುಂದುವರೆಸಿದರು.

ಪ್ರತಿಭಟನಾ ಸ್ಥಳಕ್ಕೆ ಶಾಸಕ ಜಿ.ಟಿ.ದೇವೇ ಗೌಡ, ಜಿಲ್ಲಾಧಿಕಾರಿ ಸಿ.ಲಕ್ಷ್ಮಿ ಕಾಂತರೆಡ್ಡಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣು ವರ್ಧನ್ ಭೇಟಿ ನೀಡಿ ಪ್ರತಿಭಟನಾಕಾರರಿಂದ ಮನವಿ ಪತ್ರ ಸ್ವೀಕರಿಸಿದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಸಿಂಧುವಳ್ಳಿ ಸೂಕ್ಷ್ಮ ಪ್ರದೇಶವಾಗಿದ್ದು, ಇದುವರೆಗೂ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ. ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನದಡಿ ಇಡೀ ದೇಶ ಕಾರ್ಯ ನಿರ್ವಹಿಸುತ್ತಿದೆ. ನಾವೆಲ್ಲರೂ ಅಂಬೇಡ್ಕರ್ ಅವರ ಅನುಯಾಯಿಗಳು. ನಾಮಫಲಕ ವಿರೂಪಗೊಳಿಸಿರುವುದು ಖಂಡನೀಯ. ಕೂಡಲೇ ಕಿಡಿಗೇಡಿಗಳನ್ನು ಪತ್ತೆಹಚ್ಚಿ ಕಾನೂನು ಕ್ರಮ ಜರುಗಿಸಿ ಎಂದು ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಸಿ.ಲಕ್ಷ್ಮಿ ಕಾಂತರೆಡ್ಡಿ ಮಾತನಾಡಿ, ಸಂವಿಧಾನಶಿಲ್ಪಿಗೆ ಅವಮಾನಿಸಿರುವುದು ಅತೀವ ನೋವು ಉಂಟು ಮಾಡಿದೆ. ನಮ್ಮ ಪೊಲೀಸರು ತನಿಖೆ ಕೈಗೊಂಡಿದ್ದು, ಎಫ್‌ಎಸ್‌ಎಲ್ ತಂಡದವರು ಶ್ವಾನದಳ ಮತ್ತು ಬೆರಳಚ್ಚು ತಜ್ಞರು ಮಾಹಿತಿ ಕಲೆ ಹಾಕಿದ್ದು, ತ್ವರಿತವಾಗಿ ಕಿಡಿಗೇಡಿಗಳನ್ನು ಪತ್ತೆ ಹಚ್ಚಿ ಕ್ರಮ ಜರುಗಿಸಲಾಗುವುದು. ಪ್ರತಿಭಟನಾಕಾರರು ಶಾಂತಿಯಿಂದ ವರ್ತಿಸಬೇಕು. ಪ್ರತಿಭಟನೆ ಕೈಬಿಡಬೇಕು ಎಂದು ಮನವಿ ಮಾಡಿದರು. ನಂತರ ಮುಖಂಡರು ಪ್ರತಿಭಟನೆ ಕೈಬಿಟ್ಟರು.

ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ನಾಮಫಲಕ ವಿರೂಪಗೊಳಿಸಿದ ಸ್ಥಳದಲ್ಲಿ ಬ್ಯಾರಿಕೇಡ್ ಅಳವಡಿಸಿದ್ದು, ಭದ್ರತೆಗಾಗಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ.

ಮೈಸೂರು ತಾಲೂಕು ತಹಸೀಲ್ದಾರ್ ಎಂ.ಮಹೇಶ್ ಕುಮಾರ್, ಜಯಪುರ ನಾಡಕಚೇರಿ ಉಪತಹಸೀಲ್ದಾರ್ ಎಂ.ನಿಂಗಪ್ಪ, ಕಂದಾಯ ಅಧಿಕಾರಿ ಲೋಹಿತ್, ಗ್ರಾಮ ಆಡಳಿತ ಅಧಿಕಾರಿ ಭರತ್ ಪ್ರತಿಭಟನಾ ಸ್ಥಳದಲ್ಲಿದ್ದರು.

ಪ್ರತಿಭಟನೆಯಲ್ಲಿ ಮೈಸೂರು ನಗರಪಾಲಿಕೆ ಮಾಜಿ ಮೇಯರ್ ಪುರುಷೋತ್ತಮ್, ಡಾ.ಉಮಾಪತಿ, ಸಿಂಧುವಳ್ಳಿ ಅಂಬೇಡ್ಕರ್ ಸಂಘದ ಅಧ್ಯಕ್ಷ ಚಂದ್ರಕುಮಾರ್, ಕಾರ್ಯದರ್ಶಿ ಪ್ರಭುಕುಮಾರ್, ದಲಿತ ಮುಖಂಡರಾದ ಮಹದೇವು, ಮಹೇಶ್, ಮಹದೇವಯ್ಯ, ಪ್ರಸನ್ನ, ರಮೇಶ್, ವಿಶ್ವನಾಥ ಇತರರಿದ್ದರು.

ವ್ಯಕ್ತಿಯಿಂದ ಮುಖ್ಯಶಿಕ್ಷಕರಿಗೆ ಜಾತಿ ನಿಂದನೆ, ಕರ್ತವ್ಯಕ್ಕೆ ಅಡ್ಡಿ: ಪ್ರಕರಣ ದಾಖಲಾದರೂ

ಕ್ರಮ ಕೈಗೊಳ್ಳದ ಪೊಲೀಸರ ನಡೆ ಖಂಡಿಸಿ ಪ್ರತಿಭಟನೆ



ಜಿಲ್ಲಾ ಪೊಲೀಸ್ ಉಪವರಿಷ್ಠಾಧಿಕಾರಿ ಸಿ.ಮಲ್ಲಿಕ್‌ಗೆ ಪ್ರತಿಭಟನಾಕಾರರು ಮನವಿ ನೀಡಿದರು.

> ಈಗ ದಸ್ತಗಿರಿ ಮಾಡುವ ಕಾನೂನು ಬದಲಾಗಿದೆ. ಸೂಕ್ತ ದಾಖಲೆ ಸಂಗ್ರಹಿಸಿ ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. ಯಾರ ಬಳಿ ದಾಖಲೆ ಇದ್ದರೂ, ಅದನ್ನು ತನಿಖಾಧಿಕಾರಿಗಳಿಗೆ ನೀಡಿ. ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳುತ್ತೇವೆ. ತನಿಖೆ ದಿಕ್ಕು ತಪ್ಪುವುದಿಲ್ಲ.
> -ಸಿ.ಮಲ್ಲಿಕ್, ಜಿಲ್ಲಾ ಪೊಲೀಸ್ ಉಪ ವರಿಷ್ಠಾಧಿಕಾರಿಗಳು.

ಹೆಚ್.ಡಿ.ಕೋಟೆ, ಜ.28– ತಾಲೂಕಿನ ಶಿರಮಳ್ಳಿಯಲ್ಲಿ ವ್ಯಕ್ತಿಯೋರ್ವ ಸರ್ಕಾರಿ ಶಾಲೆ ಮುಖ್ಯ ಶಿಕ್ಷಕರಿಗೆ ಜಾತಿನಿಂದನೆ ಮಾಡಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ, ಯಾವುದೇ ಕ್ರಮಕ್ಕೆ ಮುಂದಾಗದ ಪೊಲೀಸರ ನಡೆ ಖಂಡಿಸಿ ವಿವಿಧ ಸಂಘಟನೆಗಳ ಮುಖಂಡರು ಅಂತರಸಂತೆಯಲ್ಲಿ ಪ್ರತಿಭಟನೆ ನಡೆಸಿದರು.

ಅಂತರಸಂತೆಯ ತಾರಕ ವೃತ್ತದ ಬಳಿ ಜಮಾಯಿಸಿದ ದಲಿತ ಸಂಘರ್ಷ ಸಮಿತಿ ಹಾಗೂ ವಿವಿಧ ಪ್ರಗತಿಪರ ಒಕ್ಕೂಟಗಳ ಸದಸ್ಯರು ಅಲ್ಲಿಂದ ಮೆರವಣಿಗೆಯಲ್ಲಿ ತೆರಳಿ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಮಾತನಾಡಿ, ಶಿರಮಳ್ಳಿಯಲ್ಲಿ ದಲಿತ ಸಮುದಾಯದ 80 ಕುಟುಂಬಗಳಿವೆ. ಆದರೂ ಇಲ್ಲಿವರೆಗೆ ಜಾತಿ ಘರ್ಷಣೆ ಆಗಿರಲಿಲ್ಲ. ಆದರೆ ಅಲ್ಲಿನ ಶಾಲೆಗೆ ದಲಿತ ಸಮುದಾಯದ ಐದಾರು ಶಿಕ್ಷಕರು ನಿಯೋಜನೆಗೊಂಡ ಬಳಿಕ ಬಿಸಿಯೂಟ ವಿತರಣೆ, ತರಗತಿಯಲ್ಲಿ ಮಕ್ಕಳನ್ನು ಕೂರಿಸುವುದರಲ್ಲಿ ತಾರತಮ್ಯದಂತಹ ಬೆಳವಣಿಗೆಗಳಿಗೆ ಕಡಿವಾಣ ಹಾಕಿ ಬದಲಾವಣೆ ತಂದರು. ಅಲ್ಲದೇ ಅಲ್ಲಿನ ಎಸ್‌ಡಿಎಂಸಿ ಅಧ್ಯಕ್ಷರಾಗಿ ದಲಿತ ಸಮುದಾಯವರೇ ನೇಮಕಗೊಂಡರು. ಇದನ್ನು ಸಹಿಸದ ಸೋಮಣ್ಣ ಎಂಬಾತ ಶಾಲೆಯಲ್ಲಿ ಕೆಟ್ಟ ವಾತಾವರಣ ಸೃಷ್ಟಿಸಲು ಪ್ರಯತ್ನಿಸಿದ್ದಾನೆ. ಶಾಲೆ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದಲ್ಲದೆ ಜಾತಿನಿಂದನೆ ಮಾಡಿದ್ದಾರೆ. ಶಾಲೆಗೆ ಕಲ್ಲು ತೂರಾಟ ಮಾಡುವುದು, ಶಾಲೆಯಲ್ಲಿ ಅಶಾಂತಿ ಉಂಟುಮಾಡಿ ಮಕ್ಕಳಲ್ಲಿ ಜಾತಿ ತಾರತಮ್ಯ ಮೂಡುವಂತೆ ಮಾಡಿದ್ದಾನೆ. ಅಲ್ಲದೆ ಮುಖ್ಯಶಿಕ್ಷಕರಿಗೆ ಬೈಕ್‌ನಲ್ಲಿ ಗುದ್ದಿಸಿ ಕೊಲೆ ಮಾಡುವ ಬೆದರಿಕೆ ಹಾಕಿದ್ದಾನೆ. ಈ ಸಂಬಂಧ ಸೋಮಣ್ಣ ವಿರುದ್ಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ, ಪೊಲೀಸರು ಯಾವುದೇ ಕ್ರಮ ಜರುಗಿಸದೆ ಕರ್ತವ್ಯಲೋಪ ಮಾಡಿದ್ದಾರೆ. ಇದನ್ನು ದಲಿತ ಸಮುದಾಯ ಖಂಡಿಸುತ್ತದೆ. ಕೂಡಲೇ ಸೋಮಣ್ಣನನ್ನು ಬಂಧಿಸಿ ಕಾನೂನು ಕ್ರಮಜರುಗಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ಮತ್ತಷ್ಟು ಬಲಗೊಳಿಸುವುದಾಗಿ ಎಚ್ಚರಿಸಿದರು.

ಇದೇ ವೇಳೆ ಜಿಲ್ಲಾ ಉಪ ವರಿಷ್ಠಾಧಿಕಾರಿ ಸಿ.ಮಲ್ಲಿಕ್ ಅವರಿಗೆ ಮನವಿ ಸಲ್ಲಿಸಲಾಯಿತು. ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ನಿಂಗರಾಜು, ತಾಲೂಕು ಸಂಚಾಲಕ ಮಹೇಶ್, ಸರಗೂರು ಸಂಚಾಲಕ ಡಿ.ಎಂ.ಶಿವಶಂಕರ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಬಾಲಯ್ಯ, ಸರಗೂರು ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಮುಖಂಡರಾದ ಚಾ.ನಂಜುಂಡಮೂರ್ತಿ, ಸಿದ್ಧರಾಜು, ದಾಸಯ್ಯ, ಮುತ್ತು ಪರಮೇಶ್, ಡಾ.ಬಿ.ಆರ್. ಅಂಬೇಡ್ಕರ್ ಪ್ರಗತಿಪರ ಒಕ್ಕೂಟ ಅಧ್ಯಕ್ಷ ಕೆ.ಮಂಜು, ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಬುದ್ಧ, ಗೌರವಾಧ್ಯಕ್ಷ ಗೋಪಾಲಸ್ವಾಮಿ, ಉಪಾಧ್ಯಕ್ಷ ಚಿನ್ನಯ್ಯ, ಆದಿ ಕರ್ನಾಟಕ ಮಹಾಸಭಾ ಮಾಜಿ ಅಧ್ಯಕ್ಷ ಶಿವಣ್ಣ, ಗ್ರಾಪಂ ಅಧ್ಯಕ್ಷೆ ರೇಖಾ, ಆಟೋ ಚಾಲಕರ ಸಂಘದ ಅಧ್ಯಕ್ಷ ಶಿವಕುಮಾರ್, ಡಿವೈಎಸ್‌ಪಿ ಗೋಪಾಲಕೃಷ್ಣ, ಸಿಪಿಐಗಳಾದ ಶಬ್ಬೀರ್ ಹುಸೇನ್, ಎನ್.ಮುನಿಯಪ್ಪ, ಎಸ್‌ಐ ಚಂದ್ರಹಾಸ್ ನಾಯಕ್, ಮುಖಂಡರಾದ ಗೋವಿಂದರಾಜು, ಪುಟ್ಟರಾಜು, ರಾಜಣ್ಣ, ಸ್ವಾಮಿ, ನಾಗಯ್ಯ, ನಂಜುಂಡ, ನಾಗರಾಜು, ಮಹದೇವು, ಸೋಮಣ್ಣ, ರಾಜಶೇಖರ್, ದೊರೆಸ್ವಾಮಿ ಸೇರಿದಂತೆ ವಿವಿಧ ಗ್ರಾಮಸ್ಥರು ಹಾಜರಿದ್ದರು.

ಮನುಷ್ಯನ ಬದುಕಿಗೆ ಗುರುಗಳ ಮಾರ್ಗದರ್ಶನ ಅಗತ್ಯ

ಮಾಜಿ ಉಪ ಮುಖ್ಯಮಂತ್ರಿ ಸಿ.ಎನ್.ಅಶ್ವಥನಾರಾಯಣ



ಧಾರ್ಮಿಕ ಸಭೆಯನ್ನು ಮಾಜಿ ಡಿಸಿಎಂ ಸಿ.ಎನ್.ಅಶ್ವಥನಾರಾಯಣ ಉದ್ಘಾಟಿಸಿದರು.

ನಂಜನಗೂಡು, ಜ.28– ಮನುಷ್ಯ ಅರ್ಥಪೂರ್ಣವಾಗಿ ಬದುಕು ಕಟ್ಟಿಕೊಳ್ಳಲು ಆಧ್ಯಾತ್ಮಿಕತೆ, ಧಾರ್ಮಿಕತೆ, ಶರಣರ ಸಂದೇಶ, ಧರ್ಮ ಗುರುಗಳ ಮಾರ್ಗದರ್ಶನ ಅಗತ್ಯ ಎಂದು ಮಾಜಿ ಉಪ ಮುಖ್ಯಮಂತ್ರಿ ಸಿ.ಎನ್.ಅಶ್ವಥ್ ನಾರಾಯಣ ತಿಳಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಧಾರ್ಮಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, 12ನೇ ಶತಮಾನದ ಬಸವೇಶ್ವರರ ಸಂದೇಶಗಳು ಜಾತ್ಯಾತೀತ, ಧರ್ಮಾತೀತ, ಸಮ ಸಮಾಜ ನಿರ್ಮಾಣವಾಗಬೇಕೆಂದು ತಿಳಿಸಿವೆ. ಇತ್ತೀಚಿನ ಕಾಲಘಟ್ಟದಲ್ಲಿ ಸಮಯ ಎಂದರೆ ಹಣ ಎಂಬ ಮನಸ್ಥಿತಿಗೆ ಎಲ್ಲರೂ ಬಂದಿದ್ದೇವೆ. ನಮ್ಮ ಸಂಸ್ಕೃತಿ, ಧಾರ್ಮಿಕತೆ ಹೇಗೆ ಕಾಪಾಡಿಕೊಳ್ಳಬೇಕು ಎಂಬ ಬಗ್ಗೆ ಸುತ್ತೂರು ಶ್ರೀಗಳು ಈ ಜಾತ್ರಾ ಮಹೋತ್ಸವದ ಮೂಲಕ ಸಂದೇಶ ಸಾರುತ್ತಿದ್ದಾರೆ. ಜೊತೆಗೆ ಸಮಾಜದಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ ಎಂದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ದೇಶದ ಧಾರ್ಮಿಕ ನಂಬಿಕೆಗಳು, ಆಚಾರ ವಿಚಾರಗಳು ಮತ್ತೊಬ್ಬರಿಗೆ ನೋವು ತರಿಸುವಂತಾಗದೆ ಶ್ರದ್ಧಾಭಕ್ತಿಯಿಂದ ಪಾಲನೆ ಮಾಡಿದಲ್ಲಿ ಎಲ್ಲರಿಗೂ ಸುಖ ನೆಮ್ಮದಿ ಸಿಗಲಿದೆ. ಸುತ್ತೂರು ಜಾತ್ರಾ ಮಹೋತ್ಸವದ ಮೂಲಕ ಎಲ್ಲರಲ್ಲಿ ಪರಸ್ಪರ ಪ್ರೀತಿ ವಿಶ್ವಾಸ, ಉತ್ಸಾಹ ಹೆಚ್ಚಿಸುವುದಲ್ಲದೆ, ಧಾರ್ಮಿಕತೆಯ ಜೊತೆಗೆ ಕುಸ್ತಿ ಚಿತ್ರಕಲೆ ದೇಸಿ ಆಟಗಳಂತಹ ಕಲೆಗಳಿಗೆ ಪುನರುಜ್ಜೀವನ ನೀಡಲಾಗುತ್ತಿದೆ ಎಂದರು.

> ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಹಿರಿಯರು, ದೇವರ ಬಗ್ಗೆ ಯಾರಿಗೂ ಗೌರವವಿಲ್ಲ. ನಮ್ಮ ಪರಂಪರೆ, ಧಾರ್ಮಿಕ ನಂಬಿಕೆಗಳು ನಶಿಸುತ್ತಿವೆ. ಇಂತಹ ಕಾಲಘಟ್ಟದಲ್ಲಿ ಸುತ್ತೂರು ಸ್ವಾಮೀಜಿಯವರು 12ನೇ ಶತಮಾನದ ಶರಣರ ಸಮಾನತೆಯ ಸಂದೇಶವನ್ನು ಸಾರುತ್ತಿದ್ದು, ಈ ಜಾತ್ರಾ ಮಹೋತ್ಸವದ ಮೂಲಕ ಎಲ್ಲಾ ಜಾತಿ ಧರ್ಮದವರಲ್ಲಿ ಭಾವೈಕ್ಯತೆ ಮೂಡಿಸುತ್ತಿದ್ದಾರೆ. ಜೊತೆಗೆ ಧಾರ್ಮಿಕ ಭಕ್ತಿ, ಕೃಷಿ ಮತ್ತು ಆರೋಗ್ಯ ಕ್ಷೇತ್ರದ ಆವಿಷ್ಕಾರದ ಬಗ್ಗೆ ರೈತರಿಗೆ ಅರಿವು ಮೂಡಿಸುತ್ತಿದ್ದಾರೆ.
> - ಜಿ.ಟಿ.ದೇವೇಗೌಡ, ಶಾಸಕ.

ಕಾರ್ಯಕ್ರಮದಲ್ಲಿ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬಳ್ಳಾರಿ ಹೊಸಪೇಟೆ ಹಾಲಕೆರೆ ಕೊಟ್ಟೂರುಸ್ವಾಮಿ ಮಠದ ಜಗದ್ಗುರು ಶ್ರೀಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ, ತಮಿಳುನಾಡಿನ ಪಳನಿಯ ವಾಲಾರ್ ಶಿವಾನಂದ ಪುಲಿಪ್ಪಾನಿ ಪಾತಿರಕರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಡಿಸಿಎಕ್ಸ್ ಸಿಸ್ಟಮ್ ಅಧ್ಯಕ್ಷ ಡಾ.ಹೆಚ್.ಎಸ್.ರಾಘವೇಂದ್ರರಾವ್, ಯುಎಸ್‌ಎ ಉದ್ಯಮಿ ಬಾಬು, ದಿಲೀಪ್ ಪಾರ್ಥ ಸಾರಥಿ, ವಿದುಷಿ ವಸುಂಧರಾ ದೊರೆಸ್ವಾಮಿ, ನಿಶಾಂತ್, ವೈದ್ಯಕೀಯ ನಿರ್ದೇಶಕರಾದ ಡಾ.ಎಂ.ಎಸ್.ರವೀಂದ್ರ ಸೇರಿದಂತೆ ಹಲವರಿದ್ದರು.

ಕರೋಹಟ್ಟಿ ಗ್ರಾಪಂಗೆ ರೇವಣ್ಣ ಉಪಾಧ್ಯಕ್ಷ



ಕರೋಹಟ್ಟಿ ಗ್ರಾಪಂ ಉಪಾಧ್ಯಕ್ಷರಾಗಿ ರೇವಣ್ಣ ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ, ಜ.28– ತಾಲೂಕಿನ ಕರೋಹಟ್ಟಿ ಗ್ರಾಪಂ ನೂತನ ಉಪಾಧ್ಯಕ್ಷರಾಗಿ ಕೇತಹಳ್ಳಿ ರೇವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷ ನಾಗರಾಜು ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಮಂಗಳವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ರೇವಣ್ಣ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಕಾವೇರಿ ನೀರಾವರಿ ನಿಗಮದ ಎಇಇ ಮಂಜುನಾಥ್ ಘೋಷಿಸಿದರು. ನೂತನ ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಅವರ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಚುನಾವಣೆ ಸಭೆಯಲ್ಲಿ ಅಧ್ಯಕ್ಷೆ ಮಂಜುಳಾ, ನಿಕಟಪೂರ್ವ ಉಪಾಧ್ಯಕ್ಷ ನಾಗರಾಜು, ಸದಸ್ಯರಾದ ಕೆ.ಬಿ.ಜಗದೀಶ್, ಪುಟ್ಟಸ್ವಾಮಿ, ಎಸ್.ಎಲ್.ಜಯಶ್ರೀ, ನಂದಿನಿ, ಪ್ರಭು, ಪುಟ್ಟಬಸಮ್ಮ, ಸುಶೀಲಮ್ಮ, ಸುರೇಶ್, ಪಿ.ಮಂಜು ಹಾಜರಾಗಿದ್ದರೆ, ಸದಸ್ಯರಾದ ಸವಿತಾ, ದಿವ್ಯ, ಕೆ.ಎನ್.ನಾಗರಾಜು, ಮಮತ, ಪ್ರಕಾಶ್, ಸಿದ್ದಮ್ಮ ಹಾಗೂ ಗೋವಿಂದ್ ಗೈರಾಗಿದ್ದರು.

ನೂತನ ಉಪಾಧ್ಯಕ್ಷ ರೇವಣ್ಣ ಮಾತನಾಡಿ, ಸರ್ವ ಸದಸ್ಯರ ಸಹಕಾರದೊಂದಿಗೆ ಗ್ರಾಪಂ ವ್ಯಾಪ್ತಿಯಲ್ಲಿ ಕುಡಿಯುವ ನೀರು, ಬೀದಿದೀಪ, ಚರಂಡಿ ಸೇರಿದಂತೆ ಮೂಲ ಸೌಕರ್ಯ ಒದಗಿಸುವ ಕಡೆ ಹೆಚ್ಚು ಗಮನ ಹರಿಸಲಾಗುವುದು. ಸಚಿವರು, ಸಂಸದರನ್ನು ಭೇಟಿ ಮಾಡಿ ಪಂಚಾಯಿತಿಗೆ ಹೆಚ್ಚಿನ ಅನುದಾನ ತರಲು ಅಧ್ಯಕ್ಷರಿಗೆ ಸಹಕಾರ ನೀಡುವುದಾಗಿ ತಿಳಿಸಿದರು.

ಗುತ್ತಿಗೆದಾರ ಕೇತಹಳ್ಳಿ ರಾಜಣ್ಣ, ಚಿಕ್ಕಣ್ಣ, ಪಿಡಿಓ ಸುಲೇಮಾನ್ ರಾಜ್, ಮಾಜಿ ಅಧ್ಯಕ್ಷ ಚಿಕ್ಕಣ್ಣ ಮುಖಂಡರಾದ ಕೇತಹಳ್ಳಿ ಲಿಂಗರಾಜು, ಪುಟ್ಟಸ್ವಾಮಿ, ರೇವಣ್ಣ, ಗುರುಮಲ್ಲಪ್ಪ ಬನ್ನಹಳ್ಳಿ ಸೋಮಣ್ಣ, ಬಿಲ್ ಕಲೆಕ್ಟರ್ ರಾಜು, ಗಣಕಯಂತ್ರ ನಿರ್ವಾಹಕಿ ಶೈಲಾ ಇತರರಿದ್ದರು.

ಅವಿರೋಧವಾಗಿ ಆಯ್ಕೆ

ಮೈಸೂರು, ಜ. 28 – ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕಂದಾಯ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ 2025–26 ರಿಂದ 2029–30ನೇ 5 ವರ್ಷಗಳ ಅವಧಿಗೆ ನೀಲಕಂಠಸ್ವಾಮಿ ಅವರ ನೇತೃತ್ವದಲ್ಲಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಿ.ಆರ್. ರಾಮೇಗೌಡ, ಎಸ್. ಪ್ರಸನ್ನ, ಬಿ. ರಾಮಚಂದ್ರ, ಎಂ. ನೀಲಕಂಠಸ್ವಾಮಿ, ಎಂ.ಕೆ. ಯೋಗೇಂದ್ರಕುಮಾರ್, ಸಿ.ಎಲ್. ಪ್ರಶಾಂತ್, ಪಿ.ಎನ್. ಸಂಜೀವ್ ಕುಮಾರ್, ಎಂ. ಮಹದೇವ, ಎಂ.ಬಿ. ರವಿಶಂಕರ್, ಸಬಾಸ್ಟಿನ್ ಜಾರ್ಜ್, ಎನ್.ಜಯಮಣಿ, ಜಿ. ರಾಮಚಂದ್ರ, ಎಸ್. ಮಹದೇವಶೆಟ್ಟಿ, ಲಕ್ಷ್ಮೀನಾರಾಯಣ, ಕೆ.ಪಿ. ಹೇಮಂತ್, ಎಸ್. ಮಾನಸ, ಎಂ.ಎಸ್. ಯದುಗಿರಿ, ಎಸ್.ಎನ್. ವರುಣ್, ಬಿ. ಲತಾ ಆಯ್ಕೆಯಾಗಿದ್ದಾರೆ.

ಉತ್ತಮ ಪ್ರಜೆಗಳ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅಪಾರ



ಶಾಲಾ ವಾರ್ಷಿಕೋತ್ಸವವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ಮಲ್ಕುಂಡಿ, ಜ.28– ಉತ್ತಮ ಪ್ರಜೆಗಳ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅಪಾರ ಎಂದು ಶಾಸಕ ದರ್ಶನ್ ತಿಳಿಸಿದರು.

ಸಮೀಪದ ಹೆಡಿಯಾಲ ಗ್ರಾಮದ ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಬಾಲ್ಯದಿಂದಲೇ ಜವಾಬ್ದಾರಿ ಅರಿಯಬೇಕು. ಪೋಷಕರ ಕನಸ್ಸನ್ನು ನನಸು ಮಾಡಲು ಶ್ರಮಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಉತ್ತಮ ಪ್ರಜೆಯನ್ನಾಗಿಸುವ ಜವಾಬ್ದಾರಿ ಶಿಕ್ಷಕರದ್ದಾಗಿರುತ್ತದೆ. ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳ ಮೂಲಕ ತಮ್ಮ ಪ್ರತಿಭೆ ಅನಾವರಣಗೊಳಿಸಬೇಕು. ಗ್ರಾಮೀಣ ಭಾಗದಲ್ಲಿ ಇಂತಹ ಸಂಸ್ಥೆ ಪ್ರಾರಂಭಿಸಿ ಉತ್ತಮ ಶಿಕ್ಷಣ ನೀಡುತ್ತಿರುವುದು ಸಂತೋಷದ ವಿಷಯ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಮಹೇಶ್, ಎಂ.ಬಿ.ಸಂದೀಪ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಡಿಡಿಪಿಐ ಜವರೇಗೌಡ, ರವಿಶಂಕರ್, ಸಂಸ್ಥೆ ಕಾರ್ಯದರ್ಶಿ ಮಹದೇವಸ್ವಾಮಿ, ರಫೀಕ್ ಅಲಿ, ಬಿಇಓ ಮಹೇಶ್, ಬಸವರಾಜ್, ಕಡ್ಡಜಟ್ಟಿ ಮಹೇಶ್ ಸೇರಿದಂತೆ ಇತರರಿದ್ದರು.

ಕೇರಳ ಸಾರಿಗೆ ಬಸ್ ಡಿಕ್ಕಿ: ವ್ಯಕ್ತಿ ಸಾವು

ಹುಣಸೂರು, ಜ.28– ಕೇರಳಕ್ಕೆ ಸೇರಿದ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಹರೀನಹಳ್ಳಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ವಿಶ್ವರಾಧ್ಯ(81) ಸಾವನ್ನಪ್ಪಿದವರು. ಈತ ಜ.25ರಂದು ಮುಂಜಾನೆ ವಾಕಿಂಗ್‌ಗೆ ಹೋಗಿದ್ದ ವೇಳೆ ಗ್ರಾಮದ ಬಳಿ ಹಾದು ಹೋಗಿರುವ ಗೋಣಿಕೊಪ್ಪ–ಹುಣಸೂರು ರಾಜ್ಯ ಹೆದ್ದಾರಿಯಲ್ಲಿ ಗೋಣಿಕೊಪ್ಪ ಕಡೆಯಿಂದ ಹುಣಸೂರು ಕಡೆಗೆ ತೆರಳುತ್ತಿದ್ದ ವೇಳೆ ಕೇರಳಕ್ಕೆ ಸೇರಿದ ಸಾರಿಗೆ ಬಸ್ ಡಿಕ್ಕಿ ಹೊಡೆದಿದೆ. ತಕ್ಷಣ ಅವರನ್ನು ಸ್ಥಳೀಯರ ಸಹಾಯದೊಂದಿಗೆ ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಕೆಆರ್. ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ವಿಶ್ವರಾಧ್ಯ ಸಾವನ್ನಪ್ಪಿದ್ದಾರೆ. ಘಟನೆ ಸಂಬಂಧ ಮೃತರ ಪುತ್ರ ಬಸವರಾಧ್ಯ ಹುಣಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸುತ್ತೂರು ಮಠ ಸಂಸ್ಕೃತಿ, ಪರಂಪರೆ ಉಳಿಸಿದೆ

ಸಚಿವ ಶಿವಾನಂದ ಎಸ್.ಪಾಟೀಲ್



ಕಾರ್ಯಕ್ರಮದಲ್ಲಿ ಸಚಿವ ಶಿವಾನಂದ ಎಸ್.ಪಾಟೀಲ್ ಮಾತನಾಡಿದರು.

ನಂಜನಗೂಡು, ಜ.28– ಸುತ್ತೂರು ಮಠ ನಮ್ಮ ಕೃಷಿ, ಸಂಸ್ಕೃತಿ, ಪರಂಪರೆಗಳನ್ನು ಉಳಿಸಿ ಬೆಳೆಸುವ ಮೂಲಕ ದೇಶದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದೆ ಎಂದು ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ್ ತಿಳಿಸಿದರು.

ತಾಲೂಕಿನ ಸುತ್ತೂರು ಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಮಂಗಳವಾರ ಚಿತ್ರಕಲೆ, ಗಾಳಿಪಟಸ್ಪರ್ಧೆ, ದನಗಳ ಜಾತ್ರೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ವಿಜಯಪುರ ಭಾಗದಲ್ಲಿ ಜಾತ್ರೆಗಳು ಒಂದು ದಿನ ನಡೆದರೆ ಹೆಚ್ಚು. ಆದರೆ ಶ್ರೀಗಳು ಸುತ್ತೂರು ಜಾತ್ರೆಯನ್ನು 6 ದಿನ ನಡೆಸುವ ಮೂಲಕ ನಮ್ಮ ಸಂಸ್ಕೃತಿಯ ಭಾಗವಾದ ಕೃಷಿ, ನಾಟಕ, ಕುಸ್ತಿ, ಭಜನೆ, ಚಿತ್ರಕಲೆ, ಸಂಗೀತ ಕಲೆಗಳಿಗೆ ಅವಕಾಶ ನೀಡಿ ನಮ್ಮ ಪರಂಪರೆಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ದನಗಳ ಜಾತ್ರೆಯಲ್ಲಿ ಭೇಟಿಯಾದ ಒಬ್ಬ ರೈತ ಹಳ್ಳಿಕಾರ್ ತಳಿ ರಕ್ಷಣೆಗಾಗಿ ನೂರು ಹಳ್ಳಿಕಾರ್ ದನಗಳನ್ನು ಉಚಿತವಾಗಿ ಸಾಕಲು ನೀಡಿದ್ದೇನೆ ಎಂದಾಗ ನಾನು ಆಶ್ಚರ್ಯಚಕಿತನಾದೆ. ಸುತ್ತೂರು ಶ್ರೀ ಮಠದ ಪ್ರೇರಣೆಯಿಂದಾಗಿ ಇಂತಹ ಸಮಾಜ ಸೇವಾ ಕಾರ್ಯಗಳು ಸಾಧ್ಯವಾಗಿವೆ. ನಮ್ಮ ಉತ್ತರ ಕರ್ನಾಟಕದ ಗಡಿಭಾಗದಲ್ಲಿ ಸಿದ್ದೇಶ್ವರ ಜಾತ್ರೆ ನಡೆಸುತ್ತೇವೆ. ಸಿದ್ದೇಶ್ವರ ಸ್ವಾಮೀಜಿ ನೀರಿಲ್ಲದ ಊರುಗಳಿಗೆ ಕೆರೆಗಳನ್ನು ಕಟ್ಟಿಸುವ ಮೂಲಕ ಸಾಮಾಜಿಕ ಕ್ರಾಂತಿ ಮಾಡಿದರು. ಜಗತ್ತಿಗೆ ದಾರ್ಶನಿಕರಾಗಿ ಪ್ರವಚನ ನೀಡಿದ್ದರು. ಅಂತಹ ಮಹಾತ್ಮರನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಸುತ್ತೂರು ಮಠಕ್ಕೆ ಸಲ್ಲುತ್ತದೆ. ಮೈಸೂರು ದಸರಾ ನಂತರ ಸುತ್ತೂರು ಜಾತ್ರೆ ನಾಡಿನಾದ್ಯಂತ ಪ್ರಸಿದ್ಧವಾಗಿದೆ ಎಂದರು.

ಶಾಸಕ ಅಡಗೂರು ಹೆಚ್.ವಿಶ್ವನಾಥ್ ಮಾತನಾಡಿ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣದ ಜೊತೆಗೆ ಬದುಕನ್ನು ಪಡೆದುಕೊಂಡವನು ನಾನು. ವಿದ್ಯಾರ್ಥಿ ದೆಸೆಯಲ್ಲಿಯೇ ಕ್ರೀಡೆ, ಚುನಾವಣೆ, ರಾಜಕೀಯ ಪರಿಚಯವಾಯಿತು. ರಾಜೇಂದ್ರ ಶ್ರೀಗಳಿಂದ ಜೀವನದಲ್ಲಿ ಶಿಸ್ತು, ಸಮಯ ಪಾಲನೆ ಕಲಿತೆ. ಮಠದ ಪ್ರೇರಣೆಯಿಂದಾಗಿಯೇ ನನ್ನ ಮಕ್ಕಳಿಗೆ ಸಾಮೂಹಿಕ ಸರಳ ವಿವಾಹ ಮಾಡಿದೆ. ಶ್ರೀಮಠ ಅಕ್ಷರ–ಆರೋಗ್ಯ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಜನಸೇವೆ ಮಾಡಿದೆ ಎಂದರು.

ಕಾರ್ಯಕ್ರಮದಲ್ಲಿ ಕೆಸರುಗದ್ದೆ ಓಟದ ಸ್ಪರ್ಧೆಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು. 5ನೇ ತರಗತಿ ವಿದ್ಯಾರ್ಥಿ ಕುಂಚಕಲೆ ಪ್ರದರ್ಶನ ನೀಡಿದರು. ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಪಾದಂಗಳು, ಅರ್ಜುನ್ ಗುರೂಜಿ, ದಿವ್ಯ ಸಾನಿಧ್ಯವಹಿಸಿದ್ದರು. ಕರ್ನಾಟಕ ಲೋಕ ಸೇವಾ ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್.ಸಾಹುಕಾರ್, ಸದಸ್ಯರಾದ ನರೇಂದ್ರ, ಗೀತಾ ಸೇರಿದಂತೆ ಹಲವರಿದ್ದರು. ಬಿ.ಎಲ್.ತ್ರಿಪುರಾಂತಕ ಸ್ವಾಗತಿಸಿದರು.

ತಿ.ನರಸೀಪುರದಲ್ಲಿ ನಡೆಯುವ ಕುಂಭಮೇಳಕ್ಕೆ ದಿನಗಣನೆ ಆರಂಭ

ಸಿದ್ಧತೆ ಕೈಗೊಳ್ಳದೇ ಅಧಿಕಾರಿಗಳಿಂದ ನಿರ್ಲಕ್ಷ್ಯತನ

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಆರೋಪ



ಸುದ್ದಿಗೋಷ್ಠಿಯಲ್ಲಿ ತಾಪಂ ಮಾಜಿ ಅಧ್ಯಕ್ಷ ಬಿ.ಮರಯ್ಯ ಮಾತನಾಡಿದರು.

ತಿ.ನರಸೀಪುರ, ಜ.28– ತಿರುಮಕೂಡಲು ನರಸೀಪುರದಲ್ಲಿ ನಡೆಯುವ ಕುಂಭಮೇಳಕ್ಕೆ ದಿನಗಣನೆ ಆರಂಭವಾಗಿದ್ದರೂ, ಯಾವುದೇ ಸಿದ್ಧತೆ ಕೈಗೊಳ್ಳದೇ ಅಧಿಕಾರಿಗಳು ನಿರ್ಲಕ್ಷ್ಯತನ ಪ್ರದರ್ಶಿಸುತ್ತಿದ್ದಾರೆ ಎಂದು ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಆರೋಪಿಸಿದರು.

ಪಟ್ಟಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.10 ರಿಂದ ಮೂರು ದಿನಗಳ ಕಾಲ ತ್ರಿವೇಣಿ ಸಂಗಮದಲ್ಲಿ ಕುಂಭಮೇಳ ನಡೆಯಲಿದೆ. ಆದರೆ ಇದುವರೆಗೂ ಅಧಿಕಾರಿಗಳು ಯಾವುದೇ ರೀತಿಯ ಪೂರ್ವ ಸಿದ್ಧತೆ ಕೈಗೊಳ್ಳದೇ ನಿರ್ಲಕ್ಷ್ಯತೆ ವಹಿಸಿದ್ದು, ಕೆಲವೇ ದಿನಗಳಲ್ಲಿ ಅಗತ್ಯ ಪೂರ್ವ ಸಿದ್ಧತೆ ಕೈಗೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿದ ಅವರು, ಅಧಿಕಾರಿಗಳು ಈಗಲಾದರೂ ಎಚ್ಚೆತ್ತುಕೊಂಡು 3 ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳದ ಯಶಸ್ಸಿಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

ನಂಜನಗೂಡಿನ ಸುತ್ತೂರು ಜಾತ್ರೆ, ಮೈಸೂರು ದಸರಾಗೆ ಅಧಿಕಾರಿಗಳು ತಿಂಗಳುಗಟ್ಟಲೇ ಸಿದ್ಧತೆ ಕೈಗೊಳ್ಳುತ್ತಾರೆ. ಆದರೆ ಕುಂಭಮೇಳಕ್ಕೆ ಅಸಡ್ಡೆ ತೋರುತ್ತಿರುವುದು ಖಂಡನೀಯ. ಮೇಳಕ್ಕೆ ಕೇವಲ 12 ದಿನ ಬಾಕಿ ಇದ್ದು, ಯಾವುದೇ ಪ್ರಚಾರ ಕೈಗೊಂಡಿಲ್ಲದಿರುವುದು ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಎಂಎಲ್‌ಸಿ ಡಾ.ಯತೀಂದ್ರ ಅವರು ಈಗಾಗಲೇ ಕುಂಭಮೇಳ ಆಚರಣೆ ಸಂಬಂಧ ಪೂರ್ವಭಾವಿ ಸಭೆ ನಡೆಸಿ ಅಧಿಕಾರಿಗಳಿಗೆ ಸಿದ್ಧತೆ ಕೈಗೊಳ್ಳಲು ಸೂಚನೆ ನೀಡಿ 10 ಕೋಟಿ ಬಿಡುಗಡೆ ಮಾಡುವ ಭರವಸೆ ನೀಡಿದ್ದರೂ ಅಧಿಕಾರಿಗಳು ಯಾವುದೇ ಸಿದ್ಧತೆಗೆ ಮುಂದಾಗಿಲ್ಲ ಎಂದು ದೂರಿದರು.

ಕುಂಭಮೇಳಕ್ಕೆ ಬರುವ ಭಕ್ತರಿಗೆ ಅಗತ್ಯ ಮೂಲ ಸೌಕರ್ಯ ಸೇರಿದಂತೆ ಯಾಗ ಮಂಟಪ, ಸ್ವಾಮೀಜಿಗಳಿಗೆ ಕುಟೀರ ನಿರ್ಮಾಣ, ಪಾರ್ಕಿಂಗ್ ವ್ಯವಸ್ಥೆ, ಕುಡಿಯುವ ನೀರು, ವೈದ್ಯಕೀಯ ಸೌಲಭ್ಯ, ತೂಗು ಸೇತುವೆ ಸೇರಿದಂತೆ ಮತ್ತಿತರ ಕೆಲಸಗಳಲ್ಲದೇ ಶಾಶ್ವತ ಕಾಮಗಾರಿ ಮಾಡಬೇಕಿದೆ. ಆ ನಿಟ್ಟಿನಲ್ಲಿ ಅಧಿಕಾರಿಗಳು ತ್ವರಿತ ಕಾಮಗಾರಿಗೆ ಮುಂದಾಗಬೇಕಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ತಮ್ಮ ಸ್ವಕ್ಷೇತ್ರದಲ್ಲಿ ನಡೆಯುತ್ತಿರುವ ದಕ್ಷಿಣ ಭಾರತದ ಕುಂಭಮೇಳದ ಯಶಸ್ಸಿಗೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಬೇಕು ಎಂದು ಮನವಿ ಮಾಡಿದರು. ಅಲ್ಲದೇ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳದಿದ್ದರೇ ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದರು.

> ಈ ಹಿಂದಿನ ಕುಂಭಮೇಳಗಳಲ್ಲಿ ಸುತ್ತೂರು, ಆದಿಚುಂಚನಗಿರಿಶ್ರೀಗಳು ಸೇರಿದಂತೆ ಇತರೆ ಸ್ವಾಮೀಜಿಗಳು ಕುಂಭಮೇಳ ನಡೆಯುವ ಜಾಗ ಪರಿಶೀಲಿಸಿ ಜನಪ್ರತಿನಿಧಿಗಳ ಸಭೆ ಕರೆದು ಸ್ಥಳೀಯರಿಗೆ ಕುಂಭಮೇಳದ ಕೆಲಸಗಳನ್ನು ನಿರ್ವಹಿಸಲು ನಿರ್ದೇಶನ ನೀಡುತ್ತಿದ್ದರು. ಆದರೆ ಕುಂಭಮೇಳ ಆರಂಭವಾಗಲು ಕೇವಲ 12 ದಿನ ಮಾತ್ರ ಬಾಕಿ ಇದ್ದರೂ ಯಾವುದೇ ಸ್ವಾಮೀಜಿಗಳು ಭೇಟಿ ಕೊಟ್ಟಿಲ್ಲ. ಹಾಗಾಗಿ ತಿ.ನರಸೀಪುರ ಕುಂಭಮೇಳ ಕಡೆಗಣನೆ ಮಾಡಲಾಗುತ್ತಿದೆ. ಕಾಟಾಚಾರಕ್ಕೆಂಬಂತೆ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ ಮರಯ್ಯ ಅಧಿಕಾರಿಗಳಿಗೆ ಕೆಲಸ ನಿರ್ವಹಣೆ ಮಾಡಲು ಸಾಧ್ಯವಾಗದಿದ್ದಲ್ಲಿ ಸ್ಥಳೀಯ ಸಂಸ್ಥೆಗೆ ವಹಿಸಿಕೊಡುವಂತೆ ಒತ್ತಾಯಿಸಿದರು.

ಮೇಳದಲ್ಲಿ ಚೈತ್ರಾ ಸನ್ಮಾನಿಸಿ: ಖೋ ಖೋ ವಿಶ್ವಕಪ್‌ನಲ್ಲಿ ದೇಶವನ್ನು ಪ್ರತಿನಿಧಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ನಮ್ಮ ತಾಲೂಕಿನ ಹೆಮ್ಮೆಯ ಆಟಗಾರ್ತಿ ಬಿ.ಚೈತ್ರಾ ಅವರನ್ನು ಕುಂಭಮೇಳದಲ್ಲಿ ಸನ್ಮಾನಿಸಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಹಾಪ್‌ಕಾಮ್ಸ್ ಮಾಜಿ ನಿರ್ದೇಶಕ ಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ಘಟಕ ಮಹದೇವು, ಮುಖಂಡರಾದ ಚಿಕ್ಕಲಿಂಗಯ್ಯ, ಆಲಗೂಡು ರಾಜು ಹಾಜರಿದ್ದರು.

ಹರದನಹಳ್ಳಿ ಶಾಲೆಯಲ್ಲಿ ಗಣರಾಜ್ಯೋತ್ಸವ



ನಂಜನಗೂಡು ತಾಲೂಕಿನ ಹರದನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಮಜಹರ್ ಪಾಷ, ಸದಸ್ಯರಾದ ರವಿ, ಶಿವಮ್ಮ, ಚಿಕ್ಕಮ್ಮ, ಜವರಯ್ಯ, ನಿವೃತ್ತ ಶಿಕ್ಷಕ ರಂಗರಾಮಯ್ಯ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಬಸವರಾಜಯ್ಯ, ಮಾಜಿ ಉಪಾಧ್ಯಕ್ಷ ಶಿವಮಲ್ಲಪ್ಪ, ಗ್ರಾಪಂ ಸದಸ್ಯರಾದ ಬಸಪ್ಪ, ಪ್ರೇಮ, ಬಸಮ್ಮ ಇನ್ನಿತರರಿದ್ದರು.

ಗಾಲ್ಫ್ ಲೀಗ್ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್‌ಗೆ ಟ್ರೋಫಿ

ಮೈಸೂರು, ಜ. 28– ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನಲ್ಲಿ (ಜೆಡಬ್ಲ್ಯುಜಿಸಿ) ಆಯೋಜಿಸಲಾಗಿದ್ದ ಮೈಸೂರು ಗಾಲ್ಫ್ ಲೀಗ್ (ಎಂಜಿಎಲ್) ಗಾಲ್ಫ್ ಪಂದ್ಯಾವಳಿಯಲ್ಲಿ ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕರಾದ ಕ್ಯಾಪ್ಟನ್ ಅರ್ಜುನ್ ರಂಗ ನೇತೃತ್ವದ ಮೈಸೂರು ವಾರಿಯರ್ಸ್ ಗಾಲ್ಫ್ ಕ್ಲಬ್ ವಿಜಯಶಾಲಿಯಾಗಿ ಹೊರಹೊಮ್ಮಿದೆ.

ಅಂತಿಮ ಹಂತದಲ್ಲಿ ಮೈಸೂರು ವಾರಿಯರ್ಸ್ ಮತ್ತು ರಾಜ್ ಇನ್ಫ್ರಾ ಗ್ರೀನ್ ಲೆಜೆಂಡ್ಸ್ ಮಧ್ಯೆ ತೀವ್ರ ಹಣಾಹಣಿ ನಡೆದು ಕಡೆಗೆ ಮೈಸೂರು ವಾರಿಯರ್ಸ್ 3–2 ಗೋಲುಗಳಿಂದ ರಾಜ್ ಇನ್ಫ್ರಾ ಗ್ರೀನ್ ಲೆಜೆಂಡ್ಸ್ ವಿರುದ್ಧ ಜಯ ಸಾಧಿಸಿ ಟ್ರೋಫಿ ತನ್ನದಾಗಿಸಿಕೊಂಡಿದೆ.



ಪ್ರತಿಷ್ಠಿತ ಈ ಗಾಲ್ಫ್ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್, ಗ್ರ್ಯಾಂಡ್ ಸೆರಿನ್ ರಾಯಲ್ಸ್, ವಾಕ್‌ವೇಟ್ ಏಸಸ್, ಗ್ರಾವಿಟಿ ಒನ್ ವನಜ, ನಕ್ಷಾ ಮಾಸ್ಟರ್ಸ್, ಸ್ಯಾಂಡಲ್ ವುಡ್ ಸ್ಟ್ರೈಕರ್ಸ್, ವಾಕ್‌ಮೇಟ್ ಏಸಸ್ ಮತ್ತು ಸಾನ್ವಿಸ್ ಮೈಸೂರು ಟೈಗರ್ಸ್ ಸೇರಿದಂತೆ ಒಟ್ಟು ಎಂಟು ತಂಡಗಳು ಸ್ಪರ್ಧಿಸಿದ್ದವು. ವಿವಿಧ ಸ್ವರೂಪಗಳಲ್ಲಿ ಸ್ಪರ್ಧೆ ನಡೆಸಲಾಗಿದ್ದು, ಜನವರಿ 25ರಂದು ಅಂತಿಮ ಸುತ್ತಿನ ಸ್ಪರ್ಧೆ ನಡೆದು ಮೈಸೂರು ವಾರಿಯರ್ಸ್ ಗಾಲ್ಫ್ ಕ್ಲಬ್ ಕಪ್ ಗೆದ್ದುಕೊಂಡಿದೆ.

ಈ ಸಂದರ್ಭದಲ್ಲಿ ಸಂತಸ ಹಂಚಿಕೊಂಡ ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕರಾದ ಅರ್ಜುನ್ ರಂಗ ಅವರು, ಈ ಗೆಲುವು ಸಂತೋಷ ತಂದಿದೆ. ಮೈಸೂರು ವಾರಿಯರ್ಸ್ ಗಾಲ್ಫ್ ಕ್ಲಬ್‌ಗೆ ಬಹಳ ಹೆಮ್ಮೆಯ ಕ್ಷಣವಾಗಿದೆ. ನಮ್ಮ ತಂಡದ ಪರಿಶ್ರಮ ಮತ್ತು ಬದ್ಧತೆಗೆ ಈ ಗೆಲುವು ಪುರಾವೆಯಾಗಿದೆ. ಮೈಸೂರು ಗಾಲ್ಫ್ ಲೀಗ್ ಪಂದ್ಯಾವಳಿಯು ಮೈಸೂರಿನ ಎಲ್ಲಾ ಗಾಲ್ಫ್ ಆಟಗಾರರಿಗೆ ಸಂಭ್ರಮವನ್ನು ತಂದಿದೆ ಎಂದು ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಸಂಕ್ರಾಂತಿಕಿ ವಸ್ತುನ್ನಾಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ರುದ್ರ ಗರುಡ ಪುರಾಣ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಮಾರ್ಕೋ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಫಾರೆಸ್ಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಫಾರೆಸ್ಟ್ (ಕ)	5 ಪ್ರದರ್ಶನಗಳು
ರಾಜಕಮಲ್	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ಭೂ ಮಂತರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಕೈ ಫೋರ್ಸ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಮ್ಯಾಕ್ಸ್ (ಕ)	4 ಪ್ರದರ್ಶನಗಳು

ಅಶೋಕಪುರಂ ಉದ್ಯಾನವನದಲ್ಲಿ ಸಂವಿಧಾನ ದಿನ ಆಚರಣೆ



ಡಾ. ಬಿ.ಆರ್.ಅಂಬೇಡ್ಕರ್ ದಲಿತ ಮಹಿಳಾ ಸಂಘದ ವತಿಯಿಂದ ಗಣರಾಜ್ಯೋತ್ಸವದ ಅಂಗವಾಗಿ ಮೈಸೂರಿನ ಅಶೋಕಪುರಂ ಡಾ. ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿ ಸಂವಿಧಾನ ದಿನವನ್ನು ಆಚರಿಸಲಾಯಿತು. ಪತ್ರಕರ್ತೆ ರಶ್ಮಿ ಕೋಟಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ಮುಖಂಡರಾದ ರಾಮಸ್ವಾಮಿ, ಸಿದ್ದುಸ್ವಾಮಿ, ವಾಸು, ಸಿದ್ದರಾಜು(ಅನಿಲ್), ಶಿವಸ್ವಾಮಿ, ಈಶ್ವರ್, ಮಹೇಶ್, ಮಾಜಿ ಕಾರ್ಪೊರೇಟರ್ ಭುವನೇಶ್ವರಿ, ಪಲ್ಲವಿ ಬೇಗಂ, ಗೋವಿಂದರಾಜು, ದಲಿತ ಮಹಿಳಾ ಸಂಘದ ಅಧ್ಯಕ್ಷೆ ಬಬಿತಾ, ಪುಟ್ಟಮ್ಮ, ರಾಜು, ಕಮಲ ನಟರಾಜ್ ಇತರರು ಉಪಸ್ಥಿತರಿದ್ದರು. ಇದೇ ವೇಳೆ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಅರ್ಹ ಬಗರ್‌ಹುಕುಂ ಅರ್ಜಿದಾರರಿಗೆ ಸಾಗುವಳಿ ಚೀಟಿ ನೀಡಲು ಆಗ್ರಹ

ಮೈಸೂರು, ಜ.28(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಿರುವ ಅರ್ಹ ಬಗರ್‌ಹುಕುಂ ಅರ್ಜಿದಾರರಿಗೆ ಸಾಗುವಳಿ ಚೀಟಿ ನೀಡಲು ಕ್ರಮ ಕೈಗೊಳ್ಳುವಂತೆ ಕರ್ನಾಟಕ ಭೂ ಹಕ್ಕುದಾರರ ವೇದಿಕೆಯ ಸದಸ್ಯ ಭೀಮನಹಳ್ಳಿ ಸೋಮೇಶ್ ಮನವಿ ಮಾಡಿದ್ದಾರೆ.

ಮರು ಮಂಜೂರಾತಿಗೆ ಮನವಿ ವಿರುದ್ಧ ಕ್ರಮ ಕೈಗೊಳ್ಳಿ

ಮೈಸೂರು ಜಿಲ್ಲೆಯ ಕೆಲವೆಡೆ ಈ ಹಿಂದೆ ಮಂಜೂರಾಗಿದ್ದ ಭೂಮಿಯನ್ನು ಬೇರೊಬ್ಬರಿಗೆ ಮಾರಾಟ ಮಾಡಿ, ಮತ್ತೆ ಅದೇ ಭೂಮಿಗೆ ಸಾಗುವಳಿ ನೀಡುವಂತೆ ಅರ್ಜಿ ಹಾಕಿರುವವರ ಸಂಖ್ಯೆ ಹೆಚ್ಚಾಗಿದೆ. ಮರು ಮಂಜೂರಾತಿಗೆ ಅರ್ಜಿ ಸಲ್ಲಿಸಿರುವವರ ವಿರುದ್ಧ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಎರಡೆರಡು ಬಾರಿ ಭೂಮಿ ಮಂಜೂರು ಮಾಡಿಸಿಕೊಂಡಿರುವವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಕರ್ನಾಟಕ ಭೂ ಹಕ್ಕುದಾರರ ವೇದಿಕೆ ಬೆಂಬಲಿಸುತ್ತದೆ. ಮಂಜೂರಾದ ಭೂಮಿ ಮಾರಾಟ ಮಾಡಿ, ಮತ್ತೆ ಅರ್ಜಿ ಸಲ್ಲಿಸುವವರಿಗೂ ವೇದಿಕೆ ಬೆಂಬಲ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯ ಏಳು ತಾಲೂಕುಗಳಲ್ಲಿ ಕಳೆದ 50–60 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ 32,132 ಮಂದಿ ಸಾಗುವಳಿ ಚೀಟಿ ನೀಡುವಂತೆ ಬಗರ್‌ಹುಕುಂ ಅರ್ಜಿ ಸಲ್ಲಿಸಿದ್ದಾರೆ. ಅದರಲ್ಲಿ ಹೆಚ್.ಡಿ. ಕೋಟೆ, ಸರಗೂರು ತಾಲೂಕಿನಲ್ಲಿ ಭೂ ಸಕ್ರಮೀಕರಣಕ್ಕಾಗಿ 9 ಸಾವಿರ ಮಂದಿ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಅಧಿಕಾರಿಗಳು ಎರಡೂ ತಾಲೂಕಿನಿಂದ 7 ಸಾವಿರ ಅರ್ಜಿಗಳನ್ನು ಭೂಮಿಯೇ ಇಲ್ಲ ಎಂದು ತಿರಸ್ಕರಿಸಿದ್ದಾರೆ. ಅರ್ಜಿದಾರರು ಉಳುಮೆ ಮಾಡುತ್ತಿದ್ದರೂ ಭೂಮಿ ಇಲ್ಲ ಎಂದು ಅರ್ಜಿ ತಿರಸ್ಕರಿಸಿರುವುದು ಸರಿಯಲ್ಲ. ನೈಜ ಸ್ಥಿತಿ ಅರಿಯಲು ಕಂದಾಯ ಮತ್ತು ಅರಣ್ಯ ಇಲಾಖೆ ಜಂಟಿ ಬಗರ್‌ಹುಕುಂ ಅರ್ಜಿದಾರರು ಮುಂದೊಂದು ದಿನ ಭೂಮಿಯ ಹಕ್ಕು ಸಿಗುತ್ತದೆ ಎಂಬ ಆಶಾಭಾವನೆಯಲ್ಲಿದ್ದಾರೆ. ಆದರೆ, ಅಧಿಕಾರಿಗಳು ಪರಿಸ್ಥಿತಿ ಅವಲೋಕಿಸದೆ ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ. ಅಲ್ಲದೆ, ಮತ್ತಷ್ಟು ಅರ್ಜಿಗಳನ್ನು ಅರಣ್ಯ ಇಲಾಖೆಗೆ ಸೇರಿದ ಜಾಗ ಎಂದು ಸಬೂಬು ನೀಡಿ ತಿರಸ್ಕರಿಸುವ ಸಂಚು ನಡೆಯುತ್ತಿದೆ ಎಂದರು.

ಹೆಚ್.ಡಿ.ಕೋಟೆ, ಸರಗೂರು ತಾಲೂಕಿನಲ್ಲಿ ಮಾತ್ರ ಭೂ ಸಕ್ರಮೀಕರಣ ಸಮಿತಿ ರಚನೆಯಾಗಿದೆ. ಶಾಸಕ ಅನಿಲ್ ಚಿಕ್ಕಮಾದು ಅವರ ಸಹಕಾರದಿಂದ ತಾಲೂಕಿನಲ್ಲಿ 47 ರೈತರಿಗೆ ಸಾಗುವಳಿ ಚೀಟಿ ನೀಡಲಾಗಿದೆ. ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಭೂ ಸಕ್ರಮೀಕರಣ ಸಮಿತಿ ರಚಿಸಬೇಕು. ಆ ಮೂಲಕ ಸತ್ಯಾಸತ್ಯತೆ ಪರಿಶೀಲಿಸಿ ಬಗರ್‌ಹುಕುಂ ಅರ್ಜಿ ಸಲ್ಲಿಸಿರುವವರಿಗೆ ಸಾಗುವಳಿ ಚೀಟಿ ನೀಡಬೇಕು. ಜಿಲ್ಲೆಯಲ್ಲಿ ಸಲ್ಲಿಕೆಯಾದ 32,132 ಅರ್ಜಿಗಳಿಂದ ಸುಮಾರು 80 ಸಾವಿರ ಹೆಕ್ಟೇರ್ ಭೂಮಿ ಒಳಗೊಂಡಿದೆ ಎಂದು ಅಂದಾಜಿಸಲಾಗಿದೆ. ಕೆಲವು ಅರ್ಜಿದಾರರು 2 ಎಕರೆ, ಕೆಲವರು 3–4 ಎಕರೆಗೆ ಸಾಗುವಳಿ ಚೀಟಿ ನೀಡುವಂತೆ ಅರ್ಜಿಸಲ್ಲಿಸಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಭೂ ಹಕ್ಕುದಾರರ ವೇದಿಕೆ ಸದಸ್ಯರಾದ ವೆಂಕಟಬೋವಿ, ಶಿವಲಿಂಗಯ್ಯ ಯಶವಂತಪುರ, ಚೆಲುವರಾಜು ಹುಣಸೂರು, ದಯಾನಂದ್ ನಂಜನಗೂಡು ಇದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರಾಯಲ್ (ಕ): ಬೆ.10.15ಕ್ಕೆ, ಮ.1.15ಕ್ಕೆ, ರಾ.7.15ಕ್ಕೆ, ಎಮರ್ಜೆನ್ಸಿ (ಹಿಂ): ಸಂ.4.15ಕ್ಕೆ, ಭೂ ಮಂತರ್ (ಕ): ರಾ.10.10ಕ್ಕೆ.
ಸ್ಕ್ರೀನ್ 2	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.10.35ಕ್ಕೆ, ಕುಟುಂಬಸ್ಥನ್ (ತ): ಮ.1ಕ್ಕೆ, ಸಂಕ್ರಾಂತಿಕಿ ವಸ್ತುನಾಂ (ತೆ): ಸಂ.4.05ಕ್ಕೆ, ಭೂ ಮಂತರ್ (ಕ): ರಾ.7.05ಕ್ಕೆ, ಟ್ವೈಲೈಟ್ ಆಫ್ ದಿ ವಾರಿಯರ್ಸ್ ವಾಲ್ಡ್ ಇನ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.10.25ಕ್ಕೆ, ಮಿ. ಹೌಸ್‌ಕೀಪಿಂಗ್ (ತ): ಮ.1.05ಕ್ಕೆ, ರಾಮಾಯಣ ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ (ಹಿಂ): ಸಂ.4.10ಕ್ಕೆ, ರುದ್ರ ಗರುಡ ಪುರಾಣ (ಕ): ರಾ.7.05ಕ್ಕೆ, ಡೊಮಿನಿಕ್ ಆಂಡ್ ದಿ ಲೇಡಿಸ್ ಪರ್ಸ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.20ಕ್ಕೆ, ಮ್ಯಾಕ್ಸ್ (ಕ): ಮ.1.20ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್


ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಂಡೂರು ಸೋಲಿಗೆ ಶ್ರೀರಾಮುಲು ಕಾರಣ; ಜನಾರ್ದನ ರೆಡ್ಡಿ ಆರೋಪಕ್ಕೆ ಖಂಡನೆ

ಮೈಸೂರು, ಜ.28(ಎಂಟಿವೈ)– ಸಂಡೂರು ಉಪ ಚುನಾವಣೆಯಲ್ಲಿ ಬಿಜೆಪಿ ಸೋಲಲು ಮಾಜಿ ಸಚಿವ ಶ್ರೀರಾಮುಲು ಅವರೇ ಕಾರಣ ಎಂದು ಶಾಸಕ ಜನಾರ್ದನರೆಡ್ಡಿ ಆರೋಪಿಸಿ, ಅವರ ತೇಜೋವಧೆಗೆ ಯತ್ನಿಸಿರುವುದನ್ನು ಮಹರ್ಷಿ ವಾಲ್ಮೀಕಿ ಗುರುಕುಲ ಸೇವಾ ಟ್ರಸ್ಟ್ ಖಂಡಿಸುತ್ತದೆ ಎಂದು ಸಮುದಾಯದ ಮುಖಂಡ ಶ್ರೀನಿವಾಸನಾಯಕ ತಿಳಿಸಿದ್ದಾರೆ.



ಶ್ರೀರಾಮುಲು



ಜನಾರ್ದನ ರೆಡ್ಡಿ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀರಾಮುಲು ಅವರು ನಾಯಕ ಸಮುದಾಯದ ಪಕ್ಷಾತೀತ ಪ್ರಭಾವಿ ನಾಯಕರಾಗಿದ್ದಾರೆ. ಅವರ ಬಗ್ಗೆ ಇಲ್ಲಸಲ್ಲದ ಹೇಳಿಕೆ ನೀಡುವುದನ್ನು ಸಹಿಸಲು ಸಾಧ್ಯವಿಲ್ಲ. ಜೊತೆಗೆ ಬಿಜೆಪಿ ವರಿಷ್ಠರು ಶ್ರೀರಾಮುಲು ಅವರಿಗೆ ಸೂಕ್ತ ಸ್ಥಾನಮಾನ ನೀಡದೇ ಇರುವುದು ಖಂಡನೀಯ. ಸುಳ್ಳು ಆರೋಪ ಮಾಡುತ್ತಿರುವ ಜನಾರ್ಧನ ರೆಡ್ಡಿ ಅವರು ಸುಮ್ಮನಾಗದೇ ಇದ್ದರೆ, ಮುಂದಿನ ದಿನಗಳಲ್ಲಿ ಶ್ರೀರಾಮುಲು ಅಭಿಮಾನಿಗಳು ಜನಾರ್ದನ ರೆಡ್ಡಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

2019 ರ'ಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಪ್ರಮುಖ ಕಾರಣ ರಮೇಶ್ ಜಾರಕಿಹೊಳಿ ಅವರಾಗಿದ್ದಾರೆ. ಆದರೆ ಅಧಿಕಾರಕ್ಕೆ ಬಂದ ಆರು ತಿಂಗಳಿ ನಲ್ಲಿಯೇ ಅವರನ್ನು ಕಡೆಗಣಿಸಲಾಯಿತು. ಇವನ್ನೆಲ್ಲ ಗಮನಿಸಿದಾಗ ಬಿಜೆಪಿಯ ಕೆಲ ಮುಖಂಡರು ನಾಯಕ ಸಮುದಾಯದ ರಾಜಕಾರಣಿಗಳನ್ನು ಮುಗಿಸುವ ಹುನ್ನಾರ ನಡೆಸುತ್ತಿರುವುದು ಗೋಚರವಾಗುತ್ತದೆ. ಇದೇ ಪರಿಸ್ಥಿತಿ ಮುಂದುವರಿದರೆ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸಹ ಅಧಿಕಾರಕ್ಕೆ ಬರಲು ಸತೀಶ್ ಜಾರಕಿಹೊಳಿ ಕೊಡುಗೆ ಅಪಾರವಾಗಿದೆ. ಆದರೆ ಇವರಿಗೂ ಸೂಕ್ತ ಸ್ಥಾನಮಾನ ನೀಡದೇ ಇರುವುದು ಸರಿಯಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಮಹರ್ಷಿ ವಾಲ್ಮೀಕಿ ಗುರುಕುಲ ಸೇವಾ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ದ್ಯಾವಪ್ಪನಾಯಕ, ರಾಜು ಮಾರ್ಕೆಟ್, ನಾರಾಯಣನಾಯಕ ಮಯೂರ, ವಿನೋದ ನಾಗವಾಲ ಇದ್ದರು.

ಮಹಾ ಕುಂಭಮೇಳ ವಿಶೇಷ ರೈಲಿನ ಮೇಲೆ ಕಲ್ಲು ತೂರಾಟ; ಬಾಗಿಲು ಬಂದ್, ಪ್ರಯಾಣಿಕರ ಆಕ್ರೋಶ

ಹರ್ಪಾಲ್ಪುರ, ಜ.28– ಮಹಾ ಕುಂಭಮೇಳ ವಿಶೇಷ ರೈಲಿನ ಮೇಲೆ ಕಲ್ಲು ತೂರಾಟ ನಡೆದಿರುವ ಘಟನೆ ಮಂಗಳವಾರ ವರದಿಯಾಗಿದ್ದು, ರೈಲಿನ ಬಾಗಿಲುಗಳು ಬಂದ್ ಆದ ಹಿನ್ನೆಲೆಯಲ್ಲಿ ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಝಾನ್ಸಿಯಿಂದ ಪ್ರಯಾಗ್‌ರಾಜ್‌ಗೆ ಪ್ರಯಾಣಿಸುತ್ತಿದ್ದ ವಿಶೇಷ ರೈಲಿನಲ್ಲಿ ಹರ್ಪಾಲ್‌ಪುರ ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್‌ನಲ್ಲಿ ಕಲ್ಲು ತೂರಾಟ ನಡೆದಿದೆ. ರೈಲು ಹತ್ತಲು ಕಾಯುತ್ತಿದ್ದ ಪ್ರಯಾಣಿಕರು ಬೋಗಿಗಳ ಬಾಗಿಲುಗಳು ಲಾಕ್ ಆಗಿರುವುದನ್ನು ಕಂಡು ಆಕ್ರೋಶಗೊಂಡಿದ್ದಾರೆ. ಬಾಗಿಲು ತೆಗೆಯಿರಿ ನಾವು ಹತ್ತಬೇಕು ಎಂದು ಹೇಳಿದರೂ ಯಾರೂ ಕೂಡ ಬಾಗಿಲು ತೆರೆದಿಲ್ಲ. ಇದರಿಂದ ಆಕ್ರೋಶಗೊಂಡ ಪ್ರಯಾಣಿಕರು ಕಲ್ಲು ತೂರಾಟ ನಡೆಸಿದ್ದಾರೆ.


ಸಾಮಾಜಿಕ ಮಾಧ್ಯಮಗಳಲ್ಲಿ ಈ ಕುರಿತ ವಿಡಿಯೋ ಪ್ರಸಾರವಾಗುತ್ತಿದ್ದು, ವೀಡಿಯೊಗಳಲ್ಲಿ ಆಕ್ರೋಶಿತರು ರೈಲಿನ ಮೇಲೆ ಕಲ್ಲು ಎಸೆದು ಅದರ ಕಿಟಕಿಗಳನ್ನು ಒಡೆದುಹಾಕುತ್ತಿರುವುದನ್ನು ತೋರಿಸಲಾಗಿದೆ. ಈ ವೇಳೆ ರೈಲಿನಲ್ಲಿದ್ದ ಇತರೆ ಪ್ರಯಾಣಿಕರು ಭಯದಿಂದ ಕಿರುಚುತ್ತಿದ್ದಾರೆ.

ಅತಿಯಾದ ಜನ: ಇನ್ನು ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಕ್ಕಾಗಿ ಈ ವಿಶೇಷ ರೈಲನ್ನು ಓಡಿಸಲಾಗುತ್ತಿದೆ. ಇದು ದೇಶಾದ್ಯಂತ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಆದರೆ ಕುಂಭಮೇಳಕ್ಕೆ ಹೋಗುವ ರೈಲುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ಹತ್ತುತ್ತಿರುವುದರಿಂದ ರೈಲಿನಲ್ಲಿ ಸ್ಥಳಾವಕಾಶದ ಕೊರತೆ ಎದುರಾಗುತ್ತಿದೆ. ಇದೇ ಕಾರಣಕ್ಕೆ ಕೆಲ ಕಿಡಿಗೇಡಿಗಳು ರೈಲು ನಿಲ್ದಾಣ ತಲುಪಿದರೂ ರೈಲಿನ ಬಾಗಿಲುಗಳನ್ನು ಬಂದ್ ಮಾಡುತ್ತಿದ್ದಾರೆ. ಇದು ಇತರೆ ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಗುತ್ತಿದೆ.

ಹರ್ಪಾಲ್‌ಪುರ ಪೊಲೀಸ್ ಠಾಣೆಯ ಉಸ್ತುವಾರಿ ಪುಷ್ಪ್ ಶರ್ಮಾ ಅವರು ಮಾತನಾಡಿ, ರೈಲು ಬೆಳಗಿನ ಜಾವ 2 ಗಂಟೆ ಸುಮಾರಿಗೆ ರೈಲು ನಿಲ್ದಾಣ ತಲುಪಿತು. ಈ ವೇಳೆ ಕೆಲವರು ರೈಲು ಹತ್ತಲು ಯತ್ನಿಸಿದ್ದಾರೆ. ಆದರೆ ಬಾಗಿಲುಗಳು ಲಾಕ್ ಆಗಿದ್ದರಿಂದ ಆಕ್ರೋಶಗೊಂಡು ಕಲ್ಲುಗಳನ್ನು ಎಸೆದರು. ರೈಲ್ವೆ ಪೊಲೀಸರು ಶೀಘ್ರದಲ್ಲೇ ಸ್ಥಳಕ್ಕೆ ತಲುಪಿ ಜನರನ್ನು ಶಾಂತಗೊಳಿಸಿ ಅವರನ್ನು ಪ್ರಯಾಣಕ್ಕೆ ಕಳುಹಿಸಿದರು ಎಂದು ಹೇಳಿದರು.

ಪ್ರಯಾಗ್‌ರಾಜ್‌ಗೆ ಸುಗಮ ಪ್ರಯಾಣವನ್ನು ಖಚಿತಪಡಿಸಿಕೊಳ್ಳಲು ಮತ್ತು ಅಂತಹ ಘಟನೆಗಳು ಪುನರಾವರ್ತನೆಯಾಗದಂತೆ ಸಹಕರಿಸುವಂತೆ ನಾವು ಪ್ರಯಾಣಿಕರಿಗೆ ಮನವಿ ಮಾಡಲು ಬಯಸುತ್ತೇವೆ. ಇದಕ್ಕಾಗಿ ನಾವು ವಿಶೇಷ ರೈಲುಗಳನ್ನು ಓಡಿಸುತ್ತಿದ್ದೇವೆ ಎಂದು ರೈಲ್ವೆ ವಕ್ತಾರ ಮನೋಜ್ ಸಿಂಗ್ ಹೇಳಿದರು.

ಗಣರಾಜ್ಯೋತ್ಸವ



ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್.ಪ್ರಭಾ ಅರಸ್ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಶೋಧನಾಧಿಕಾರಿ ಕೆ.ಶ್ರೀನಿವಾಸ್, ಗುಣಧರ್, ಡಾ.ಮೋಹನ್, ಹೇಮಚಂದ್ರ, ವೆಂಕಟೇಶ್ ಪ್ರಸಾದ್, ಮಮತಾ, ಆರ್. ದಾಕ್ಷಾಯಿಣಿ, ಎಂ.ಆರ್.ಮಂಜುನಾಥ, ಶ್ರೀನಿವಾಸ್, ಪುಷ್ಪಲತಾ, ಅಂಬುಜಮ್ಮಾ ಸಿದ್ಧರಾಜು, ಮನೋಜ್, ಪ್ರಮೋದ್, ಉಮೇಶ್, ರಾಜು, ಪೂಜಾ ಉಪಸ್ಥಿತರಿದ್ದರು.

ಬಜೆಟ್ ಹಿನ್ನೆಲೆಯಲ್ಲಿ ಆಮ್ ಆದ್ಮಿ ಪಾರ್ಟಿಯಿಂದ ಚಿಂತಕರ ಸಭೆ

ಮೈಸೂರು, ಜ.28– ಬಜೆಟ್ ದೃಷ್ಟಿಯಲ್ಲಿಟ್ಟುಕೊಂಡು ಆಮ್ ಆದ್ಮಿ ಪಕ್ಷದ ಮೈಸೂರು ನಗರ ಘಟಕದ ವತಿಯಿಂದ ಫೆ.2ರಂದು ಬೆಳಗ್ಗೆ 11 ಗಂಟೆಗೆ ಸರಸ್ವತಿಪುರಂನಲ್ಲಿರುವ ಜವರೇಗೌಡ ಪಾರ್ಕಿನಲ್ಲಿ ಚಿಂತಕರ ಸಭೆಯನ್ನು ಕರೆಯಲಾಗಿದೆ ಎಂದು ಎಎಪಿ ನಗರಾಧ್ಯಕ್ಷ ಸೋಮಶೇಖರ್ ತಿಳಿಸಿದ್ದಾರೆ.

ಸರ್ಕಾರ ಮುಂಬರುವ ದಿನಗಳಲ್ಲಿ ಬಜೆಟ್ ಮಂಡಿಸುತ್ತಿದ್ದು ಮೈಸೂರು ನಗರದಲ್ಲಿ ಆಗಬೇಕಿರುವ ಮತ್ತು ಬಾಕಿ ಉಳಿದಿರುವ ಕೆಲಸ ಕಾರ್ಯಗಳ ಬಗ್ಗೆ ಮುಕ್ತವಾಗಿ ಚರ್ಚಿಸಿ ಸರ್ಕಾರದ ಗಮನ ಸೆಳೆಯಲು ಈ ಸಭೆ ಕರೆಯಲಾಗಿದೆ ಎಂದು ಅವರು ಹೇಳಿದ್ದಾರೆ.

ಸಾರ್ವಜನಿಕರು, ಚಿಂತಕರು, ಪರಿಸರ ಪ್ರೇಮಿಗಳು, ಪಾರಂಪರಿಕ ತಜ್ಞರು, ಕಳಕಳಿಯುಳ್ಳ ಹಿರಿಯರು ಈ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯ, ಸಲಹೆ–ಸೂಚನೆಗಳನ್ನು ನೀಡಬಹುದಾಗಿದೆ.

ಇದನ್ನು ಆಧರಿಸಿ, ಜಿಲ್ಲಾಧಿಕಾರಿಗಳ ಮೂಲಕ ಮತ್ತು ಇ–ಮೇಲ್ ಹಾಗೂ ಪತ್ರ ಬರೆಯುವ ಮೂಲಕ ಬಜೆಟ್‌ನಲ್ಲಿ ಮೈಸೂರಿಗೆ ಆದ್ಯತೆ ನೀಡುವಂತೆ ಮನವಿ ಮಾಡಲಾಗುವುದು ಎಂದು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಚಳಿಗಾಲದ ರೇಸ್

12ನೇ ದಿನ, ಬುಧವಾರ, 29–01–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ

I. ಬಾಬಾಬುಡನ್‌ಗಿರಿ ಪ್ಲೇಟ್–1100 ಮೀ. 3 ವರ್ಷ (ಟರ್ಮ್ಸ್). ಮ.2.30ಕ್ಕೆ
1. ಪಾರ್ಕ್ ವೆಸ್ಟ್ 2. ಸಲ್ಮಾ

II. ಹಂಪಿ ಪ್ಲೇಟ್–2000 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಔರ್ಲಿ 2. ಸೆಫಿಯಂಟ್

III ವೆಸುವಿಯಸ್ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.3.30ಕ್ಕೆ
1. ಫೆಲಿಸಿಟಾ 2. ಕಂಟ್ರಿಸ್ ವರ್ಸ್

IV. ಆಂದೋಲನಾ ಟ್ರೋಫಿ–1400 ಮೀ. ರೇಟೆಡ್ 60 ಮತ್ತು ಮೇಲ್ಪಟ್ಟ. ಸಂ.4.00ಕ್ಕೆ
1. ಎಕ್ಸ್‌ಯುಬರೆನ್ಸ್ 2. ಡಿ ಗೋಲ್ಡ್ ಸ್ಟಾರ್

V. ಮಂಗಳೂರು ಪ್ಲೇಟ್– 1100 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಡಿ. ಗೋಲ್ಡನ್ ಕಪ್ 2. ಡಾಲ್ ಹೌಸಿ

VI. ಕೊಚ್ಚಿನ್ ಪ್ಲೇಟ್–1600 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಸರ್‌ಕ್ಯಾಲುಕಲನ್ 2. ನ್ಯಾಚುರಲ್ ಟೊರೊನಾಡೋ

ದಿನದ ಅತ್ಯುತ್ತಮ............ :	ಪಾರ್ಕ್ ವೆಸ್ಟ್
ಡಬ್ಬಲ್............ :	ಔರ್ಲಿ, ಎಕ್ಸ್‌ಯುಬರೆನ್ಸ್
ಜಾಕ್‌ಪಾಟ್............ :	2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್............ :	3, 4, 5 ಮತ್ತು 6
I ಟ್ರಿಬಲ್............ :	1, 2 ಮತ್ತು 3
II ಟ್ರಿಬಲ್............ :	4, 5, ಮತ್ತು 6
ಎಕ್ಸ್‌ಆಕ್ಟ್............ :	1 ರಿಂದ 6

ಟಿಪ್‌ಸ್ಟರ್ ಪಿಜಿಸಿ

ವ್ಯಸನದಿಂದ ಸಮಾಜಕ್ಕೆ ಯಾರೂ ಹೊರೆಯಾಗಬಾರದು

ತುಮಕೂರು ಸಿದ್ದಗಂಗಾ ಮಠದ ಕಿರಿಯ ಸ್ವಾಮೀಜಿ ಸಲಹೆ

ಮೈಸೂರು, ಜ.28(ಎಂಟಿವೈ)– ಸಮಾಜ ಕಟ್ಟುವ ಹೊಣೆಗಾರಿಕೆಯುಳ್ಳ ಯುವಜನತೆಯಾವುದೇ ಕಾರಣಕ್ಕೂ ವ್ಯಸನಕ್ಕೆ ಒಳಗಾಗಿ ಸಮಾಜಕ್ಕೆ ಹೊರೆಯಾಗಬಾರದು ಎಂದು ತುಮಕೂರಿನ ಶ್ರೀ ಸಿದ್ದಗಂಗಾ ಮಠದ ಕಿರಿಯ ಸ್ವಾಮೀಜಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸಲಹೆ ನೀಡಿದ್ದಾರೆ.



ಬಸವಮಾರ್ಗ ಫೌಂಡೇಶನ್ ಆಯೋಜಿಸಿದ್ದ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮವನ್ನು ಶ್ರೀ ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಉದ್ಘಾಟಿಸಿದರು.

ಮೈಸೂರಿನ ವಿಜಯನಗರದಲ್ಲಿರುವ ಬಸವಮಾರ್ಗ ಫೌಂಡೇಶನ್‌ನಲ್ಲಿ ನಡೆದ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ಕುಲವನ್ನು ಬೆಳಗಬೇಕೇ ವಿನಃ, ಕುಲ ನಾಶಕ್ಕೆ ಮುನ್ನುಡಿ ಬರೆಯಬಾರದು. ಇಂದಿನ ವೇಗದ ಜಗತ್ತಿನಲ್ಲಿ ಯುವಕರು ಮದ್ಯಪಾನ ಸೇರಿದಂತೆ ವಿವಿಧ ಚಟಗಳಿಗೆ ಬಲಿಯಾಗಿ ದಾರಿ ತಪ್ಪುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕಾಗಿದೆ. ಈ ಆತ್ಮ ಪರಮಾತ್ಮನ ಭಿಕ್ಷೆಯಾಗಿದೆ. ಆತ್ಮ ಪರಮಾತ್ಮನನ್ನು ಸೇರಿದಾಗ ಮಾತ್ರ ಮನುಷ್ಯನ ಜನ್ಮ ಪಾವನವಾಗುತ್ತದೆ. ಆದರೆ ಕುಡಿತದ ವ್ಯಸನಕ್ಕೆ ಬಲಿಯಾಗಿ ಪರಮಾತ್ಮನನ್ನು ಸೇರುವ ಮಾರ್ಗವನ್ನು ನಾವೆಲ್ಲರೂ ಮುಚ್ಚಿಕೊಳ್ಳುತ್ತಿದ್ದೇವೆ. ದೇಹ ಸದೃಢವಾಗಿಸಲು ಯೋಗ, ವ್ಯಾಯಾಮ, ಸಾತ್ವಿಕ ಆಹಾರ ನೀಡಬೇಕು. ಮನಸ್ಸು ಸದೃಢವಾಗಬೇಕಾದರೆ ಜ್ಞಾನಬೇಕು. ಆತ್ಮ ಸದೃಢವಾಗಬೇಕಾದರೆ ಭಗವಂತನನ್ನು ಸ್ಮರಿಸಬೇಕು. ಇದರಿಂದ ಜೀವನ ಪಾವನವಾಗುತ್ತದೆ ಎಂದರು.

ವ್ಯಸನಿಗಳು ಇಂದಿನಿಂದಲೇ ದೊಡ್ಡ ಸಂಕಲ್ಪವನ್ನು ಮಾಡಬೇಕು. ಮುಂದಿನ ದಿನಗಳಲ್ಲಿ ಈ ಕುಡಿತದ ದಾಸ್ಯದಿಂದ ಹೊರಬಂದು ಸಮಾಜ ಸೇವೆಗೆ ನನ್ನ ಜನ್ಮವನ್ನು ಮುಡಿಪಾಗಿ ಇಡುತ್ತೇನೆ ಎಂದು ನಿರ್ಧಾರ ಮಾಡಬೇಕು. ನಿಮ್ಮ ಹೆಂಡತಿ, ಮಕ್ಕಳು, ಸಂಸಾರವನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಸವಮಾರ್ಗ ಫೌಂಡೇಷನ್ ಸಂಸ್ಥಾಪಕ ಬಸವಣ್ಣ ಮಾತನಾಡಿ, ಮನುಷ್ಯನಿಗೆ ರೋಗ ಬಂದರೆ ಆತನಿಗೆ ಎಲ್ಲರೂ ನೆರವಾಗುತ್ತಾರೆ. ಆದರೆ ವ್ಯಸನ ಎನ್ನುವ ರೋಗಕ್ಕೆ ತುತ್ತಾದರೆ ಮನೆಯಲ್ಲೇ ಆತನಿಗೆ ಜಾಗ ಇರುವುದಿಲ್ಲ. ಆತನನ್ನು ಈ ರೋಗದಿಂದ ಗುಣಪಡಿಸಬೇಕು ಎಂದು ಕೆಲವು ಚಿಂತಿಸುವುದೂ ಇಲ್ಲ ಹಾಗಾದರೆ ಅಮಲು ರೋಗಿಗಳು ಎಲ್ಲಿ ಹೋಗಬೇಕು. ಅವರಿಗೆ ಯಾವ ಆಶ್ರಯ ಎದೆ. ಈ ನಿಟ್ಟಿನಲ್ಲಿ ಮಠ, ಮಾನ್ಯಗಳು ಅಮಲು ರೋಗಿಗಳಿಗೆ ಸಹಾಯ ಮಾಡಬೇಕು. ಸಮಾಜವನ್ನು ಸರಿ ಮಾರ್ಗದಲ್ಲಿ ಮುನ್ನಡೆಸಲು ಮಾರ್ಗದರ್ಶನ ಮಾಡಬೇಕು ಎಂದು ಮನವಿ ಮಾಡಿದರು.

ಬೇಬಿ ಬೆಟ್ಟದ ಶ್ರೀ ಶಿವಬಸವ ಸ್ವಾಮೀಜಿ, ಶ್ರೀ ಸದಾಶಿವ ಸ್ವಾಮೀಜಿ, ಕಾಯಕ ಯೋಗಿ ಫೌಂಡೇಶನ್ ಅಧ್ಯಕ್ಷ ಶಿವಕುಮಾರ್, ಲಿಂಗಾಯತ ಮಹಾಸಭಾದ ಮಂಡ್ಯ ಜಿಲ್ಲಾಧ್ಯಕ್ಷ ಎಂ.ಎಸ್.ಮಂಜುನಾಥ, ಅರ್ಚಕರ ಸಂಘದ ಮದ್ದೂರು ತಾಲೂಕು ಅಧ್ಯಕ್ಷ ಶಿವಲಿಂಗಪ್ಪ ಸೇರಿದಂತೆ ಇತರರು ಇದ್ದರು.

ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸುವ ಕುರಿತು ಪರಿಹಾರ ಮಾರ್ಗ

ಮೈಸೂರು, ಜ. 28 – ಮೈಸೂರಿನ ಹಿತೈಷಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಸುಲಭವಾಗಿ ಹೆಚ್ಚು ಅಂಕಗಳನ್ನು ಗಳಿಸುವುದು ಮತ್ತು ಪರೀಕ್ಷಾ ಭಯ ಹೋಗಲಾಡಿಸುವುದು ಹೇಗೆ? ಕುರಿತು ಗಂಭೀರ ಸಮಸ್ಯೆಗಳಿಗೆ ಪರಿಹಾರ ಮಾರ್ಗ ಗಳನ್ನು ತಿಳಿಸಿಕೊಡಲಿದ್ದಾರೆ. ಮೈಸೂರು ನಗರ ಮತ್ತು ಗ್ರಾಮಾಂತರ ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತವಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9945810480 ಸಂಪರ್ಕಿಸಬಹುದು.

ಸಾಮಾಜಿಕ ಪರಿವರ್ತನೆಯಲ್ಲಿ ಆರೋಗ್ಯ ವಿಜ್ಞಾನ, ಮೌಲ್ಯಯುತ ಶಿಕ್ಷಣದ ಪಾತ್ರ ಕುರಿತಾಗಿ ನಾಳೆ, ನಾಡಿದ್ದು

ಅಂತಾರಾಷ್ಟ್ರೀಯ ಸಮ್ಮೇಳನ

ಮೈಸೂರು, ಜ.28(ಎಂಟಿವೈ)– ಮೈಸೂರಿನ ಕೃಷ್ಣಮೂರ್ತಿ ಪುರಂನಲ್ಲಿರುವ ಶಾರದಾವಿಲಾಸ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಜ.30 ಮತ್ತು 31ರಂದು 'ಸಾಮಾಜಿಕ ಪರಿವರ್ತನೆಯಲ್ಲಿ ಆರೋಗ್ಯ ವಿಜ್ಞಾನ, ಮೌಲ್ಯಯುತ ಶಿಕ್ಷಣದ ಪಾತ್ರ' ಕುರಿತಂತೆ ಅಂತರ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಹನುಮಂತಾಚಾರ್ ಜೋಶಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾರದಾ ವಿಲಾಸ ಫಾರ್ಮಸಿ ಕಾಲೇಜು ವತಿಯಿಂದ ಆಯೋಜಿಸಿರುವ ಸಮ್ಮೇಳನವನ್ನು ಜ.30ರಂದು ಬೆಳಗ್ಗೆ 10ಕ್ಕೆ ರಾಷ್ಟ್ರೀಯ ಸಾಂಪ್ರದಾಯಿಕ ಔಷಧಗಳ ಸಂಸ್ಥೆ ನಿರ್ದೇಶಕ, ವಿಜ್ಞಾನಿ ಡಾ. ಸುಬರ್ಣ ರಾಯ್ ಉದ್ಘಾಟಿಸಲಿದ್ದಾರೆ. ಚಾಮರಾಜನಗರ ವಿಶ್ವವಿದ್ಯಾನಿಲಯದ ಉಪ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್, ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಫಾರ್ಮಾಸ್ಯುಟಿಕಲ್ ವಿಜ್ಞಾನಿ ಡಾ.ಮಿಲಿಂದ್ ಪಾರ್ಲೆ, ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್.ದಿನೇಶ್ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಈ ಸಮ್ಮೇಳನದಲ್ಲಿ ದೇಶ–ವಿದೇಶದಿಂದ 600ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಪ್ರಮುಖ 13 ಮಂದಿ ತಜ್ಞರು ವಿಷಯ ಮಂಡಿಸಲಿದ್ದಾರೆ. ಮರೆವು ರೋಗ, ಡಯಾಬಿಟಿಕ್ ರೆಟಿನೋಪತಿ ಹಾಗು ಮಧುಮೇಹ ನಿರ್ವಹಣೆ, ಹಣ್ಣುಗಳಿಂದ ದೊರೆಯುವ ಔಷಧಿಯ ಸತ್ವ ಮೊದಲಾದ ಪ್ರಮುಖ ವಿಷಯಗಳ ಸಂಶೋಧನೆ ಮೇಲೆ ಈ ವೇಳೆ ಬೆಳಕು ಚೆಲ್ಲಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್.ದಿನೇಶ್, ಡಾ.ಸತ್ಯನಾರಾಯಣ, ಡಾ.ನಗೇಂದ್ರ, ಪ್ರೊ. ವೆಂಕಟೇಶ್, ಡಾ.ಚರಣ್ ಇದ್ದರು.

ಸಿಇಟಿ: ವಿದ್ಯಾರ್ಥಿಗಳ ದೃಢೀಕರಣಕ್ಕೆ 'ಆಧಾರ್' ಬಳಕೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಿಇಟಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ದೃಢೀಕರಣಕ್ಕಾಗಿ 'ಆಧಾರ್' ಬಳಸಲು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು (ಯುಐಡಿಎಐ) ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಅನುಮತಿ ನೀಡಿದೆ.

'ಸೀಟ್ ಬ್ಲಾಕಿಂಗ್'ನಂತಹ ದಂಧೆಗೆ ಕಡಿವಾಣ ಹಾಕಲು ಈ ಬಾರಿ ಹಲವು ಸುಧಾರಣಾ ಕ್ರಮಕೈಗೊಂಡಿದ್ದ ಪ್ರಾಧಿಕಾರ, ಒಂದು ಮೊಬೈಲ್ ಸಂಖ್ಯೆಯಿಂದ ಒಟಿಪಿ ಬಳಸಿಕೊಂಡು ಒಂದು ಅರ್ಜಿ ಸಲ್ಲಿಸುವುದು ಹಾಗೂ ಮುಖಚಹರೆ ದಾಖಲಿಸುವುದನ್ನು ಕಡ್ಡಾಯಗೊಳಿಸಿತ್ತು. ಈಗ ಅಭ್ಯರ್ಥಿಗಳ ಆಧಾರ್ ದೃಢೀಕರಣಕ್ಕೂ ಅನುಮತಿ ಪಡೆದಿದೆ. ಅರ್ಜಿಯ ಜತೆಗೆ ಆಧಾರ್ ಸಲ್ಲಿಕೆ ಕಡ್ಡಾಯವಲ್ಲ. ಆದರೆ, ಮೊಬೈಲ್ ಸಂಖ್ಯೆ ಇರುವ ಆಧಾರ್ ಸಲ್ಲಿಸಿದರೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

BEFORE THE HON'BLE COURT OF THE VIII ADDITIONAL CIVIL JUDGE AND JMFC AT MYSURU

Original Suit. No. 149 of 2025

BETWEEN:

[1] Sri. Ramalinge Gowda S/O. Late. Siddegowda Aged About 65 Years - Plaintiffs
[2] Sri. Krishnegowda S/O. Late. Nanjegowda Aged About 67 Years
[3] Sri. Basavegowda S/O. Late. Sannegowda Aged About 60 Years
[4] Sri. Swamy Gowda S/O. Late. Boralinge Gowda Aged About 59 Years
[5] Sri. N. Ravi Kumar S/O. Sri. Ningaiah Aged About 44 Years
[6] Sri. H. Kiran Kumar S/O. Sri. Honnagiri Gowda, Aged About 30 Years
[7] Sri. V. Vasanth Gowda S/O. Sri. P. Venkatesh Aged About 30 Years All are Residing At, Bogadi Village, Kasaba Hobli, Mysuru Taluk & District.

AND:

{1} District Commissioner Represented By The Deputy Commissioner Office At: Giriboviya Palya Siddartha Nagara, Mysuru City - Defendants
{2} Tahasildar Office at Taluk Adalitha Soudha Nazarbad, Mysuru City
{3} Bogadi Town Panchayath Represented By the Chief Officer Office at Bogadi Village Kasaba Hobli, Mysuru Taluk.
{4} Harigiri Seva Prathistana (Reg) The Alleged Organization or Society is Represented By Its Alleged President M. Nagaraju S/o. Late. Manchaiah Age About 69 Years Residing At Door No. 986, 9th Cross Behind Government School, Bogadi, Mysuru.

PUBLIC NOTICE

The plaintiffs have preferred the above-detailed representative lawsuit seeking the relief of the declaration of title, mandatory and permanent injunction against the above-detailed defendants in respect of the immovable property detailed in the schedule mentioned infra. As the said matter is a representative suit involving public property, the Hon'ble Court has directed the plaintiffs to give notice of the institution of the suit to the general public. Thus, the public notice and interested person or persons or any society or organisation can participate in the said suit. The next date of hearing of the suit is on 01-3-2025.

SCHEDULE
DESCRIPTION OF THE PROPERTY

All that peace and parcel of the land bearing old Sy. No. 32 and New Sy. No. 349 measuring 0.25 acre [25 Guntas] situated at Bogadi village, Kasaba Hobli, Mysuru Taluk, bounded on :- East by -Land bearing Sy. No. 31
West by -Mysuru - Kendaganna Swamy Gaddige Road
North by - Mysuru - Kendaganna Swamy Gaddige Road
South by - Land bearing Sy. No. 32
Given under my hand and seal of the Hon'ble Court on this By the 27-01-2025 at Mysuru.

By the Order of the Hon'ble Court,
Sd/- Chief Administrative Officer
Principal Civil Judge and JMFC, Mysuru.

Sd/- Advocates for Plaintiffs @
H.P.M. Law Firm
No. 332, 'Shiva Shakthi Sannidhi' M.G.Road, Hinkal, Mysuru-570030., Pho. No. 9886363973.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ **ಶ್ರೀ.ಮಹಾದೇವಸ್ವಾಮಿ** ಎನ್ ಬಿನ್ ನಾಗಯ್ಯ ಮನೆ ನಂ.347, ಏಳಿಗೆಹುಂಡಿ ಗ್ರಾಮ, ಹಡಜನ ಅಂಚೆ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು ಇವರು ಅದನ್ನು ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಕ್ರಯ, ದಾನ, ಭೋಗ್ಯ, ಅಡಮಾನ, ಅನುವಂಶೀಯತೆ, ಏಲ್, ಪಾಲುದಾರಿಕೆ, ಬಾಡಿಗೆ, ಪರವಾನಗಿ ಅಥವಾ ಮತ್ಯಾವುದೇ ರೀತಿಯಲ್ಲಿ ಹಕ್ಕು ಅಥವಾ ಆಸಕ್ತಿ ಹೊಂದಿದ್ದಲ್ಲಿ ಸದರಿ ವ್ಯಕ್ತಿಯು ನನ್ನ ಈ ವಿಳಾಸಕ್ಕೆ ಸೂಕ್ತ ದಾಖಲಾತಿಗಳೊಂದಿಗೆ ಈ ದಿನದಿಂದ 15 ದಿನಗಳ ಒಳಗಾಗಿ ಸಂಪರ್ಕಿಸಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಯಾವುದೇ ವ್ಯಕ್ತಿಗಳಿಗೂ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವಾ ಆಸಕ್ತಿ ಇಲ್ಲವೆಂದು ಪರಿಗಣಿಸಲಾಗುತ್ತದೆ. ಹಾಗೂ ಮುಂದೆ ಯಾವುದೇ ಆಕ್ಷೇಪಣೆಗಳೂ ಇಲ್ಲದೇ ಇದ್ದಂತಹ ಪಕ್ಷದಲ್ಲಿ ಖರೀದಿ ಪ್ರಕ್ರಿಯೆ ಮುಂದುವರೆಸುತ್ತರೆಂತಲೂ ಮತ್ತು ಆನಂತರ ಬರುವಂತಹ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲವೆಂತಲೂ ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬರಡಿಪಾಳ್ಯ ಗ್ರಾಮಕ್ಕೆ ಸೇರಿದ ಸರ್ವೆ ನಂ.49/10 ರಲ್ಲಿ 0.02 ಗುಂಟೆ ಪೈಕಿ 0–01 ಗುಂಟೆ ಮಿಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವ: ಸರ್ವೆ ನಂ.49/6, ಪಶ್ಚಿಮ: ಸರ್ವೆ ನಂ.49/3, ಉತ್ತರ : ಬ್ಲಾಕ್ ನಂ.02, ದಕ್ಷಿಣ : ಸರ್ವೆ ನಂ.49/9.

ಮನೋಜ್ಞಣಿ. ಎಂ. ಎಂ.ಎ.ಎಲ್.ಎಲ್.ಬಿ
ವಕೀಲರು ಮತ್ತು ನೋಟರಿ
ನಂ.2761, 1ನೇ ಮಹಡಿ, ರೈಲ್ವೆ ಗೇಟ್ ರಸ್ತೆ
ಕೆ.ಜಿ. ಕೊಪ್ಪಲು, ಮೈಸೂರು
ಮೊ.ನಂ.: 9986244686/ 9353845534

ಮೈಸೂರು ಮಿತ್ರ 45 – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಜಿಲ್ಲಾ ಪಂಚಾಯಿತಿ ಮೈಸೂರು — ತಾಲ್ಲೂಕು ಪಂಚಾಯಿತಿ ಹುಣಸೂರು

ಸಿಂಗರಮಾರನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ಸಿಂಗರಮಾರನಹಳ್ಳಿ, ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ – 571189
ಇಮೇಲ್: singamaranaha.hun.mys@gmail.com ಫೋನ್: 9060308440

ಕ್ರಸಂಖ್ಯೆ: ಸಿಂಗ್ರಾಪಂ/ಮನ.ಟಿ.ಪ್ರ/2024–25

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಸಿಂಗರಮಾರನಹಳ್ಳಿ ಗ್ರಾಮ ಪಂಚಾಯಿತಿಯ 2024–25 ನೇ ಸಾಲಿನ ಮ–ನರೇಗಾ ಲೆಕ್ಕ ಶೀರ್ಷಿಕೆಯಡಿ ಸಿಂಗರಮಾರನಹಳ್ಳಿ ಗ್ರಾಮ ಪಂಚಾಯಿತಿಯ ರಾಜೀವ್ ಗಾಂಧಿ ಸೇವಾಕೇಂದ್ರ ನಿರ್ಮಾಣ ಕಾಮಗಾರಿಯ ಸಾಮಗ್ರಿ ಮೊತ್ತ ರೂ.7,13,767.85/– (ಏಳು ಲಕ್ಷದ ಹದಿಮೂರು ಸಾವಿರದ ಏಳುನೂರ ಅರವತ್ತೇಳು ರೂಪಾಯಿಗಳು)ಗಳಿಗೆ ಸಾಮಗ್ರಿ ಪೂರೈಸುವ ಸಂಬಂಧ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತ ನೋಂದಾಯಿತ ಅರ್ಹ ಸಾಮಗ್ರಿ ಸರಬರಾಜುದಾರರು ಟೆಂಡರ್ ನಲ್ಲಿ ಭಾಗವಹಿಸಬಹುದಾಗಿದೆ.

ನಿಯಮ/ಷರತ್ತುಗಳು: ಮೇಲಿನ ಕಾಮಗಾರಿಗೆ ದಿನಾಂಕ: 27.01.2025 ರಿಂದ ದಿನಾಂಕ: 05.02.2025 ರ ಸಂಜೆ 04.00 ಗಂಟೆಯೊಳಗೆ ಟೆಂಡರ್‌ಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಸದರಿ ಟೆಂಡರ್ ನಲ್ಲಿ ತಾಂತ್ರಿಕವಾಗಿ ಅರ್ಹರಾದ ಬಿಡ್ ದಾರರ ಆರ್ಥಿಕ ಬಿಡ್ ಅನ್ನು ದಿನಾಂಕ: 06.02.2025 ದಿನದಂದು ಸಂಜೆ 05.00 ಗಂಟೆಗೆ ತೆರೆಯಲಾಗುವುದು. ಸದರಿ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಟೆಂಡರ್ ದಾಖಲಾತಿಗಳಿಗಾಗಿ ಮತ್ತು ಷರತ್ತುಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಕೆಪಿಪಿಪಿ) ಮೂಲಕ ನೋಡಬಹುದಾಗಿರುತ್ತದೆ. http://kppp.karnataka.gov.in ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು. ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಹೆಚ್ಚಿನ ಮಾಹಿತಿಗೆ ಮೇಲ್ಕಂಡ ಮೊಬೈಲ್ ಅಥವಾ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಅಧ್ಯಕ್ಷರು, ಸಿಂಗರಮಾರನಹಳ್ಳಿ ಗ್ರಾಮ ಪಂಚಾಯಿತಿ, ಹುಣಸೂರು ತಾಲ್ಲೂಕು

ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಿಂಗರಮಾರನಹಳ್ಳಿ ಗ್ರಾಮ ಪಂಚಾಯಿತಿ

SILKWORM SEED PRODUCTION CENTRE, NATIONAL SILKWORM SEED ORGANIZATION CENTRAL SILK BOARD, MINISTRY OF TEXTILES, GOVT. OF INDIA, VIDYARANYAPURAM, MYSURU

CSB/NSSO/SSPC/CSP/TECH/2024-25 Date: 20.01.2024

Walk-in interview for the position of Project Assistant

A walk-in interview will be held on 07.02.2025 (Friday) at Silkworm Egg Preservation Centre, CSRTI Staff Quarters Campus, JLB Road, Vidyaranyapuram, Mysore 570 008 as shown below. Project Assistant (PA) one post will be recruited purely on a contractual basis under CSB funded project entitled **"Development of AI based Cocoon Sorting Machine for Quality Silkworm Egg & Silk Production"** for a period up to March 2026 or completion of the project, whichever is earlier under CSB terms and conditions. Qualification for the project assistant: Essential qualification: Bachelor of Science in life sciences with a minimum of 55% marks (50% for SC/ST candidates). Desirable qualification/experience: Prior experience in Silkworm Seed Production/grainage activities, Basic knowledge in computer operation, M.Sc. in Sericulture/Life Sciences. Emoluments: Rs. 15,000/- per month consolidated. Upper Age Limit: 30 years as on 01.12.2024. Age relaxation of 5 years for SC/ST, women, physically handicapped and OBC candidates as per rules. Nature of work: To test and classify mulberry cocoons based on morphological characteristics for their suitability in seed multiplication requirements. Walk-in interview will be held on **07.02.2025 at 10:00 am.** For further information, please visit the CSB website (https://csb.gov.in/).

Scientist D, SEPC, SSPC,
CSB-NSSO, Mysore